now does not possess; because, if it is merely intended that Government should be in a position to make use of the electoral rolls which are already in existence for the purpose of making arrangements with respect to the elections to the local bodies which have not taken place for an unreasonably long time, then nothing prevents the Government from making use of the roll in the sense of making it the basis upon which the election should be held; but if they seek to do away with the other formalities, such as the preliminary or the final publication of the electoral roll, then I am afraid Government would not be doing a wise thing because those publications are really part of the election arrangement and I do not think it would be in order for us to do away with those things because the result might be that the elections might be invalidated on those grounds. This point would be more clear if I advert in some detail to the relevant dates with reference to which electoral arrangements are made. The general elections to the legislative bodies in the State commenced some time in January 1952. The preparation of the electoral rolls for these elections had been taken on hand by the concerned authorities in the State many months earlier. As a matter of fact, the elections were expected to be held earlier than December 1951 by as much as a whole year. It was expected that those elections would be held some time in 1950. That was not possible for certain reasons. So the elections were postponed and they were finally held in January 1952. Even so, the preparation of the electoral rolls pertaining to those elections was made quite a few months before these elections were actually held. While it is no doubt true that the electoral rolls are required, under the provisions of the Representation of the People Act, to be kept up-to-date from time to time, it is a matter of common knowledge that so long as the keeping of the electoral rolls up-to-date is not a matter of top priority or a matter of first importance so far as the administrative work of local officials is concerned, it cannot be assumed that they would have given their first attention to keeping the electoral rolls up-to-date because, unless there is a bye-election in the offing, I do not suppose the electoral rolls would interest anybody, least of all the officers concerned in the preparation of the rolls. Now it would be reasonable to assume that in respect of the electoral rolls which were prepared some time ago and which may or may not be kept up to date during the year beginning on the first of April and ending on the 31st of March of the previous year during the whole calendar year, the actual details of the work of keeping the electoral rolls up-to-date may be taken on hand by different officers in different constituencies at about the dates most convenient to them having regard to their other preoccupations and administrative duties. If it is expected that all the rolls should be kept up to date merely because the law so prescribes and we straightway seek to make use of the rolls for the purpose of elections to the local bodies, I should think it would entail a great hardship on persons whose names may have been omitted from those lists or persons whose electoral qualifications may be the subject matter of controversy. Therefore I suggest that while Government are quite welcome, so far as I am concerned, to make use of the existing electoral rolls as the steel-frame or the skeleton with which they should prepare the full electoral rolls for the elections to the local bodies, I think they would not be right in doing away with the other formalities such as the preliminary publication of the rolls and the final publication of the rolls and the inviting of objections and the adjudication upon them for inclusion or omission of names from the rolls. That is one point.

The other point is, if the object of the Government is not to do away with these formalities but to carry out these requirements in the manner laid down in the Act relating to the Local Bodies and Municipal Councils, then do they require statutory authority to make use of electoral rolls copies of which are available in the Government Press to form the basis on which the electoral rolls for the Local Bodies elections should be prepared ? I do not think Government would be at all handicapped for want of the statutory authority which this Bill is supposed to confer up on them. That is the second point.

The other objection that has been raised by certain other Members to this Bill is that the qualifications and disqualifications mentioned in the Representation of the People Act with reference to elections to legislative bodies would also become applicable to voters who would exercise their franchise in elections to the Local Bodies and Village Panchayets.

If I heard my friend the Hon'ble Minister aright I think he said that that was the object. Sir, while it is true that the qualifications for being included in the electoral roll are more or less the same, namely, attaining of majority and not being of unsound mind or adjudged insolvent, there are, I think, quite a few difficulties to be met with regard to disqualifications. By way of illustration, I would like to mention one such case. If a person had incurred a disqualification arising out of having an interest in any contract with the Government ......

(Interruption.)

3 P.M.

Sir, a candidate will first have to be a voter. If a person cannot be a voter, he certainly cannot be a candidate. Therefore, if a person incurs certain disqualifications by reason of things done by him in his capacity as candidate, successful or unsuccessful, under the provisions of the Representation of the People Act, he may stand disqualified to have his name included in the electoral roll. Now, those disqualifications with respect to the legislature elections, may be sufficiently serious to merit such omission. But would it be reasonable to have those omnibus disqualications contained in the Representation of the People Act so as to make them applicable in the case of elections to a body like the Village Panchayet ? That, I think, would require a little clarification by the Hon'ble Minister.

Sir, it is possible to hold elections to the Local Boards simultaneously all over the State. It may be possible for the Government to see that the elections to the Local Boards are held simultaneously all over the State because the elections are to be held on the basis of indirect elections according to the provisions contained in the District Boards Act of 1952, as has been explained both by the Minister and my friend Sri Bheemappa Naik. But would it be possible to hold these elections simultaneously to all the Village Panchayets also in the State ? That is a question which, of course, it is for the Hon'ble the Revenue Minister to answer. If it is not possible to hold those elections simultaneously, then the separate preparation of the electoral roll for the particular Village Panchayet for which the election is to be held will be inevitable. That would be the position. Therefore, if Government can so arrange that elections to all the Village Panchayets are held simultaneously in the State, then it would be possible to make use of the electoral roll to the limited extent which I have already explained in great detail.

Next, with reference to the Town Municipal Council and the Minor Municipal Councils and the premier Municipal Councils, I do not know, Sir, if it is possible for the Government to hold simultaneous elections

(SRI M. V. RAMA RAO.)

to these bodies, because, the dates on which those bodies are reconstituted are different in different places as a matter of fact. It is common knowledge that Municipal Councils at different places are reconstituted on different dates, practically all through the calendar year. That being so, I do not see how Government can avoid the statutory necessity of going through all the trouble and travail of making the preliminary and final publication of the electoral roll with respect to each of these elections, although they adopt the electoral roll already in existence. Therefore, I suggest that the exact or approximate expectations of the Government with regard to the practicability of holding simultaneous elections all over the State may be stated by the Minister so that the House will be in a position to know whether the passing of this Bill would enable us to avoid delay and additional expenditure.

Mr. SPEAKER.—The House will now rise for lunch and meet again at 3-40 P.M.

The House rose for lunch at Ten minutes past Three of the Clock and met again at Forty minutes past Three of the Clock.

[Mr. Speaker in the Chair.]

Mr. SPEAKER.—Shall we take up the adjournment motion?

Sri J. MOHAMED IMAM (Jagalur).—What happened to the previous Bill?

Mr. SPEAKER.—It will be taken up the next day.

ADJOURNMENT MOTION.

Distress conditions in Chitaldrug District which have become acute during the last one week.

*Sri J. MOHAMED IMAM (Jagalur).—Mr. Speaker, I thank you for having admitted this motion of adjournment which is of paramount importance to the area that has been affected by distress. The motion runs as follows:

"That the business of this House do stand adjourned to discuss a definite matter of urgent public importance and of recent occurrence, namely, the distress conditions prevailing in the district of Chitaldrug, which have become very acute during the last one week."

Sir, I am not given to exaggeration and whatever I say, they are facts and I am placing these facts before the Government, not with a view to discredit the Government, but with a view to urge the Government to afford all relief and all help to the people living in those affected areas. Sir, the district of Chitaldrug is in a very unfortunate position. It has a very scanty and uncertain rainfall. The average rainfall per year is between fifteen and twenty inches and that is very scanty and uncertain. Secondly, there are very few irrigation projects and tanks, both major and minor. While other districts possess tanks by thousands, the district of Chitaldrug has only about three hundred tanks, both major and minor. Thirdly, this district has not the advantage or the benefit of any big reservoir. Nor has it the advantage of irrigation from any big river. So from the beginning it is in a disadvantageous position and that is why I call this district *Bengad* District as against Malnad. Last year, as you know, there was total failure of *mungar* rains in the entire district. In fact, in no portion of this district was *mungar* rains got, and secondly, there was absolute failure of *mungar* crops. It is only the *mungar* crops that can bring in abundance of grains and other food crops that are essential for the people, and thus the whole district was affected. It is true that there was *hingar* rain, the north-east monsoon, which helped to a certain extent. But this was a help for those

who possessed black cotton soil land. But, unfortunately, the percentage of black cotton soil is very little. That comes to about ten to fifteen per cent. Some taluks like Challakere, Molakalmuru, portions of Chitaldrug and Jagalur Taluk have no black cotton soil at all.

What I want to impress is this. It is only *mungaru* rains that can confer universal benefit because it is only through *mungaru* rains that both red soil and black soil in all the areas can be brought under irrigation. The red soil forms nearly 80 per cent of the cultivable area and unless red soil is brought under cultivation, there is bound to be distress and that is what happened. We were able to grow some white jola with the help of the north-east monsoon but unfortunately or fortunately most of the white jola was exported to other distress areas, particularly to Kolar. So, the situation now is this: the entire district lacks both foodgrains and fodder. Of late, *mungaru* rains have also failed in taluks like Challakere, Molakalmuru, Jagalur and Hosadurga. It is not also quite satisfactory, as I understand, in Davangere. Sowing is late; the future depends upon timely and adequate rainfall and we are not sure what the future is. The present position is this: the people, specially the agricultural population and the agricultural class and the middle classes have no work. They have no money and there is not enough of foodgrains which can be made available for them. If the rains had commenced earlier, there would have been plenty of agricultural labour, and that would have satisfied the people to a certain extent. On account of the late sowing, agricultural labour classes are denied that benefit and most of them are without work. It is a common sight for any one who tours in the Chitaldrug District to find that people from Chitaldrug are migrating from place to place in search of employment and in search of cooli. That is the position. Secondly, even though they get some cooli, foodstuffs are not readily available. The millets are not readily available and even if they are readily available, the cost of purchasing them is very high. It is sold now in the bazaar at the rate of 2 seers per rupee and this is beyond the power of every poor man to purchase. So, there is no purchasing capacity. There are no relief works and the poor people cannot get adequate wages. There is dearth of foodgrains and even if foodgrains are available, inflation has set in and they are sold at a heavy cost. I am not exaggerating the position. Especially, the labour class, the agricultural class, the cooly class are all on the verge of starvation. I know from my personal knowledge that many people from Jagalur Taluk migrated to Tungabhadra area in the hope of getting some employment there. Unless the Government took immediate steps to afford relief in the distress areas, I can predict that the people will in course of time die of starvation. Even now, it is a common sight that poorer classes and others go and collect herbs—what you call *soppu*—and some edibles like *gadde* and other things and they eat them. It is a common sight that many poor people take a meal once in two days or once in three days. So, I have given you a correct account of conditions and difficulties prevailing in these areas.

Now, what are the steps to be taken? Firstly, I submit relief works have to be started throughout the district, at least in an intensive form in the affected areas. It is true that some works have been started here and there, but they are quite inadequate. Recently, the Deputy Commissioner of Chitaldrug District called for a meeting of the Distress Relief Committee and I was present at that meeting. He said that he has got about Rs. 6 lakhs to be spent on relief works. But I regret to state that this amount is not spent readily. Vigorous and proper steps have to be taken for speedy relief and proper execution of the work and to see

(SRI J. MOHAMED IMAM.)

that these works are started in all places wherever there was need. I may also state in this connection that the money spent on relief works is not properly spent for want of proper supervision. When you spend money it must also be spent properly and wisely. The complaints are that all these works are carried on without proper supervision and without proper instructions and thus hard-earned money is being wasted away. In fact, one work was being taken near Jagalur and I was there for nearly two or three hours and 300 people were on the spot. But to my great surprise, I found that there was no single officer, either the Amildar or the Sub-Overseer or Panchayet Inspector to supervise them and give instructions to them. Immediately I sent for the Amildar. The Amildar said that he has not got necessary staff and he has only a panchayet overseer to look after the whole panchayet. I brought this to the notice of the Deputy Commissioner. He also pleaded similar inability. So, the Distress Relief Committee of Chitaldrug District passed a resolution asking the Government to sanction the necessary staff to supervise over these works. Perhaps that resolution is before the Government. What I am submitting is this: No doubt you are spending good bit of money on the relief works; but it must be spent properly and the works executed must be done correctly and in a methodical manner. On the other hand, what has been done is this: people go there; they throw some mud and do some earthwork and that becomes useless some time hence; it will not be properly executed. My suggestion is, when you take these relief works, you must sanction the necessary and adequate staff. Every work or two or three works must have necessary staff to have proper supervision and to have proper check. Otherwise, there will be wastage. Secondly, in these areas, it will not suffice, it will not solve the problem if you start two or three works. For every group of five villages, it will be necessary to start relief works to see that the people living in that area get the necessary labour. It is quite necessary. So, I request the Government to depute a Special Officer or ask the Deputy Commissioner; or the concerned Minister himself may tour the area to fix the places where the works have to be taken up. No doubt, a big list has been drawn up but by the time they sanction the estimate and by the time the work is taken up, there will be long delay and people will suffer. My suggestion is that relief work must be taken up for every five villages. Secondly, amount spent must be properly utilised and necessary staff should be provided to supervise the work and to give necessary instructions.

Now, Sir, regarding availability of foodgrains, I saw statements from the Food Minister and others that this year, the position of food is much easier and that they are holding plenty of stock. If that is so, I do not understand why there should be scarcity of foodgrains in these affected areas? You can rush those foodgrains to such of the areas wherever there is demand. Chitaldrug being an affected area, you can rush all the foodgrains to that area and see that they are distributed to all the villages. But even now, it is not readily available to the common man. People have been scrambling and struggling to get foodgrains. In the market it is sold at the rate of two seers; you can understand whether a poor man or a cooly can purchase sufficient quantity of foodgrains at the rate of two seers with his limited income. The second step that the Government should take is to rush all the millets and all the jola that are available in the State and distribute them among the poor people at a reasonable rate. I can also caution the Government not to keep the stock of jola for a long time. I understand that it is stored in open godowns. Jola is very vulnerable to insects. If you keep it for long, the

whole stock may be spoiled. So, please take immediate steps to see that jola is distributed to all the people at reasonable and concessional rate. I suggested to the Home Minister when he came to Chitaldrug to sell Jola or millet freely in the shandy. He agreed to it and it was tried in two shandies, in Jagalur and Chitaldrug. He asked me to be present on the spot and I was present on those two days. I think this is a very good move. The Amildar took care to sell to each individual three seers of jola per rupee and each man was given only one rupee worth of jola. I think 1,000 to 1,500 people took advantage of it. This afforded a great deal of relief to them and it gave them necessary foodstuffs at least for a couple of days. Selling jola in a free market is a healthy move and this policy may be pursued and tried in other shandies also. Jola may be sold in shandies but in limited quantities to deserving poor people. This has two advantages. Firstly, poor man gets the foodstuff and secondly it will to a certain extent bring down inflation. So, Sir, I request you to take a very sympathetic view about this district and if possible about the other areas also which are similarly affected. It has become a very great question. People are struggling for their existence and unless the Government take immediate steps, the consequences will be more serious. So, I request the Government to take immediate steps firstly to start relief works in all the areas at an interval for every group of five villages and secondly to sanction the necessary staff to see that the works are started immediately with proper supervision and thirdly to rush millets to affected areas and make them available to people at reasonable and favourable rates. I commend this motion for sympathetic consideration of the Government.

Mr. SPEAKER.—Motion moved:

"That the House do now adjourn."

4 P.M.

*ಶ್ರೀ ಎ. ಭೀಮಪ್ಪನಾಯಕ್ (ಮೊಳಕಾಲ್ಮುರು).—ಸ್ವಾಮಿ, ಶ್ರೀ ಇಮಾಂರವರು ತಂದಿರತಕ್ಕ ಈ ಅವಸರದ ಠರಾವನ್ನು ನಾನು ಸಂಪೂರ್ಣವಾಗಿ ಅನುಮೋದಿಸುತ್ತೇನೆ. ಅವರು ಈಗಾಗಲೇ ಇಂಥ ಒಂದು ಠರಾವಿನ ಅಗತ್ಯವೇನಿದೆಯೆಂಬುದನ್ನು ವಿಶದವಾಗಿ ತೋರಿಸಿದ್ದಾರೆ. ನಿನ್ನೆಯ ದಿವಸ ಅತಿವೃಷ್ಟಿಯ ಅನಾಹುತವನ್ನು ಸಭೆಯ ಮುಂದಿಟ್ಟರು. ಇವೊತ್ತು ಅನಾವೃಷ್ಟಿಯಿಂದ ಆಗಿರತಕ್ಕ ಅನಾಹುತವನ್ನು ಸಭೆಯ ಮುಂದಿಡತಕ್ಕ ದುರದೃಷ್ಟ ಒಂದಿದೆ. ಕಾರಣ ಇಷ್ಟೆ. ಚಿತ್ರದುರ್ಗ ಜಿಲ್ಲೆಯು 1945ನೆಯ ಇಸವಿಯಿಂದಲೂ ಅನಾವೃಷ್ಟಿಗೊಳಗಾಗಿ ಕ್ಷಾಮತಾಪದಿಂದ ಬಳಲುತ್ತಿದೆ. ಕ್ಷಾಮ ತಾಪದಿಂದ ಬಳಲುತ್ತಿರುವ ಸಂದರ್ಭದಲ್ಲಿ ಸರ್ಕಾರದವರು ಸಹಾಯವೇನಾದರೂ ಮಾಡಿದ್ದಾರೆಯೇ ಎಂದರೆ ಮಾಡಿದ್ದಾರೆ ಎಂದು ಒಪ್ಪಿಕೊಳ್ಳಲೇ ಬೇಕಾಗುತ್ತದೆ. ಹಿಂದಿನಿಂದಲೂ ಅವರು ಸಹಾಯ ಮಾಡುತ್ತಲೇ ಬಂದಿದ್ದಾರೆ, ನಿಜ. ಆದರೆ ದೇವರೇ ಕೈಬಿಟ್ಟಿರುವಾಗ ಸರ್ಕಾರದವರೇನು ಮಾಡುತ್ತಾರೆ ಎನ್ನುವ ಸ್ಥಿತಿಯಲ್ಲಿದ್ದಾರೆ. ಆದರೆ, ವಾಸ್ತವವಾಗಿ, ಸರ್ಕಾರ ಕೈಬಿಟ್ಟರೆ ಆಗ್ಗೆ ದೇವರು ತಾನು ಸಹಾಯಕ್ಕೆ ಬರುತ್ತೇನೆಂದು ಹೇಳುತ್ತಾನೆ, ಅಷ್ಟೆ. ಆದ್ದರಿಂದ ಸರ್ಕಾರ ಎಲ್ಲಿಯವರೆಗೆ ಇರುತ್ತದೆಯೋ ಅಲ್ಲಿಯವರೆಗೂ ದೇವರು ಬರುವುದಿಲ್ಲ. ಆದ್ದರಿಂದ ಸರ್ಕಾರ ಕೈಬಿಟ್ಟು ದೇವರನ್ನು ಕರೆದುಕೊಳ್ಳುವುದು ಬೇಡ.

ಆದ್ದರಿಂದ ಈ ಸಂದರ್ಭದಲ್ಲಿ ಸರ್ಕಾರ ಏನು ಮಾಡಬೇಕೆಂಬುದನ್ನು ಹೇಳುತ್ತೇನೆ. ಹೋದವರ್ಷ ಕೋಲಾರ ಜಿಲ್ಲೆಯಲ್ಲಿ ಏನು ಕೆಲಸ ಮಾಡಿದರೋ, ಅದಕ್ಕಿಂತ ಹೆಚ್ಚಿನ ಕೆಲಸವನ್ನು ಅದಕ್ಕಿಂತ ಹೆಚ್ಚಿನ ಹಣದ ವಿನಿಯೋಗಮಾಡಿ, ಅದಕ್ಕಿಂತ ಹೆಚ್ಚಿನ ಶ್ರದ್ಧೆ ವಹಿಸಿ ಇಲ್ಲಿ ಮಾಡಿದರೆ ಇಲ್ಲಿನ ಕ್ಷಾಮನಿವಾರಣೆಯಾಗುತ್ತದೆ, ಅಷ್ಟೆ. ಇಂಥ ಒಂದು ಕಾರ್ಯಕ್ರಮದಿಂದ ಈ ಅನಾವೃಷ್ಟಿಯಿಂದ ಉಂಟಾದ ಅನಾಹುತವನ್ನು ತಡೆಗಟ್ಟಬಹುದು. ಹಿಂದೊಮ್ಮೆ ಅಲ್ಲಿಗೆ ಕ್ಯಾಂಟೀನ್ ಬೇಕೇ ಎಂದು ಕೇಳಿದಾಗ ನಾನೇ ನಮ್ಮ ಜಿಲ್ಲೆಯ ಪರವಾಗಿ ಹೇಳುತ್ತಾ, 'ಕ್ಯಾಂಟೀನಿನ ಅಗತ್ಯವಿಲ್ಲ; ನಿಮ್ಮ ಧರ್ಮದ ಅನ್ನ ನಮಗೆ ಬೇಕಾಗಿಲ್ಲ, ಕೆಲಸಕೊಡಿ' ಎಂದು ಹೇಳಿದ್ದೆ. ಆದರೆ ಈಗಿನ ಪರಿಸ್ಥಿತಿಯೇನಾಗಿದೆಯೆಂದರೆ, ಹೊಟ್ಟೆಗೆ ಅನ್ನ ಸಿಕ್ಕಿದರೆ ಸಾಕು, ಧರ್ಮ ಕೊಟ್ಟರೂ ಚಿಂತೆಯಿಲ್ಲ, ಎಂದು ಹೇಳುವ ಸ್ಥಿತಿ ನಮಗೆ ಬಂದಿದೆ. ಏನೋ ಪಾಪನಿರೋಧ ಅಲ್ಲ ಜಾರಿಯಲ್ಲಿದ್ದು ಅಲ್ಲಿ ಈಚಲುಮರ ಹೇರಳವಾಗಿ ಬೆಳೆದಿದೆ. ಈ ಈಚಲು ಗೆಡ್ಡೆಯನ್ನಾದರೂ ಕಡಿದು ಜನ ಜೀವಿಸುವಂತಾಗಿದೆ. ಇದರಿಂದ ಪರಿಸ್ಥಿತಿ ಎಷ್ಟರಮಟ್ಟಿಗಿದೆಯೆಂಬುದು ಊಹಿಸಬಹುದು. ಸೊಪ್ಪುಸೆದೆಗಳನ್ನು ಜನ ತಿನ್ನುತ್ತಿದ್ದಾರೆಂದು ಶ್ರೀ ಇಮಾಂ ಸಾಹೇಬರು ಹೇಳಿದರು. ಸೊಪ್ಪುಸೆದೆಗಳನ್ನು ತಿನ್ನುತ್ತಿದ್ದಾರೆಂದರೆ 'ಎಲ್ಲರೂ ತಿನ್ನುತ್ತಿದ್ದಾರೆ, ಅದರಲ್ಲಿ ಹೆಚ್ಚೇನು' ಎಂದು ಕೆಲವರು ಹೇಳಬಹುದು. ಆದರೆ ರಾಕ್ಷಸನ ಪಟ್ಟೆಗೆಡ್ಡೆ ತಿನ್ನುವುದು, ಹುಣಸೆಬೀಜ ನೆನೆಹಾಕಿ ತಿನ್ನುವುದು ಅಲ್ಲಿನ ಜನರಿಗೆ ಸಾಧಾರಣವಾಗಿ ಹೋಗಿದೆಯೆಂದರೆ ಪರಿಸ್ಥಿತಿ ಎಷ್ಟು ಭೀಕರವಾಗಿದೆಯೆಂಬುದನ್ನು ಊಹಿಸಬಹುದು. ಇಂಥ ಸಂದರ್ಭದಲ್ಲಿ ಬರೀ ಒಂದು ಗೋ-ಕಟ್ಟೆಯನ್ನು ಕಟ್ಟುವುದೋ ಅಥವಾ ರಸ್ತೆಮಾಡಿಸುವುದೋ ಕೈಕೊಂಡು ಹಣವಿನಿಯೋಗಿಸುವುದರಿಂದ ಏನೂ ಪ್ರಯೋಜನವಿಲ್ಲ. ಇನ್ನೊಂದು ಮಳೆ ಬರುವ ವೇಳೆಗೆ ಅಂಥ ಗೋ-ಕಟ್ಟೆ

(ಶ್ರೀ ಎ. ಭೀಮಪ್ಪನಾಯಕ್.)

ಗಳೊಂದೂ ಇರುವುದಿಲ್ಲ. ಅಂಥ ಕೆಲಸಗಳನ್ನು ತೆಗೆದುಕೊಳ್ಳುವುದಕ್ಕೆ ಬದಲಾಗಿ ಖಾಯಮ್ಮಾದ ಕೆಲಸಗಳನ್ನು ಅಂದರೆ 'ಕೆರೆಹೂಳು ತೆಗೆಯುವುದು ಮುಂತಾದ' ಯಾವುದಾದರೂ ಕಲಸಗಳನ್ನು ಕೈಕೊಳ್ಳಬೇಕು.

ಇನ್ನೊಂದು ವಿಷಯವೇನೆಂದರೆ, ಶ್ರೀ ಇಮಾಂ ಸಾಹೇಬರು, ಒಂದು ನಿಯೋಜಿತ ಕಾರ್ಯಕ್ರಮದ ಪ್ರಕಾರ ಈ ಕೆಲಸಗಳನ್ನೆಲ್ಲಾ ಕೈಕೊಳ್ಳಬೇಕೆಂದು ಹೇಳಿದರು. ಒಬ್ಬ ಮನುಷ್ಯ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಹೋಗಿ ಅಲ್ಲಿ ಕೆಲಸಮಾಡಲಿ ಎನ್ನುವುದಕ್ಕೆ ಬದಲಾಗಿ, ಅವನಿರುವ ಸ್ಥಳದಲ್ಲೇ ನಾಲ್ಕೈದು ಮೈಲಿಗಳ ದೂರದಲ್ಲಿ ಕೆಲಸಮಾಡುವಂತೆ ಏರ್ಪಾಡು ಮಾಡಿದರೆ ನಾಳೆ ಮಳೆ ಬಂದಕೂಡಲೇ ತನ್ನ ಜಮೀನಿಗೆ ಬಂದು ಕೆಲಸಮಾಡಲು ಅನುಕೂಲವಾಗುತ್ತದೆ. ಹಾಗಿಲ್ಲದೆ ತುಂಗಭದ್ರಾ ಪ್ರಾಜೆಕ್ಟಿಗೋ, ಲಕ್ಕವಳ್ಳಿ ಪ್ರಾಜೆಕ್ಟಿಗೋ ಅವನನ್ನು ಹಾಕಿದರೆ ಅವನು ಅಲ್ಲಿಂದ ಪುನಃ ವಾಪಸು ಬರುವುದಕಾಗುವುದಿಲ್ಲ. ಆದ್ದರಿಂದ ಕೂಲಿಯವರು ಸಂಸಾರ ಸಂಸಾರವನ್ನೇ ದಾಟಿಸಿಕೊಂಡು ಹೋದರೆ ಪ್ರಯೋಜನವಿಲ್ಲ.

ಇನ್ನೊಂದು ಕಷ್ಟವೇನೆಂದರೆ, ನಮ್ಮ ಜಿಲ್ಲೆಯಲ್ಲಿ ಆಹಾರದ ಡಿಪೋಗಳನ್ನು ತೆಗೆದುಹಾಕಿದ್ದಾರೆ. 'ಡಿಪೋಗಳನ್ನು ತೆಗೆದುಹಾಕಿದ್ದರೂ ಬೇಕಾದಷ್ಟು ದವಸವನ್ನು ಕೋ-ಆಪರೇಟಿವ್ ಸೊಸೈಟಿಗಳವರಿಗೆ ಬೇಕಾದರೆ ಕೊಡುತ್ತೇವೆ, ಅವರು ತೆಗೆದುಕೊಂಡುಹೋಗಿ ಮಾರಾಟ ಮಾಡಲಿ' ಎಂದು ಹೇಳುತ್ತಿದ್ದೀರಿ. ಆದರೆ ನಮ್ಮ ಕಡೆ ಯಾವ ಕೋ-ಆಪರೇಟಿವ್ ಸೊಸೈಟಿಯನ್ನೇ ನೋಡಲಿ ಅಲ್ಲಿ 100 ರೂಪಾಯಿಗಳಷ್ಟು ಶಿಲ್ಕು ಕೂಡ ಇರುವುದಿಲ್ಲ. ಅಂಥದರಲ್ಲಿ ಅವರು ಆ ಹಣದಲ್ಲಿ ತಮ್ಮ ಖರ್ಚನ್ನು ಬೇರೆ ಕೈಯಿಂದ ಹಾಕಿಕೊಂಡು ಹೋಗಿ ಆ ದವಸವನ್ನು ತಂದು ಮಾರಾಟ ಮಾಡುವುದೆಂದರೆ ಹೇಗೆ! ಅಲ್ಲದೆ ವಿಲೇಜ್ ಪಂಚಾಯಿತಿಗಳಿಗೆ ಹೀಗೆ ಕೊಡುವುದಿಲ್ಲ ಎನ್ನುತ್ತಾರೆ. ಕೋ-ಆಪರೇಟಿವ್ ಸೊಸೈಟಿಗಳು ಮಾತ್ರ ತೆಗೆದುಕೊಳ್ಳಬೇಕೆಂದರೆ ಹೇಗೆ? ಇದನ್ನು ನೋಡಿ ನಮ್ಮ ಜಿಲ್ಲೆಯಲ್ಲಿ ಡೆಪ್ಯುಟಿ ಕಮೀಷನರು ವಿಲೇಜ್ ಪಂಚಾಯಿತಿಯವರು ತೆಗೆದುಕೊಂಡು ಹೋಗುವುದಕ್ಕೆ ಸಹಾಯ ಮಾಡುತ್ತೇವೆಂದೂ ಹೇಳಿದರು. ಅಷ್ಟಾದರೂ ಕೂಡ್ಕ ಹಳ್ಳಿಯವರು ತಾವೇ ಖರ್ಚು ಹಾಕಿಕೊಂಡು ಬಂದು ದವಸ ತರಬೇಕೆಂದರೆ ಕಷ್ಟವಾಗಿತ್ತು. ಅವರಲ್ಲಿಯೂ 100 ರೂಪಾಯಿಗಳಮೇಲೆ ಇರುವುದು ಅಪರೂಪ. ಒಂದು ವೇಳೆ 100 ರೂಪಾಯಿಗಳಿಗೆ ದವಸವನ್ನು ಕೊಂಡು ತಂದರೂ ಅದು ಒಂದು ದಿವಸಕ್ಕೂ ಸಾಕಾಗುವುದಿಲ್ಲ.

ಇದಲ್ಲದೆ ದರದ ಕಷ್ಟ ಬೇರೆ ಇದೆ. ಕೆಲಸಗಳನ್ನು ಮಾಡುವುದಕ್ಕೆ ಕೊಟ್ಟಾಗ ಕೂಲಿಗೆ ಬದಲಾಗಿ ದವಸವನ್ನೇ ಬೇಕಾದರೂ ಕೊಡುತ್ತೇವೆಂದೂ, ಅವರಲ್ಲೂ ರೂಪಾಯಿಗೆ ನಾಲ್ಕು ಸೇರಿನಂತೆ ಕೊಡುತ್ತೇವೆಂದೂ ನಮ್ಮ ಜಿಲ್ಲಾಧಿಕಾರಿಗಳು ಹೇಳಿದರು. ಶ್ರೀ ಇಮಾಂ ಸಾಹೇಬರು ದವಸವನ್ನು ಕೊಡುವಾಗ reasonable rateನ್ನು ಹಾಕಿ ಕೊಡಬೇಕೆಂದು ಹೇಳಿದ್ದಾರೆ. ಅವರು ಹೇಳಿದ್ದು ಸೂಕ್ತವಾಗಿದೆ. ಇಂಥ ಕ್ಷಾಮ ಪೀಡಿತ ಪ್ರದೇಶಗಳಿಗೆಲ್ಲಾ ದುಡ್ಡಿಗೆ ಬದಲಾಗಿ 4 ಸೇರಿನಂತೆ ಏನಾದರೂ ದವಸಕೊಟ್ಟರೆ ಅಲ್ಲಿನ ಜನರಿಗೆ ಅನುಕೂಲ ಮಾಡಿಕೊಟ್ಟ ಹಾಗಾಗುತ್ತದೆ. ಈಗಾಗಲೇ ಒಂದು ಸಾರಿ ಡೆಪ್ಯುಟಿ ಕಮಿಷನರೂ ಇಮಾಂ ಸಾಹೇಬರೂ ಸೇರಿ ಮಾತನಾಡಿದ್ದಮೇಲೆ 'ಸಂತೆಯಲ್ಲಿ ನಾನೇ ನಿಂತುಕೊಂಡು ದವಸವನ್ನು ಹಂಚಿಕೆ ಮಾಡುತ್ತೇವೆಂದು' ಹೇಳಿದರು. 'ಹಾಗೆ ಹಂಚಿಕೆ ಮಾಡಿದಾಗ ಚೆನ್ನಾಗಿಯೇ ಹಂಚಿಕೆಯಾಯಿತು, ಎಲ್ಲರಿಗೂ ಕಾಳು ದೊರೆಯಿತು' ಎಂದು ಹೇಳಿದರು. ಆದ್ದರಿಂದ ಇದೇ ರೀತಿಯಲ್ಲಿ ಹತ್ತಾರು ಕಡೆಗಳಲ್ಲಿ ಪ್ರತಿಯೊಂದು ಊರಿನಲ್ಲೂ ಮಾರಾಟ ಮಾಡುವುದಕ್ಕೆ ಏರ್ಪಾಡುಮಾಡಿದರೆ ಒಳ್ಳೆಯದು. ಅಲ್ಲದೆ ಸಂತೆಗಳಲ್ಲಿ—ಚಿತ್ರದುರ್ಗದ ಜಿಲ್ಲೆಯಲ್ಲಿ ನಾಲ್ಕೈದು ತಾಲ್ಲೂಕುಗಳಲ್ಲಿ ಏನಿಲ್ಲವೆಂದರೂ 100-200 ಸಂತೆಗಳಿವೆ—ಆ ಸಂತೆಗಳಿಗೆ ಲಾರಿ ಮೂಲಕ ತೆಗೆದುಕೊಂಡು ಹೋಗಿ ಜವಾಬ್ದಾರಿಯಾದ ಅಧಿಕಾರಿಗಳನ್ನು ಕಳುಹಿಸಿ ಸಂತೆಗಳಲ್ಲಿ ಮಾರಾಟ ಮಾಡಿಸುವುದಕ್ಕೆ ಏರ್ಪಾಡು ಮಾಡುವುದರಿಂದ ಜನರಿಗೂ ಸರಿಯಾಗಿ ಹಂಚಿಕೆಯಾಗುತ್ತದೆ, inflationನ್ನನ್ನು ಕೂಡ ತಪ್ಪಿಸಿದ ಹಾಗಾಗುತ್ತದೆ. ಏಕೆಂದರೆ, ಒಬ್ಬರು 2 ಸೇರು ಮಾರುತ್ತಿದ್ದರೆ, ಇನ್ನೊಬ್ಬರು 4 ಸೇರು ಮಾರುತ್ತಿದ್ದಾರೆಂದ ಕೂಡಲೆ ಅವರೂ ಕೂಡ 2½ ಸೇರಾದರೂ ಮಾರುವುದಕ್ಕೆ ಪ್ರಾರಂಭಿಸುತ್ತಾರೆ. ಆದ್ದರಿಂದ ಇಂಥ ಕ್ಷಾಮಪೀಡಿತ ಪ್ರದೇಶಗಳಲ್ಲಿ ನಾಲ್ಕು ಸೇರಿನಂತಾದರೂ ದವಸವನ್ನು ಒದಗಿಸಬೇಕು. ಬೇರೆ ಕಡೆಯಲ್ಲಿ 2 ಸೇರಿನಂತಿದೆ, ಇಲ್ಲಿಯೂ 2 ಸೇರಿನಂತೆ ಕೊಡುತ್ತೇವೆಂದರೆ ಪ್ರಯೋಜನವಿಲ್ಲ.

ಆಮೇಲೆ ರಷ್ಯನ್ ಗೋಧಿ ಬಂದಿದೆ, ಅದನ್ನು ಎಷ್ಟು ಬೇಕಾದರೂ ಕೊಡುತ್ತೇವೆಂದು ಹೇಳುತ್ತಾರೆ. ಆದರೆ ಅಲ್ಲಿ ಗೋಧಿ ತಿಂದು ಅಭ್ಯಾಸವಿರುವವರು ಯಾರೂ ಇಲ್ಲ. ಈ ಕಷ್ಟಕಾಲದಲ್ಲಿ ಗೋಧಿರೊಟ್ಟಿಗಳನ್ನು ಅವರು ಮಾಡಿಕೊಂಡು ತಪ್ಪವಿಲ್ಲದೆ ತಿಂದು ಹೊಟ್ಟೆಯ ನೋವಿನಿಂದ ನರಳುವುದಕ್ಕೆ ಬಿಡುವುದು ಸರಿಯಲ್ಲ. ಆದ್ದರಿಂದ ಈ ಗೋಧಿಯನ್ನು ಬೇರೆ ಕಡೆಗೆ ಕೊಡಿ. ಅಲ್ಲಿ ಮುಖ್ಯವಾಗಿ ರಾಗಿಹಿಟ್ಟುಮಾಡಿ ಹಂಚುವ ಕೇಂದ್ರಗಳನ್ನೂ ಜೋಳದರೊಟ್ಟಿ ಕೇಂದ್ರಗಳನ್ನೂ ಪ್ರತಿ 5 ಹಳ್ಳಿಗಳಿಗೂ ಒಂದರಂತೆ ಏರ್ಪಡಿಸಿ ಒಂದು 'planned basis' ಮೇಲೆ ಮಾಡಿದರೆ ಈ ಕಷ್ಟ ನಿವಾರಣೆಯಾಗುತ್ತದೆ ಅಷ್ಟೆ. ಏಕೆಂದರೆ, ಇನ್ನು ಅವರಿಗೆ ಮಳೆಬಂದರೂ ಜೋಳದ ಫಸಲು ಬರುವುದಿಲ್ಲ ಅಶ್ವಿನಿ, ಭರಣಿ, ಆರಿದ್ರಾ ಮಳೆಗಳೊಳಗಾಗಿ ಬಿತ್ತಿದ್ದರೇನಾದರೂ ಜೋಳದ ಫಸಲು ಬರುತ್ತದೆಯೇ ಹೊರತು, ಆಮೇಲೆ ಬಿತ್ತುವುದಕ್ಕಾಗುವುದಿಲ್ಲ. ಕೇಸರಿ ಜೋಳಕ್ಕೂ ದೊಡ್ಡ ಜೋಳಕ್ಕೂ ಎರಡಕ್ಕೂ ಬಿತ್ತನೆ ಕಾಲಹೋಯಿತು. ಈಗ ಏನಿದ್ದರೂ ಹತ್ತಿ ಬಿತ್ತಬಹುದು ಅಷ್ಟೆ. ಹಿಂಗಾರು ಜೋಳ ಹಾಕಬಹುದಲ್ಲಾ ಎಂದರೆ, ಅದೆಲ್ಲಾ ಆಗುವುದು ಎರೆಜಮೀನುಗಳಲ್ಲಿ. ನಮ್ಮ ಕಡೆ ಅಂಥ ಎರೆ ಜಮೀನಿಲ್ಲ. ಹೀಗಾಗಿ ಹೊಸದುರ್ಗ, ಹಿರಿಯೂರು, ಚಳ್ಳಕೆರೆ, ಮೊಳಕಾಲ್ಮುರು, ಚಿತ್ರದುರ್ಗ ತಾಲ್ಲೂಕುಗಳ ಅನೇಕ ಭಾಗಗಳಲ್ಲಿ ಮುಂಗಾರು ಮಳೆಯಾಗದೆ ಜೋಳ ಬಿತ್ತುವುದಕ್ಕೆ ಸಾಧ್ಯವೇ ಆಗಿಲ್ಲ.

ಇಂಥ ಸಂದರ್ಭದಲ್ಲಿ ಸರ್ಕಾರದವರು ಸುಮ್ಮನೆ ಹಣಕೊಟ್ಟಿದ್ದೇವೆಂದು ಹೇಳುವುದಕ್ಕೆ ಬದಲಾಗಿ ಆ ಸ್ಥಳಕ್ಕೆ ಹೋಗಿ ಸಾಧ್ಯವಿದ್ದರೆ ರೆವೆನ್ಯೂ ಮಂತ್ರಿಗಳೇ ಆ ಸ್ಥಳಗಳಲ್ಲಿರುವ ಪರಿಸ್ಥಿತಿಯನ್ನು ಖುದ್ದು ತಿಳಿದು ಎಲ್ಲೆಲ್ಲಿ ಕೆರೆಗಳನ್ನೋ ಕಾಲುವೆಗಳನ್ನೋ ಹಾಗೆ ಏನೇನು ಮಾಡಿಸಬಹುದೋ ಅದನ್ನು ನೋಡಿ ಪ್ರಾರಂಭಿಸಬೇಕು. ರಾಯದುರ್ಗದಿಂದ ಚಿತ್ರದುರ್ಗಕ್ಕೆ ರೈಲು ಹಾಕಬೇಕೆಂಬ ಯೋಚನೆ ಈಗ್ಗೆ ಬಹು ದಿವಸದಿಂದ ಇದೆ. ಈಗ ಬಳ್ಳಾರಿ ಬೇರೆ ನಮಗೆ ಸೇರುವುದರಿಂದ ಅಲ್ಲಿಗೂ ಇಲ್ಲಿಗೂ ಸಂಬಂಧ ಕಲ್ಪಿಸುವುದಕ್ಕಾಗಿ ಈ ರೈಲ್ವೆ

ಕೆಲಸ ಕೈಕೊಳ್ಳುವುದು ಅತ್ಯಗತ್ಯ. ಅದನ್ನು ಕೈ
ಕೊಂಡರೆ ಒಂದೆರಡುವರ್ಷ ಕೆಲಸ ನಡೆಯುತ್ತದೆ ಆದ್ದ
ರಿಂದ ಇದಕ್ಕಾಗಿ ಕೇಂದ್ರ ಸರ್ಕಾರದವರನ್ನು ಒತ್ತಾಯ
ಪಡಿಸಿ ಕೇಂದ್ರ ಸರ್ಕಾರದವರು ಈ ರೈಲ್ವೆ ಕೆಲಸ
ವನ್ನು ಕೈಕೊಳ್ಳುವುದಕ್ಕೆ ಪ್ರಯತ್ನ ಮಾಡುವಂತೆ ಮಾಡಿ
ದರೆ, ಅದರಿಂದ ಬಹಳ ಉಪಕಾರವಾಗುತ್ತದೆಂದು
ನಾನು ಈ ಸಲಹೆಯನ್ನು ಸರ್ಕಾರದವರ ಮುಂದಿಡು
ತ್ತೇನೆ.

ಅದೇ ರೀತಿ, ವೇದಾವತಿನದಿ, ಜೀನಿಗಿಹಳ್ಳ ಮುಂತಾ
ದುವುಗಳಿಗೆ ಈಗ ರೈತರುಗಳೇ ಸ್ವಂತ ಖರ್ಚಿನಿಂದ
ಉಕಾರು, ಕಾಲುವೆ ಮುಂತಾದುವುಗಳನ್ನು ಏರ್ಪಡಿಸಿ
ಕೊಂಡು ನಿರಾವರೀ ವ್ಯವಸಾಯ ಮಾಡುತ್ತಾ ಸರ್ಕಾ
ರಕ್ಕೆ ಕಂದಾಯಕೊಡುತ್ತಿದ್ದಾರೆ. ಇಂಥ ಜನಗಳಿಗೆ
ನಿರಾವರೀ ಸೌಕರ್ಯಗಳನ್ನೊದಗಿಸುವುದಕ್ಕಾಗಿ ಸರ್ಕಾರ
ದವರು ಇದುವರೆಗೂ ಆತ್ತಕಡೆ ಹೆಚ್ಚಿಗೆ ಖರ್ಚು
ಮಾಡಿಲ್ಲ. ಕೃಷ್ಣರಾಜಸಾಗರ ಮುಂತಾದ ಕಡೆಗಳಲ್ಲಿ
ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡಿರುವಂತೆ
ಇಲ್ಲಿನ ಮೈದಾನ ಡಿಸ್ಟ್ರಿಕ್ಟುಗಳಲ್ಲಿ ದೊಡ್ಡ ಜಲಾಶಯ
ಗಳನ್ನು ಕಟ್ಟಲು ಅವಕಾಶವಿಲ್ಲದಿದ್ದರೂ, ಇಲ್ಲಿಯೂ
ಅಲ್ಲಲ್ಲೇ ಜಿನುಗಿ ಹರಿಯುವ ನೀರನ್ನು ತಡೆದು ಅದ
ರಿಂದ ಕಾಲುವೆತೆಗೆದು ನಿರಾವರೀ ವ್ಯವಸಾಯಕ್ಕೆ ಅನು
ಕೂಲ ಮಾಡಿಕೊಟ್ಟರೆ ಎಷ್ಟೋ ಮಟ್ಟಿಗೆ ಫ್ಯಾಮಿನ್
ರಿಲೀಫ್ ಮಾಡಿದ ಹಾಗಾಗುತ್ತದಲ್ಲದೆ ಆ ಜನರಿಗೂ
ಒಂದು ಖಾಯಮ್ಮಾದ ಕೆಲಸಮಾಡಿಕೊಟ್ಟ ಹಾಗಾಗು
ತ್ತದೆ ಈ ದೃಷ್ಟಿಯಿಂದಲಾದರೂ ಈ ಕಾಮಗಾರಿ
ಗಳನ್ನು ಪ್ರಾರಂಭಿಸಬೇಕು.

ಅಮೇಲೆ, ಈಗ ರೆಡ್‌ಕ್ರಾಸ್ ಸಂಸ್ಥೆಯವರು
ಹಾಲುವಗೈರೆಗಳನ್ನು ಹಂಚುತ್ತಿರುವುದರ ಜೊತೆಗೆ
ಈಗ ಅಲ್ಲಿನವರಿಗೆ ಬಟ್ಟೆಯನ್ನೂ ಕೂಡ ಹಂಚುತ್ತಿ
ದ್ದಾರೆ. ವಾಸ್ತವವಾಗಿ ಅಲ್ಲಿನ ಜನರ ಸ್ಥಿತಿಯನ್ನು
ನೋಡಿದರೆ ಹೊದೆಯಲು ಬಟ್ಟೆಯೂ ಇಲ್ಲದಂಥ ಜನರು
ಅನೇಕರಿದ್ದಾರೆ. ಹೆಣ್ಣು ಮಕ್ಕಳಿಗೆ ಮಾನ ಮುಚ್ಚಿ
ಕೊಳ್ಳುವುದಕ್ಕೂ ಕಷ್ಟವಾಗಿದೆ.

ಇಂಥ ಸಂದರ್ಭದಲ್ಲಿ ಅಲ್ಲಿಯೇ ಮೊಳಕಾಲ್ಮೂರು
ವಿನಲ್ಲಿರುವ ನೇಯ್ಗೆಯವರಿಗೆ ನೂಲನ್ನು ಕೊಟ್ಟು ಅವರು
ನೂಲುವಂತೆಮಾಡಿ ಅಲ್ಲಿ ನೆಯಿದ ಬಟ್ಟೆಗಳನ್ನೇ ಈ
ಜನರಿಗೆ ಹಂಚುವಂತೆ ಮಾಡಿದರೆ, ಆ ನೇಯ್ಗೆಯವರಿಗ
ನೇಕರಿಗೆ ಕೆಲಸವೂ ಸಿಕ್ಕಿದಂತಾಗುತ್ತದೆ, ಇತ, ಎಲ್ಲ
ರಿಗೂ ಬಟ್ಟೆಯೂ ಸಿಕ್ಕಿದಂತಾಗುತ್ತದೆ. ಆದ್ದರಿಂದ
ನೀವೀಗ ಮಾಡುತ್ತಿರುವಂತೆ ಇಲ್ಲಿಂದ ಬಟ್ಟೆ ಕೊಂಡು
ತಂದು ಅಲ್ಲಿ ಹಂಚುವುದಕ್ಕೆ ಬದಲಾಗಿ ಹೊಸದುರ್ಗ,
ಮೊಳಕಾಲ್ಮೂರು ಮುಂತಾದ ಅನೇಕ ಕಡೆಗಳಲ್ಲಿ
ನೂಲಿನ ಹಂಚಿಕೆಮಾಡಿ, ಅಲ್ಲಿನ ನೇಯ್ಗೆಯವರಿಂದ
ಅದನ್ನು ಬಟ್ಟೆಗೆ ಪರಿವರ್ತನೆ ಮಾಡಿಸಿ, ಇದಕ್ಕಾಗಿ
ಸಾಧ್ಯವಿರುವ ಕಡೆಗಳಲ್ಲೆಲ್ಲಾ ನೂಲಿನ ಕೇಂದ್ರ
ಗಳನ್ನೇ ಸ್ಥಾಪನೆಮಾಡಿ ಅಲ್ಲಿಗೆ ಬೇಕಾದ ಸೌಕರ್ಯ
ಗಳನ್ನೊದಗಿಸಿಕೊಟ್ಟು ಅಲ್ಲಿ ತಯಾರಾದ ಬಟ್ಟೆಯನ್ನು
ಧರ್ಮಾರ್ಥವಾಗಿ ಎಲ್ಲರಿಗೂ ಹಂಚುವಂತೆ ಮಾಡ
ಬೇಕೆಂದು ನಾನು ಹೇಳುತ್ತೇನೆ. ಏಕೆಂದರೆ ಆ ಜನ
ರಿಗೆ ಕೊಳ್ಳಲು ಹಣವಿಲ್ಲ. ಈ ವರ್ಷ ಮಳೆ ಬಂದರೂ
ಅವರಿಗೇನೂ ಫಸಲು ಬರುವ ನಿರೀಕ್ಷಣೆಯಿಲ್ಲ.
ಮುಂಗಾರು ಬಿತ್ತನೆಯೆಲ್ಲಾ ಸಂಪೂರ್ಣವಾಗಿ
ಹೋಗಿದೆ. ಈಗ ತಡವಾಗಿ ಬಿತ್ತಿದರೂ ಅದರ
ಪೈರು ಮುಂದಿನ ಕಾರ್ತಿಕೆಗೇ ಬರುವುದು. ಅಲ್ಲದೆ
ನನಗೆ ತಿಳಿದಿರುವ ಮಟ್ಟಿಗೆ, ಪುನರ್ವಸು ಪುಷ್ಯ
ಮಳೆಗಳು ಬಂದರೂ ಆಗ ರಾಗಿ ಬಿತ್ತುತ್ತಾರೆಯೇ
ಹೊರತು ಜೋಳ ಬಿತ್ತುವುದಿಲ್ಲ. ಒಂದು ವೇಳೆ
ಜೋಳವನ್ನು ಬಿತ್ತಿದರೂ ಅದು ಜೋಲುಬಿದ್ದು ಹೋಗಿ
ಬಿಡುತ್ತದೆ. ಆದ್ದರಿಂದ ಅಲ್ಲಿನ ಜನರಿಗೆ ರೆಮಿಷನ್
ಕೊಡುವುದಕ್ಕೆ ಈಗಿನಿಂದಲೇ ನೀವು ಲೆಕ್ಕಹಾಕಿಕೊಳ್ಳ
ಬೇಕು. ಅದಿಲ್ಲದೆ ಪಹಣಿ ನೋಡುತ್ತೇವೆಂದರೆ, ಅಲ್ಲಿ
ಪಹಣಿ ಬರೆಯುವ ಹಾಗೆಯೇ ಇಲ್ಲ. ರಿಲೀಫ್ ಕಾಮ
ಗಾರಿಗಳನ್ನು ಈಗಲೇ ಅಲ್ಲಿ ತೆಗೆದುಕೊಳ್ಳಬೇಕಾಗಿದೆ.
ಮಾನ್ಯ ಮಂತ್ರಿಗಳೇ ಆತ್ತಕಡೆ ಒಮ್ಮೆ ಚೆನ್ನಾಗಿ ಪ್ರವಾಸ
ಮಾಡಿ, ಪರಿಶೀಲಿಸಬೇಕಾದ ಪ್ರಶ್ನೆಯಿದು. 'ಚೆನ್ನಾಗಿ'
ಎಂದರೆ ಮೊನ್ನೆ ಮುಖ್ಯಮಂತ್ರಿಗಳವರು ಒಂದು ಬಸ್
ಷೆಡ್ open ಮಾಡುವುದಕ್ಕೆ ಬಂದು open ಮಾಡಿ
ಕೂಡಲೆ ಬೆಂಗಳೂರಿಗೆ ಹಿಂತಿರುಗಿದಂತಲ್ಲ. ಚೆನ್ನಾಗಿ
ಅಲ್ಲೆಲ್ಲಾ ತಿರುಗಾಡಿ ಜನರ ಕಷ್ಟನಷ್ಟಗಳನ್ನು
ನೋಡಿ ಏನೇನು ಕೆಲಸಗಳನ್ನು ಮಾಡಬೇಕೆಂಬುದನ್ನು
ವಿಶದವಾಗಿ ಪರಿಶೀಲನೆಮಾಡಿ, ಅವುಗಳನ್ನೆಲ್ಲಾ
ಮಾಡಿಸುವುದಕ್ಕೆ ದುಡ್ಡಿದೆಯೇ ಎಂಬುದನ್ನು ಲೆಕ್ಕಹಾಕಿ
ಕೊಡಬೇಕು. ಈಗಾಗಲೇ ಎಷ್ಟೊಂದು ಕೊಟ್ಟಿದ್ದೇ
ವೆಂದು ಹೇಳಬಹುದು. ಆದರೆ ಅಷ್ಟುಮಾಡಿಬಿಟ್ಟರೆ
ಆಗಲಿಲ್ಲ. ಅಲ್ಲಿ ಕೆಲಸಕ್ಕೆ ಬರುವವರಿಗೆ ಒಂದು ಸನಿಕೆ
ಅಥವಾ ಗುದ್ದಲಿಯನ್ನು ತರುವುದಕ್ಕೆ ದುಡ್ಡಿರುವುದಿಲ್ಲ.
ಇಂಥಾದ್ದರಲ್ಲಿ ಸನಿಕೆ, ಗುದ್ದಲಿ ತೆಗೆದುಕೊಂಡು
ಕೆಲಸಕ್ಕೆ ಬನ್ನಿ ಎಂದು ಹೇಳಿ, ಗುದ್ದಲಿ, ಸನಿಕೆಗಳನ್ನು
ಒದಗಿಸದೆ Famine Relief works ಕೈಕೊಂಡಿ
ದ್ದೇವೆಂದರೆ ಅರ್ಥವೇನು? ಆದುದರಿಂದ ಇದನ್ನೆಲ್ಲಾ
ನೋಡಿಕೊಂಡು Tools and Plants ಚಾರ್ಜ್‌ಗಳಿ
ಗಾಗಿ ಹೆಚ್ಚಿಗೆ ಹಣವನ್ನು ಒದಗಿಸಬೇಕು. ಮಾಡುವ ಕೆಲಸ
ಗಳನ್ನು ಖಾಯಮ್ಮಾಗಿರುವಂಥ ರೀತಿಯಲ್ಲಿ ಕೆಲಸಮಾಡಿಸಿ.
ಸುಮ್ಮನೆ ಮಳೆ ಬಂದಕೂಡಲೆ ಚರಂಡಿ ಮುಚ್ಚಿಬಿಡುವ
ಕೆಲಸಗಳನ್ನು ಕೊಡುವುದಕ್ಕೆ ಬದಲಾಗಿ ಪುಕಸಟ್ಟೆ
ಅವರಿಗೆ ಹಣಕೊಡುವುದೇ ಒಳ್ಳೆಯದು. ಆದ್ದರಿಂದ
ಖಾಯಂ ಕೆಲಸಗಳನ್ನೇ ಕೈಕೊಳ್ಳಬೇಕು. ಹೇಗಿದ್ದರೂ
ಈಗ ಮಳೆಬಂದರೂ ಅವರು ಬಿತ್ತುವುದಕ್ಕಾಗುವುದಿಲ್ಲ.
ಬಿತ್ತಿದರೆ ಎರೆಯ ಭೂಮಿಯಲ್ಲಿ ಬಿತ್ತಬಹುದು, ಅಷ್ಟೆ,
ಕಲ್ಲಿನ ಭೂಮಿಯಲ್ಲಿ ಸಾಧ್ಯವಿಲ್ಲ. ಮಲೆನಾಡೆಂದರೆ
ಶಿರೆಯನಾಡು. ಆ ಕಲ್ಲಿನ ಭೂಮಿಯಲ್ಲಿ ಬಿತ್ತುವುದ
ಕ್ಕಾಗುದಿಲ್ಲ. ಆದ್ದರಿಂದ ಆಲೋಚನೆಮಾಡಿ ಖಾಯ
ಮ್ಮಾದ ಕೆಲಸಗಳನ್ನು ಕೈಕೊಂಡು ಈ ವರ್ಷವೆಲ್ಲಾ
ಕೆಲಸ ಒದಗಿಸುವುದಕ್ಕೆ ಯೋಚನೆಮಾಡಬೇಕೆಂದು
ಹೇಳುತ್ತೇನೆ.

ಶ್ರೀಮತಿ ಬಳ್ಳಾರಿ ಸಿದ್ದಮ್ಮ (ದಾವಣಗೆರೆ).—
ಸ್ವಾಮಿ, ಇದುವರೆಗೆ ಅನೇಕ ಮಹನೀಯರು ವಿವರಣೆ
ಕೊಟ್ಟು ಎಷ್ಟೋ ವಿಷಯಗಳನ್ನು ತಿಳಿಸಿದ್ದಾರೆ. ಅವು
ಗಳಲ್ಲಿಲ್ಲದೇಯಿರುವ ಒಂದೆರಡು ವಿಷಯಗಳನ್ನು ಮಾತ್ರ
ತಿಳಿಸುತ್ತೇನೆ. ನಮ್ಮ ಜಿಲ್ಲೆಯಲ್ಲಿ ಕ್ಷಾಮಪರಿಸ್ಥಿತಿ
ಮೊನ್ನೆ ಮೊನ್ನೇ ಕೂಡ ಅನುಭವಕ್ಕೆ ಬಂದಿದೆ.
ಇದೇನೂ ನಮಗೆ ಹೊಸದಲ್ಲ. ಈ ರೀತಿಯ ಕಷ್ಟ ಅನುಭ
ವಿಸುವುದು ನಮಗೆ ಅಭ್ಯಾಸವಾಗಿಬಿಟ್ಟಿದೆ. ಇದು ಸೃಷ್ಟಿ
ನಿಯಮವೆಂದು ಕಾಣುತ್ತದೆ. ನಮ್ಮಮೇಲೆ ದೇವರೇ
ಹೀಗೆ ಕೋಪ ಮಾಡಿದ್ದಾನೆಂದು ಭಾವಿಸಬಹುದು.
ಇನ್ನುಮೇಲಾದರೂ ಈ ಪರಿಸ್ಥಿತಿಬಾರದಂತೆ ತಡೆಗಟ್ಟು
ವುದಕ್ಕೆ ಏನುಮಾಡಬೇಕೆಂಬುದನ್ನು ಯೋಚಿಸಿ, ಇದಕ್ಕೆ
ಒಂದು ಯೋಜನೆಮಾಡಬೇಕೆಂದು ಶ್ರೀ ಮುಕ್ಕ
ಗೋವಿಂದರೆಡ್ಡಿಯವರು ಸೂಚನೆಮಾಡಿದರು. ಆದರೆ
ಇದು ಯಾರಿಂದಲೂ ಮಾಡಲು ಸಾಧ್ಯವಾಗದೇಯಿರುವ
ಯೋಜನೆ. ಆದರೂ ಈ ಹೊತ್ತು ತಾವು ಹಳ್ಳಿಗಳಿಗೆ
ಬಾವಿಗಳಿಂದ ನೀರೆತ್ತಲು ವಿದ್ಯುಚ್ಛಕ್ತಿಯನ್ನು ಒದಗಿಸಿ

(ಶ್ರೀಮತಿ ಬಳ್ಳಾರಿ ಸಿದ್ದಮ್ಮ.)

ಪಂಪುಗಳನ್ನು ಹಾಕುತ್ತೀರಿ. ಇದನ್ನಾದರೂ ಹೆಚ್ಚಾಗಿ ಕೊಟ್ಟು ಸಹಾಯಮಾಡಬೇಕೆಂದು ಅರಿಕೆಮಾಡುತ್ತೇನೆ. ಇದಕ್ಕಾಗಿ ಲಕ್ಷಾಂತರ ರೂಪಾಯಿ ಖರ್ಚುಮಾಡುತ್ತೀರಿ. ಹೀಗೆ ಮಾಡುವಾಗ ಪ್ರತಿ ಹಳ್ಳಿಗೂ ನಾಲ್ಕೈದು ಪಂಪುಗಳನ್ನು ಕೊಟ್ಟರೆ ಸಾಕು.

ಇನ್ನೊಂದು ವಿಷಯ ಶ್ರೀ ಭೀಮಪ್ಪನಾಯಕರು ಹೇಳಿದರು. ಪಂಚಾಯಿತಿ ಹಣದಿಂದ ದವಸ ಕೊಡುವುದಿಲ್ಲವೆಂದು ಹೇಳಿದರು. ಆದರೆ ಅಮಲ್ದಾರರು ಆ ರೀತಿ ಕೊಡುತ್ತೇವೆಂದು ಅಪ್ಪಣೆ ಕೊಡಿಸಿದರು! ಆದರೆ ಆಮೇಲೆ ಕೇಳಿದರೆ, ಹಾಗೆಕೊಡಲಾಗುವುದಿಲ್ಲ, ಇನ್ನೂ ನಮಗೆ ಆರ್ಡರ್ ಬಂದಿಲ್ಲವೆಂದು ಹೇಳಿದರು. ಆಗ ಪುನಃ ಹೋಗಿ ನೂರು ರೂಪಾಯಿ ಕಟ್ಟಿ ದವಸ ತೆಗೆದುಕೊಂಡು ಬಂದು ಜನರಿಗೆ ಕೊಡುವುದಕ್ಕೆ ಏರ್ಪಾಡು ಮಾಡಿದೆವು. ಈಗ ಅಲ್ಲಿ ಬಹಳ ಕಷ್ಟಪರಿಸ್ಥಿತಿ ಬಂದಿದೆ. ಮನುಷ್ಯರು ಪ್ರಾಣಗಳನ್ನುಳಿಸಿಕೊಳ್ಳುವುದಕ್ಕೂ ಸಾಧ್ಯವಾಗದೇಯಿರುವ ಸ್ಥಿತಿ ಬಂದಿದೆ. 'ಬೆಂಕಿ ಹತ್ತಿದ ಹೊತ್ತಿನಲ್ಲಿ ಬಾವಿತೆಗೆಯುವುದಕ್ಕೆ ಹೋದರು' ಎಂದು ನಮ್ಮಲ್ಲಿ ಒಂದು ನಾಣ್ಣುಡಿಯಿದೆ, ಅದರಂತೆ ಆಗುತ್ತಿದೆ ಈಗ. ಮುಖ್ಯಮಂತ್ರಿಗಳೂ ಗೃಹಮಂತ್ರಿಗಳೂ ಆ ಪ್ರದೇಶದಲ್ಲಿ ಪ್ರವಾಸಮಾಡಿ ಬಂದು ಅಲ್ಲಿನ ಕಷ್ಟವನ್ನು ಪರಿಹಾರಮಾಡುವುದಕ್ಕೆ ಏನುಮಾಡಬೇಕೆಂಬುದನ್ನು ಯೋಚಿಸಿ ತಕ್ಕ ಏರ್ಪಾಡು ಮಾಡಬೇಕೆಂದು ಅರಿಕೆಮಾಡಿಕೊಳ್ಳುತ್ತೇನೆ. ದಾವಣಗೆರೆ ತಾಲ್ಲೂಕಿನಲ್ಲಿ ಮಳೆಯಾಗಿದೆ. ಅಲ್ಲೇನೂ ಈಗ ಅಷ್ಟು ಕಷ್ಟವಿಲ್ಲ, ಏಕೆ ಹೀಗೆ ಹೇಳುತ್ತೀರಿ ಎಂದು ಸರ್ಕಾರದವರು ಕೇಳಬಹುದು. ಆದರೆ ಚಿತ್ರದುರ್ಗ ಡಿಸ್ಟ್ರಿಕ್ಟು ನನ್ನ ಡಿಸ್ಟ್ರಿಕ್ಟು. ಆ ಡಿಸ್ಟ್ರಿಕ್ಟಿನಲ್ಲಿರುವ ತೊಂದರೆಯನ್ನು ಅರಿಕೆಮಾಡಿಕೊಳ್ಳಲು ನಾನು ನಿಂತಿದ್ದೇನೆ. ಪಕ್ಕದಲ್ಲಿರುವ ನಮ್ಮ ಅಣ್ಣತಮ್ಮಂದಿರು ಕಷ್ಟಪಡುತ್ತಿದ್ದರೆ ನಾವು ಸುಮ್ಮನೆ ಕುಳಿತುಕೊಂಡು ನೋಡುವುದಕ್ಕಾಗುವುದಿಲ್ಲ. ಹೀಗಿರುವಾಗ 'ಪ್ರತಿಯೊಂದು ತಾಲ್ಲೂಕಿಗೂ ಹೋಗಿ ನೋಡಿದ್ದೀರಾ, ಹಾಗೆ ನೀವು ನೋಡಿಲ್ಲ' ಎಂದು ಕೆಲವರು ಹೇಳಬಹುದು. ಆದರೆ ಕೆಲವು ತಾಲ್ಲೂಕುಗಳ ಕಷ್ಟವನ್ನು ನಾನೇ ಹೋಗಿ ನೋಡಿದ್ದೇನೆ, ಇನ್ನು ಕೆಲವನ್ನು ಕೇಳಿದ್ದೇನೆ. ಈಗ ಕೂಲಿಯ ವ್ಯವಸ್ಥೆ ಏನುಮಾಡಿದ್ದೀರೋ ಅದರಲ್ಲಿ ಕೊಡುವ ಕೂಲಿ ಬಹಳ ಕಮ್ಮಿ. ಇದು ಸಾಲುವುದಿಲ್ಲ. ಅದರಲ್ಲಿಯೂ ಈ ಕಾಲದಲ್ಲಿ ಇದು ಜೀವನಕ್ಕೆ ಏನೂ ಸಾಲದು. ಆದುದರಿಂದ ಮನುಷ್ಯನಿಗೆ ಜೀವನಕ್ಕೆ ಸಾಕಾಗುವಷ್ಟು ಕೂಲಿಕೊಡಲು ವ್ಯವಸ್ಥೆಮಾಡಬೇಕು. ಹೀಗೆ ಮಾಡಿದರೆ ಜನ ಕೆಲಸಕ್ಕೆ ಬರುತ್ತಾರೆ. ಹಾಗಿಲ್ಲದೆ, ಎಂಟಾಣೆ—ಹತ್ತಾಣೆಯಂತೆ ಕೂಲಿ ಕೊಟ್ಟರೆ ಯಾರೂ ಬರುವುದಿಲ್ಲ. ನಮ್ಮ ಡಿಸ್ಟ್ರಿಕ್ಟಿನಲ್ಲಿ ಜನರಿಗೆ ಕಷ್ಟ ಜಾಸ್ತಿಯಿದೆ. ಆದರೂ ಅವರು ಹೊಟ್ಟೆಗೆ ಬಟ್ಟೆ ಕಟ್ಟಿಕೊಂಡು ಉಪವಾಸವಿದ್ದು ಕಷ್ಟ ಅನುಭವಿಸುತ್ತಿದ್ದಾರೆ. ಕೋಲಾರ ಡಿಸ್ಟ್ರಿಕ್ಟಿನವರಿಗೆ ಬಾಯಿ ಜಾಸ್ತಿ, ಗಲಾಟೆ ಮಾಡಿದರು. ಅವರಿಗೆ ಹೆಚ್ಚು ಸಹಾಯ ಮಾಡಿದರು. ನಮ್ಮ ಡಿಸ್ಟ್ರಿಕ್ಟಿನವರು ಗಲಾಟೆಮಾಡುವುದಿಲ್ಲ, ಹೊಟ್ಟೆಗೆ ಬಟ್ಟೆ ಕಟ್ಟಿ ಸಾಯುವುದಕ್ಕೂ ಸಿದ್ಧವಾಗಿದ್ದಾರೆ. ಹೀಗಿರುವಾಗ ಅವರಿಗೆ ಕೆಲಸವನ್ನಾದರೂ ಒದಗಿಸಿಕೊಟ್ಟು ಉಪಕಾರಮಾಡಬೇಕು. ಕೈನೂಲು ಮಾಡುವುದು, ಚಾಪೆಹೆಣೆಯುವುದು ಮುಂತಾದ ಮನೆಯಲ್ಲಿ ಕುಳಿತು ಉದ್ಯೋಗಮಾಡಿ ಜೀವನಮಾಡಿಕೊಳ್ಳುವ ಕೆಲಸಗಳಿಗೆ ಅನುಕೂಲಮಾಡಲು ತಕ್ಕ ಏರ್ಪಾಡು ಮಾಡಬೇಕು. ಹೀಗೆ ಅವರಿಗೇ ಕೆಲಸ ಕೊಟ್ಟು ಅವರನ್ನು ಬದುಕಿಸುವ ವ್ಯವಸ್ಥೆಯನ್ನು ಮಾಡಬೇಕೆಂದು ಅರಿಕೆಮಾಡಿಕೊಳ್ಳುತ್ತೇನೆ. ನನಗೆ ಇಷ್ಟು ಹೇಳಲು ಅವಕಾಶಕೊಟ್ಟಿದ್ದಕ್ಕಾಗಿ, ನನ್ನ ವಂದನೆಗಳನ್ನು ಸಲ್ಲಿಸುತ್ತೇನೆ.

ಶ್ರೀ ಮಾಲ್ಕ ಗೋವಿಂದರೆಡ್ಡಿ (ಚಿತ್ರದುರ್ಗ).—ಸ್ವಾಮಿ, ಚಿತ್ರದುರ್ಗ ಜಿಲ್ಲೆಯಲ್ಲಿ ಈಗಿರತಕ್ಕ ಕ್ಷಾಮ ಪರಿಸ್ಥಿತಿ ಹೇಗಿರುತ್ತದೆಂಬುದನ್ನು ಶ್ರೀಗಳಾದ ಇಮಾಂರವರೂ ಭೀಮಪ್ಪನಾಯಕರೂ ಬಹಳ ವಿಶದವಾಗಿ ವಿವರಿಸಿದ್ದಾರೆ. ಚಿತ್ರದುರ್ಗ ಜಿಲ್ಲೆಯಲ್ಲಿ ಆಹಾರದ ಅಭಾವ ಎಷ್ಟಿದೆಯೋ ಅಷ್ಟೇ ನೀರಿನ ಅಭಾವವೂ ಅನೇಕ ಹಳ್ಳಿಗಳಲ್ಲಿದೆ. ಸರ್ಕಾರದವರು ಬಹಳ ದೊಡ್ಡದಾಗಿ ಬಾವಿಗಳಿಗಾಗಿ ಅಲ್ಲಿಗೆ 1953-54ನೆಯ ಸಾಲಿಗೆ 20 ಸಾವಿರ ರೂಪಾಯಿ ಕೊಟ್ಟಿರುವುದನ್ನು ನೋಡಿದರೆ ಬಹಳ ಆಶ್ಚರ್ಯವಾಗುತ್ತದೆ. ಇದು ಬಹಳ ಶೋಚನೀಯವಾದುದು. ಮೈಸೂರು ದೇಶದಲ್ಲಿ ಹೋದವರ್ಷ ಮುನಿಸಿಪಾಲಿಟಿಗಳಿಗೆ ನೀರು ಒದಗಿಸುವುದಕ್ಕಾಗಿ 50 ಲಕ್ಷ ರೂಪಾಯಿ ಸಾಲವಾಗಿ ಕೊಟ್ಟು ನೀರಿನ ಸಮಸ್ಯೆಯನ್ನು ಪರಿಹಾರಮಾಡುವುದಕ್ಕೆ ಸರ್ಕಾರದವರು ಪ್ರಯತ್ನಪಟ್ಟರು. ಆದರೆ ಸಂಸ್ಥಾನದಲ್ಲಿ ಶೇಕಡ 80ಕ್ಕಿಂತ ಹೆಚ್ಚಾಗಿರುವ ಹಳ್ಳಿಗಳಲ್ಲಿ ಕುಡಿಯುವ ನೀರಿಗಿರತಕ್ಕ ಸಮಸ್ಯೆಯನ್ನು ಪರಿಹಾರಮಾಡುವುದಕ್ಕೆ ಸರ್ಕಾರದವರು ಯಾವುದೊಂದು ಕಾರ್ಯಕ್ರಮವನ್ನು ತೆಗೆದುಕೊಳ್ಳದೇಯಿರುವುದು ಬಹಳ ವಿಷಾದಕರವೆಂದು ಹೇಳಬೇಕಾಗಿದೆ. ಈಗ ಚಿತ್ರದುರ್ಗ ಜಿಲ್ಲೆಯಲ್ಲಿ ಬಾವಿಗಳನ್ನು ತೋಡಿಸಲು ಪ್ರಾರಂಭವಾಗಿ ಅರ್ಧಕ್ಕೇ ನಿಲ್ಲಿಸಿರುವ ಕೆಲಸಗಳನ್ನು ಪೂರ್ತಿಮಾಡಿಸುವುದಕ್ಕೆ ಸುಮಾರು ಐದು ಲಕ್ಷ ರೂಪಾಯಿಗಳು ಬೇಕಾಗಿದೆ ಎಂದು ಅಂಕಿಅಂಶಗಳಿಂದ ಗೊತ್ತಾಗುತ್ತದೆ. ಅನೇಕ ಹಳ್ಳಿಗಳಲ್ಲಿ ಕುಡಿಯುವ ನೀರಿನ ಬಾವಿಗಳೇ ಇಲ್ಲದೆ ಅಲ್ಲಿನ ಜನ ದೂರದ ಹಳ್ಳಿಗಳಿಂದ ಅಥವಾ ತೋಟಗಳ ಬಾವಿಗಳಿಂದ ನೀರನ್ನು ತರಬೇಕಾಗಿದೆ. ಈ ಪರಿಸ್ಥಿತಿಯಿರುವುದರಿಂದ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಲು 20 ಸಾವಿರ ರೂಪಾಯಿಗಳನ್ನು ಕೊಟ್ಟರೆ ಏನೂ ಸಾಲುವುದಿಲ್ಲ. ಆ ಜಿಲ್ಲೆಗೆ ಇದಕ್ಕಾಗಿ ಐದು ಲಕ್ಷ ರೂಪಾಯಿಗಳನ್ನಾದರೂ ಕೊಟ್ಟರೆ ಕುಡಿಯುವ ನೀರಿನ ಸಮಸ್ಯೆ ಪರಿಹಾರವಾಗುತ್ತದೆ.

ಇನ್ನು ಆಹಾರಾಭಾವದ ವಿಷಯವನ್ನು ಅನೇಕರು ಹೇಳಿದ್ದಾರೆ. ಜನರಿಗೆ ಕೊಂಡುಕೊಳ್ಳುವುದಕ್ಕೆ ಶಕ್ತಿಯಿಲ್ಲದೇ ಇರುವಾಗ, ಬೇಕಾದಷ್ಟಿದೆ, ತೆಗೆದುಕೊಳ್ಳಿ ಎಂದು ಹೇಳಿದರೆ, ಅವರು ತೆಗೆದುಕೊಳ್ಳುವುದು 'ಹೇಗೆ ಸಾಧ್ಯ? ಈಗ ಚಿತ್ರದುರ್ಗ ಜಿಲ್ಲೆಯಲ್ಲಿ ಜೋಳ ಮತ್ತು ರಾಗಿಯಧಾರಣೆ ಸುಮಾರು ಒಂದು ಪಲ್ಲಕ್ಕೆ 50 ರೂಪಾಯಿಗಳ ಮೇಲಿದೆ. 60 ರೂಪಾಯಿಗಳವರೆಗೆ ಹೋಗುವ ಸಂದರ್ಭವಿದೆ. ಇದರಿಂದ ಅಲ್ಲಿ ಬಡಜನರಿಗೆ ಕೊಳ್ಳುವುದಕ್ಕೆ ಸಾಧ್ಯವಾಗುತ್ತಿಲ್ಲ. ಸರ್ಕಾರದವರು ಪಲ್ಲಕ್ಕೆ 33 ರೂಪಾಯಿಗಳಂತೆ ಸರಬರಾಯಿ ಮಾಡುವರು. ಆದರೆ ಆ ಜೋಳ ಚೆನ್ನಾಗಿಲ್ಲ. ಅದರಲ್ಲಿರುವ ಮಣ್ಣು, ಕಸವನ್ನು ನೋಡಿದರೆ 33 ರೂಪಾಯಿಗಳಿಗೆ ಕೊಟ್ಟರೂ ಕೂಡ ಅದಕ್ಕೆ 40 ರೂಪಾಯಿಗಳ ಮೇಲೆ ಬೀಳುತ್ತದೆಂದು ಲೆಕ್ಕಹಾಕಿದರೆ ಗೊತ್ತಾಗುತ್ತದೆ. ಇದನ್ನು ಬಹಳ ವಿಷಾದದಿಂದ ಹೇಳಬೇಕಾಗಿದೆ. 40 ರೂಪಾಯಿಗಳ ಧಾರಣೆಯಲ್ಲಿ ಮಾರತಕ್ಕ ಜೋಳವನ್ನು ಕೊಂಡುಕೊಂಡು ಅಲ್ಲಿರತಕ್ಕ ಜನರು ಜೀವನ ಮಾಡಬೇಕೆಂದರೆ ಸಾಧ್ಯವಿಲ್ಲ. ಅವರಿಗೆ ಶಕ್ತಿಯಿಲ್ಲ. ಆದುದರಿಂದ ರೂಪಾಯಿಗೆ ನಾಲ್ಕು ಸೇರಿನಂತೆ ಅಭಾವವಿರುವ ಕಷ್ಟ

ಏರುವಕಡೆ ಮಾರುವುದಕ್ಕೆ ಏರ್ಪಾಡು ಮಾಡಿ ಈಗಿನ ಪರಿಸ್ಥಿತಿಯಲ್ಲಿ ಸರ್ಕಾರ ಜನರ ಸಹಾಯಕ್ಕೆ ಬಾರದೇ ಇದ್ದರೆ ಅವರನ್ನು ಕಷ್ಟಕ್ಕೀಡುಮಾಡಿದಹಾಗಾಗುತ್ತದೆ. ಆದಕಾರಣ ರೂಪಾಯಿಗೆ ನಾಲ್ಕು ಸೇರಿನಂತೆ ಮಾರುವ ಏರ್ಪಾಡು ಮಾಡಬೇಕು. ಇದರಿಂದ ಸರ್ಕಾರಕ್ಕೆ ಎಷ್ಟೇ ನಷ್ಟವಾದರೂ ಮಾಡಬೇಕು.

ಚಿತ್ರದುರ್ಗ ಜಿಲ್ಲೆಯಲ್ಲಿ ಡಿಸ್ಟ್ರಿಕ್ಟ್ ರಿಲೀಫ್ ಕಮಿಟಿಯವರು ಈ ವಿಷಯವನ್ನು ಆಗಲೇ ಹೇಳಿದ್ದಾರೆ. ಯಾವುದೇ ರಿಲೀಫ್ ಕಾರ್ಯಗಳನ್ನು ಮಾಡಿದರೂ ಸಧ್ಯಕ್ಕೆ ಮಾತ್ರ ಆಗುವಂತೆ ಮಾಡಬಾರದು, ಖಾಯಂ ಆಗಿ ಮಾಡಬೇಕು. ಒಂದು ರಸ್ತೆ ಮಾಡಿಸಿದರೆ, ಅದು ಒಂದು ಮಳೆ ಬಂದರೆ ತಕ್ಷಣ ಕೊಚ್ಚಿಕೊಂಡು ಹೋಗುವಂತಿರಬಾರದು. ಸರ್ಕಾರದವರು ಸರಿಯಾಗಿ ಮಾಡಬೇಕೆಂದು ತಿಳಿಸಿದ್ದಾರೆ, ಈ ಬಗ್ಗೆ ಸರ್ಕ್ಯುಲರ್ ಏನೋ ಬಂದಿದೆ. ರಸ್ತೆ ಕೆಲಸ ಮಾಡಿಸಿದರೆ, ಅದು ಖಾಯಂ ಆಗಿರಬೇಕು. ಜಾಸ್ತಿ ಖರ್ಚಾದರೂ ಚಿಂತೆಯಿಲ್ಲ, ಕೆಲಸ ಚೆನ್ನಾಗಿ ಮಾಡಿಸಬೇಕೆಂದು ಹೇಳಿದ್ದಾರೆ; ಅದೇನೋ ಸರಿಯಾದ ಮಾರ್ಗ. ಖಾಯಂ ರಿಲೀಫ್ ಕಾಮಗಾರಿಗಳನ್ನು ಮಾಡಬೇಕೆಂದರೆ, ಅನೇಕ ಕೆಲಸಕಾರ್ಯಗಳಿವೆ, ಉದಾಹರಣೆಗೆ, ಚಿತ್ರದುರ್ಗ—ರಾಯದುರ್ಗ ರೈಲುಮಾರ್ಗ ಬಹಳ ಆವಶ್ಯಕ. ಇದರಿಂದ ನಷ್ಟವಾಗುತ್ತದೆಂದು ಹಿಂದೆ ತೀರ್ಮಾನ ಮಾಡಿದ್ದರು. ಆದರೆ ಅದು ಈಗಿನ ಪರಿಸ್ಥಿತಿಯಲ್ಲಿ ಸರಿಯಲ್ಲವೆಂದು ಒಪ್ಪಿಕೊಳ್ಳಲೇಬೇಕು. ಈ ಕೆಲಸ ಮಾಡುವುದರಿಂದ ಮೂರು ನಾಲ್ಕು ತಾಲ್ಲೂಕುಗಳಿಗೆ ಹೆಚ್ಚು ಅನುಕೂಲವಾಗುತ್ತದೆ. ಚಿತ್ರದುರ್ಗ, ಚಳ್ಳಕೆರೆ, ಮೊಳಕಾಲ್ಮುರು ಈ ಮಾರ್ಗದಲ್ಲಿ ರೈಲು ಹಾಕುವುದರಿಂದ ಬಹುಜನರಿಗೆ ಬಹಳ ಅನುಕೂಲವಾಗುತ್ತದೆ. ಆದಕಾರಣ ಸಾಧ್ಯವಾದಷ್ಟು ಇಂಡಿಯಾ ಸರ್ಕಾರದ ಮೇಲೆ ಬಲವತ್ತರವಾದ ಒತ್ತಾಯ ಹಾಕಿ ಅದನ್ನು ಜಾಗ್ರತೆ ಮಾಡಿಸಬೇಕು.

ಚಿತ್ರದುರ್ಗ ಜಿಲ್ಲೆಯಲ್ಲಿ ಅನೇಕ ಅಣೆಕಟ್ಟುಗಳನ್ನು ಕಟ್ಟಬೇಕೆಂದು ಪ್ರಜೆಗಳಿಂದ ಅಹವಾಲುಗಳು ಬರುತ್ತಿವೆ. ಬೀರೇನಹಳ್ಳಿಯ ಹತ್ತಿರ ಇರುವ ಹಳ್ಳಕ್ಕೆ ಒಂದು ಚಿಕ್ಕ ಅಣೆಕಟ್ಟು ಕಟ್ಟಿಸಿ ಎಂದು ಸರ್ಕಾರಕ್ಕೆ ಅಹವಾಲು ಬಂದಿದೆ. ಅದಕ್ಕೆ 90 ಸಾವಿರ ರೂಪಾಯಿಗಳಿಗೆ ಅಂದಾಜಾಗಿ ಅದನ್ನು ಎಂಟು ತಿಂಗಳಿಂದ ಇಟ್ಟುಕೊಂಡಿದ್ದಾರೆ. ಇದನ್ನು ಕಟ್ಟಿಸಿದರೆ ರೈತರಿಗೆ ಅನುಕೂಲವಾಗುವುದಲ್ಲದೆ ಆಹಾರ ಸಮಸ್ಯೆಯನ್ನು ಬಿಡಿಸುವುದಕ್ಕೂ ಅನುಕೂಲವಾಗುತ್ತದೆ. ಇಂಥ ಪರಿಸ್ಥಿತಿಯಲ್ಲಿ 90 ಸಾವಿರ ರೂಪಾಯಿಗಳ ಅಂದಾಜಾಗಿರುವ ಕಟ್ಟೆಯನ್ನು ಕಟ್ಟಿಸುವುದಕ್ಕೆ ಈಹೊತ್ತಿನವರೆಗೂ ಆರ್ಡರು ಕೊಟ್ಟಿಲ್ಲವೆಂದರೆ, ಇದು ಬಹಳ ವಿಷಾದದ ಸಂಗತಿ. ಚಿತ್ರದುರ್ಗ ತಾಲ್ಲೂಕು ದೊಡ್ಡಘಟ್ಟದ ಕೆರೆಯ ಕೆಳಗಿನ ನೂರಾರು ಎಕರೆ ಅಚ್ಚುಕಟ್ಟಿಗೆ ನೀರು ಸರಬರಾಯಾಗುತ್ತಿಲ್ಲ; ಹೀಗಿದ್ದರೂ ತರೀ ಕಂದಾಯ ಮಾತ್ರ ವಸೂಲಾಗುತ್ತಿದೆ. ಇದಕ್ಕೆ ಒಂದು ಚಿಕ್ಕ ಫೀಡರ್ ಚಾನಲ್ ಮಾಡಿಕೊಡಿ ಎಂದು ಜನರು ಅನೇಕ ವರ್ಷಗಳಿಂದ ಕೇಳುತ್ತಿದ್ದಾರೆ. ಇದನ್ನು ಮಾಡುವುದರಿಂದ ಆಹಾರ ಸಮಸ್ಯೆ ಪರಿಹಾರವಾಗುತ್ತದೆ, ಜನರಿಗೆ ಕೂಲಿ ಸಿಕ್ಕುವುದಕ್ಕೂ ಅನುಕೂಲವಾಗುತ್ತದೆ. ಇದಕ್ಕೆ ಸುಮಾರು 80 ಸಾವಿರ ರೂಪಾಯಿ ಖರ್ಚಾಗುತ್ತದೆ. ಇದೊಂದು ರಿಲೀಫ್ ಕಾಮಗಾರಿಯಾಗುತ್ತದೆ. ಇಂಥ ಕೆಲಸಗಳನ್ನು ತೆಗೆದುಕೊಂಡರೆ ಜನರಿಗೆ ಅನುಕೂಲವಾಗುತ್ತದೆ; ಮುಂದೆ ಆಹಾರಾಭಾವ ಕಡಮೆಯಾಗಲೂ ಸಾಧಕವಾಗುತ್ತದೆ.

ಇನ್ನು, ತಕಾವಿ ಮತ್ತು ಲ್ಯಾಂಡ್ ಇಂಪ್ರೂವ್‌ಮೆಂಟ್ ಲೋನ್‌ಗಾಗಿ 5 ಲಕ್ಷ ರೂಪಾಯಿ ಕೊಟ್ಟಿದ್ದಾರೆ. ಇದನ್ನು ಎಷ್ಟುಕೊಟ್ಟರೂ ಆ ಹಣ ವಸೂಲಾಗಿ ಮತ್ತೆ ಸರ್ಕಾರಕ್ಕೆ ಬರುತ್ತದೆ. ಇದನ್ನು ಹೆಚ್ಚು ಪ್ರಮಾಣದಲ್ಲಿ ಕೊಡುವುದರಿಂದ ಚಿಕ್ಕ ರೈತರಿಗೆ ಅನುಕೂಲವಾಗುತ್ತದೆ. ಅವರವರ ಜಮೀನುಗಳಲ್ಲಿ ಕಟ್ಟೆಗಳನ್ನು ಕಟ್ಟಿಸಿಕೊಳ್ಳುವುದಕ್ಕೂ ಜಮೀನು ಆಬಾದು ಮಾಡುವುದಕ್ಕೂ ಅನುಕೂಲವಾಗುವುದರಿಂದ, ಅಲ್ಲಿರತಕ್ಕ ಜಮೀನಿಲ್ಲದ ಕೂಲಿಯವರಿಗೂ ಕೆಲಸವನ್ನೊದಗಿಸುವುದಕ್ಕೂ ಅವಕಾಶವಾಗುತ್ತದೆ. ರೈತರು ಲ್ಯಾಂಡ್ ಇಂಪ್ರೂವ್‌ಮೆಂಟ್ ಸಾಲವನ್ನು ಎಷ್ಟೇ ಕೇಳಿದರೂ, ಅದಕ್ಕೆ 5 ಲಕ್ಷವಾಗಲಿ 10 ಲಕ್ಷವಾಗಲಿ, ಕೊಡಲು ಹಿಂಜರಿಯಬಾರದು.

ಇನ್ನು ಬಾವಿಗಳನ್ನು ತೋಡಿಸಲು ಕೊಡುವ ಸಹಾಯದ್ರವ್ಯ. ಅನೇಕ ಬಾವಿಗಳು ಅರ್ಧವಾಗಿ ಹಣವಿಲ್ಲದೇಯಿರುವುದರಿಂದ ಅಪೂರ್ಣವಾಗಿಯೇ ಉಳಿದಿವೆ. ಆದಷ್ಟು ಜಾಗ್ರತೆ ಹಣ ಕೊಡಿಸುವುದಕ್ಕೆ ಏರ್ಪಾಡು ಮಾಡಿದರೆ ಬಾವಿಕೆಲಸಗಳನ್ನು ಪೂರ್ತಿಮಾಡಲನುಕೂಲವಾಗುತ್ತದೆ. ಇದರಿಂದ ಆಹಾರಸಮಸ್ಯೆ ಬಗೆಹರಿಯಲೂ ಅನುಕೂಲವಾಗುತ್ತದೆ. ಚಿತ್ರದುರ್ಗ ಜಿಲ್ಲೆಗೆ ವಿದ್ಯುಚ್ಛಕ್ತಿಯನ್ನು ಹತ್ತು ಹದಿನೈದುಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ಒದಗಿಸಿದರು. ಆದರೆ ಅನೇಕ ಹಳ್ಳಿಗಳಿಗೆ ಇದರ ಅನುಕೂಲ ದೊರೆತಿಲ್ಲ ' ಸಾರ್ವಜನಿಕರು ಪಂಪು ಹಾಕಿಸಲು ಹಣವಿಲ್ಲ. ಆದಕಾರಣ, ಏನಾದರೂ ಒಂದು ಯೋಜನೆಮಾಡಿ ಸಹಾಯಮಾಡಬೇಕೆಂದು ಸರ್ಕಾರದವರನ್ನು ಕೇಳಿಕೊಂಡಿದ್ದಾರೆ. ಹಿಂದೆ ವಿದ್ಯುಚ್ಛಕ್ತಿ ಇಲಾಖೆಯವರು ಸಾಲವಾಗಿ ಮೋಟಾರುಗಳನ್ನು ಸರಬರಾಯಿ ಮಾಡುತ್ತಿದ್ದರು, ಎಂದರೆ ಹೈರ್ ಪರ್ಚೇಸ್ ಪದ್ಧತಿಯಮೇಲೆ ಕೊಡುತ್ತಿದ್ದರು. ಸುಲಭ ಕಂತುಗಳಲ್ಲಿ ಹಣ ಪಡೆಯುತ್ತಿದ್ದರು. ಇದರಿಂದ ಅನೇಕರು ಆ ಸೌಲಭ್ಯ ಪಡೆಯುತ್ತಿದ್ದರು. ಹಾಗೇನಾದರೂ ಏರ್ಪಾಡ ಮಾಡಬೇಕು. ಚಿತ್ರದುರ್ಗ ಜಿಲ್ಲೆಗೆ ಐದಾರು ತಿಂಗಳಹಿಂದೆ ವಿದ್ಯುಚ್ಛಕ್ತಿ ಬಂದಿದ್ದರೂ ಅನೇಕ ಹಳ್ಳಿಗಳಿಗೆ ಹಾಕಿಲ್ಲ. ವಿದ್ಯುಚ್ಛಕ್ತಿ ಇಲಾಖೆಯವರು ಈ ಸೌಕರ್ಯವನ್ನು ವಿದ್ಯುಚ್ಛಕ್ತಿ ಉಪಯೋಗಿಸಲು ತಯಾರಾಗಿರತಕ್ಕ ರೈತರಿಗೆ ಕೊಟ್ಟರೆ ಅನುಕೂಲವಾಗುತ್ತದೆ. ಇದರಿಂದ ಒಳ್ಳೆಯ ಪರಿಣಾಮವಾಗುತ್ತದೆ. ಆದಷ್ಟು ಜಾಗ್ರತೆ ಮಾಡಬೇಕೆಂದೂ ಸೂಚಿಸುತ್ತೇನೆ.

ಇಷ್ಟು ಹೇಳಿ, ಚಿತ್ರದುರ್ಗಜಿಲ್ಲೆಗೆ ಅನೇಕ ವಿಧದಲ್ಲಿ ಕಷ್ಟಬರುತ್ತಿದೆ. ಏನೋ ಈ ಒಂದು ವರ್ಷ ಬಂತು ಎನ್ನುವ ಹಾಗಿಲ್ಲ; ಕ್ಷಾಮ ಎಂಬುದು ಇಲ್ಲಿ chronic ಆಗಿದೆ. ಇದನ್ನು ತಡೆಯಲು ಸರಿಯಾದ ಕಾರ್ಯಕ್ರಮ ಕೈಕೊಳ್ಳದೇ ಹೋದರೆ ಬಹಳ ತೊಂದರೆಯಾಗುತ್ತದೆ. ಯಾರಾದರೂ ಅಲ್ಪಸ್ವಲ್ಪ ಕಾಳನ್ನಿಟ್ಟಿದ್ದರೆ, ಹಗೇವನ್ನೇ ಲೂಟಿಮಾಡುತ್ತಿದ್ದಾರೆ. ಕಳೆದ ಐದಾರು ತಿಂಗಳಲ್ಲಿ ನಮ್ಮ ಹಳ್ಳಿಯಲ್ಲಿ ಮೂರು ಹಗೇವುಗಳನ್ನು ಕಿತ್ತು ಕಾಳನ್ನು ತೆಗೆದುಕೊಂಡು ಹೋಗಿದ್ದಾರೆ. ನಿನ್ನೆ ಒಂದು ಹಳ್ಳಿಯಲ್ಲಿ ಎರಡು ಹಗೇವು ಕಿತ್ತಿದ್ದಾರೆ. ಬೇರೆ ಹಳ್ಳಿಯಿಂದ ಬಂದು ಹೀಗೆ ಹಗೇವನ್ನು ಕಿತ್ತು ಕಾಳನ್ನು ತೆಗೆದುಕೊಂಡು ಹೋಗುತ್ತಿರುವಾಗ ಹಳ್ಳಿಯವರು ಅವರನ್ನು ತಡೆಯುವುದಕ್ಕೆ ಹೋಗಿ ಕೆಲವರಿಗೆ ಏಟು ಬಿದ್ದಿದೆ. ಚಿತ್ರದುರ್ಗ ತಾಲ್ಲೂಕು, ಕಾಸವರಹಟ್ಟಿಯಲ್ಲಿ ಈಕೃತ್ಯ ನಡೆಯಿತು. ಜನರು ಉದ್ದೇಶಪೂರ್ವಕವಾಗಿ ಹೀಗೆ ಮಾಡುತ್ತಾರೆಂದು ಹೇಳುವುದಿಲ್ಲ. ಹೊಟ್ಟೆಗಿಲ್ಲದಿರುವುದರಿಂದ ಜೈಲಿಗೆ ಹೋದರೂ ಚಿಂತೆ

(ಶ್ರೀ ಮುಲ್ಕ ಗೋವಿಂದರೆಡ್ಡಿ.)

ಯಿಲ್ಲವೆಂದು ಹೀಗೆ ಮಾಡುತ್ತಿದ್ದಾರೆ. ಈ ಪರಿಸ್ಥಿತಿಯನ್ನು ತಪ್ಪಿಸದಿದ್ದರೆ ಮುಂದೆ ಬಹಳ ಕಷ್ಟ. ಆದುದರಿಂದ ರಿಲೀಫ್ ಕಾಮಗಾರಿಗಳನ್ನು ಎಲ್ಲಾ ಕಡೆಗೂ ಅನ್ವಯಿಸುವಂತೆ ತಕ್ಕ ಏರ್ಪಾಡು ಮಾಡಬೇಕು. ಫುಡ್ ಡಿಪೋಗಳನ್ನಿಡಬೇಕು. ಗೃಹಸಚಿವರು ಅಲ್ಲಿಗೆ ಬಂದಾಗಲೂ ಈ ವಿಷಯ ಹೇಳಿದ್ದೇವೆ. ಗ್ರಾಮಪಂಚಾಯಿತಿಗಳೂ ಸೊಸೈಟಿಗಳೂ ಮಾಡಲಿ ಎಂದು ಹೇಳಿದರು. 'ಫುಡ್ ಡಿಪೋಗಳಿರುವುದರಿಂದ ಅಲ್ಪಸ್ವಲ್ಪ ಡಿಫಾಲ್ಕೇಷನ್ ಆಗುತ್ತಿದೆ, ಆದ್ದರಿಂದ ಅವುಗಳನ್ನಿಡಲು ಇಷ್ಟವಿಲ್ಲ' ಎಂದು ಹೇಳಿದರು. ನೂರಕ್ಕೆ ಹತ್ತು ಜನರಿಗೂ ಗ್ರಾಮಪಂಚಾಯಿತಿಗಳೂ ಸೊಸೈಟಿಗಳೂ ಆಹಾರ ಒದಗಿಸುತ್ತವೆಂದು ನಂಬಿಕೆಯಿಲ್ಲ. ಫುಡ್ ಡಿಪೋಗಳಲ್ಲಿ ಅಲ್ಲಲ್ಲಿ ಅನ್ಯಾಯಗಳೂ ಹಣದ ದುರುಪಯೋಗಗಳೂ ನಡೆಯುತ್ತಿದ್ದರೂ ಕೂಡ 'Choose the lesser of the evils' ಎಂದು ಹೇಳುವಹಾಗೆ ಅವುಗಳನ್ನಿಡುವುದೇ ಲೇಸು. ಒಂದೊಂದು ಹೋಬಳಿಯಲ್ಲಿ ನಾಲ್ಕು ಡಿಪೋಗಳನ್ನಾದರೂ ತೆರೆಯಬೇಕೆಂದು ಹೇಳಿ ಈ ನಿಲುವಳಿ ಸೂಚನೆಯನ್ನು ಸಮರ್ಥಿಸುತ್ತೇನೆ.

4-30 P.M.

ಶ್ರೀ ಜಿ. ಶಿವಪ್ಪ (ಹೊಳಲ್ಕೆರೆ).—ಸ್ವಾಮಿ, ಚಿತ್ರದುರ್ಗ ಜಿಲ್ಲೆಯ ವಿಚಾರವಾಗಿ ಈಗಾಗಲೇ ಅನೇಕ ಜನ ಮಾನ್ಯಸದಸ್ಯರು ಅನೇಕ ವಿಚಾರಗಳನ್ನು ಸಭೆಯ ಗಮನಕ್ಕೆ ತಂದಿದ್ದಾರೆ. ಆದರೆ ನಾನು ಆ ಜಿಲ್ಲೆಯ ವಿಚಾರವಾಗಿ ಕೆಲವು ಬಹು ಮುಖ್ಯವಾದ ವಿಚಾರಗಳನ್ನು ಮಾತ್ರ ಸರ್ಕಾರದವರ ಗಮನಕ್ಕೆ ತರಲಿಚ್ಛಿಸುತ್ತೇನೆ. ಆದರೆ ಆ ಉದ್ದೇಶದಿಂದಲೇ ನಾನೀಗ ನಿಂತಿರುತ್ತೇನೆ. "ಇವರೇನು ಹೀಗೆ ಅವರ ಜಿಲ್ಲೆಯ ವಿಚಾರವಾಗಿ ಇಷ್ಟೊಂದು ದೊಡ್ಡದಾಗಿ ಹೇಳುವುದಕ್ಕೆ ಹೊರಟಿದ್ದಾರೆಂದು" ಯಾರೂ ದಯೆಯಿಟ್ಟು ಬೇಜಾರು ಮಾಡಿಕೊಳ್ಳಬಾರದೆಂದು ನಾನು ತಮ್ಮಲ್ಲಿ ಮೊಟ್ಟಮೊದಲನೆಯದಾಗಿ ಕೇಳಿಕೊಳ್ಳುತ್ತೇನೆ. ನಾವು ಎಂದೆಂದಿಗೂ ಕೂಡ ಸ್ವಾರ್ಥಿಗಳಲ್ಲ. ಏನೋ ಒಂದು ಅನಿವಾರ್ಯ ಬಂದು ನಾವು ಈದಿನ ಈ ವಿಚಾರಕ್ಕೆ ಕೈಹಾಕಬೇಕಾಗಿರುತ್ತದೆಯೇ ಶಿವಾಯಿ ನಾವು ಎಂದಿಗೂ ಹೀಗೆ ಭಿಕ್ಷೆ ಬೇಡುವಂಥ ಜನರಲ್ಲ.

ಅದಕ್ಕೋಸ್ಕರವೇ ಸ್ವಾಮಿ, ಈ ಸಭೆಯಲ್ಲಿರುವ ಯಾರೂ ಕೂಡ ದಯೆಯಿಟ್ಟು ನಮ್ಮ ಜಿಲ್ಲೆಯ ವಿಚಾರದಲ್ಲಿ ಬೇಜಾರು ಪಡಬಾರದೆಂದು ಪ್ರಾರ್ಥಿಸಿಕೊಂಡು ಕೆಲವು ಮುಖ್ಯ ವಿಚಾರಗಳನ್ನು ತಿಳಿಸಲಿಚ್ಛಿಸುತ್ತೇನೆ.

ನಮ್ಮ ಚಿತ್ರದುರ್ಗ ಜಿಲ್ಲೆಯಲ್ಲಿರತಕ್ಕವರೆಲ್ಲರೂ ವರ್ಷಾದ್ಯಂತವೂ ಮುಂಗಾರು ಜೋಳದ ಬೆಳೆಯನ್ನೇ ನಂಬಿಕೊಂಡಿರತಕ್ಕಂಥವರಾಗಿದ್ದಾರೆ. ಸಂಸ್ಥಾನದ ಇತರ ಭಾಗಗಳಲ್ಲಿರುವಂತೆ ನಮ್ಮ ಜಿಲ್ಲೆಯಲ್ಲಿ ಅಷ್ಟೇನೂ ಹೆಚ್ಚಿನ ಭಾರೀ ಕೆರೆಗಳಿರುವುದಿಲ್ಲ. ಈ ವಿಚಾರವಾಗಿ ತಾವು ಅಂಕಿಅಂಶಗಳನ್ನು ಬೇಕಾಗಿದ್ದರೆ ತರಿಸಿಕೊಂಡು ನೋಡಬಹುದು. ಬೇರೆ ಬೇರೆ ಜಿಲ್ಲೆಗಳಲ್ಲಿ ಸಾಧಾರಣವಾಗಿ ಕೆರೆಗಳು ಒಂದು ಸಾವಿರ, ಎರಡು ಸಾವಿರಗಟ್ಟಲೆ ಇದ್ದರೂ ನಮ್ಮ ಜಿಲ್ಲೆಯಲ್ಲಿ ಅಂಥ ಕೆರೆಗಳು ಕೇವಲ 250 ಮಾತ್ರ ಇವೆ. ಹಾಗೆ ಹೆಸರಿಗೆ 250 ಕೆರೆಗಳಿದ್ದರೂ ಕೂಡ ಅವುಗಳಲ್ಲಿ ಅನೇಕ ಕೆರೆಗಳು ವರ್ಷಾನುಗಟ್ಟಲೆ ಕೋಡಿ ಬಿದ್ದಿರುವುದಿಲ್ಲ. ಪ್ರತಿವರ್ಷವೂ ಆ ಕೆರೆಗಳಲ್ಲಿ ಶೇಕಡ 10ರಷ್ಟಾದರೂ ಕೋಡಿ ಬಿದ್ದಿರುವುದಿಲ್ಲ; ಬೀಳುತ್ತಲೂ ಇಲ್ಲ. ಹೀಗೆ ಅಲ್ಲಿನ ಜನರ ಆಟವೆಲ್ಲವೂ gambling with rain ಅನ್ನುವಹಾಗೆ ಆಗಿದೆ. ಮುಂಗಾರು ಜೋಳದ ಬೆಳೆ ಯಾವರೆಯೋ ಅಲ್ಲಿ ನಮ್ಮೆಲ್ಲರ ಆಟ. ಈ ಅಂಶವನ್ನು ಸರ್ಕಾರದವರು ಮುಖ್ಯವಾಗಿ ಮನಗಾಣಬೇಕಾಗಿದೆ. ನಾವು ಇಲ್ಲಿಗೆ ಸುಮಾರು ಈಗಾಗಲೇ 2 ತಿಂಗಳ ಹಿಂದೆಯೇ ಆ ಜೋಳದ ಬೆಳೆಯನ್ನಿಡಬೇಕಾಗಿತ್ತು. ಇಲ್ಲಿಗೆ ಒಂದು ತಿಂಗಳಿಗೆ ಹಿಂದೆಯೇ ರಾಗಿಯ ಬೆಳೆಯನ್ನಿಡಬೇಕಾಗಿತ್ತು. ಆದರೆ ನಮ್ಮಲ್ಲಿ ಒಂದು ಹೆಚ್ಚಿನ ದೈವಭಕ್ತಿ ಇದ್ದಾಗ್ಯೂ ಕೂಡ ನಮಗೆ ಸಾಕಷ್ಟು ಮಳೆ ಬೆಳೆಗಳು ಆಗುತ್ತಿಲ್ಲ. ದೇವರು ನಮ್ಮನ್ನು ಹೀಗೆ ನಾನಾ ಕಷ್ಟಗಳಿಗೀಡುಮಾಡಿ ನಮ್ಮನ್ನೇನು ಪರೀಕ್ಷೆ ಮಾಡುತ್ತಿದ್ದಾನೆಯೋ ಏನೋ ಅನ್ನುವ ಭಾವನೆ ನನಗೆ ಉಂಟಾಗಿದೆ. ಆದರೆ ನಾನು ಕೇವಲ ನನ್ನ ಒಂದು ಚುನಾವಣೆಯ ಕ್ಷೇತ್ರದ ವಿಚಾರವನ್ನು ಮಾತ್ರವೇ ತಿಳಿಸುತ್ತಿಲ್ಲ. ಇಡೀ ಜಿಲ್ಲೆಯಲ್ಲೆಲ್ಲಾ ಹೀಗೆ ಆಗಿರುತ್ತದೆ. ಅಲ್ಲದೆ, ಈ ವಿಚಾರವನ್ನು ನಾನೊಬ್ಬನೇ ಏನೂ ಹೀಗೆ ಹೇಳುತ್ತಿಲ್ಲ. ನಮ್ಮ ಜಿಲ್ಲೆಯಿಂದ ಪಾರ್ಲಿಯಮೆಂಟಿಗೆ ಸದಸ್ಯರಾಗಿ ಹೋಗಿರತಕ್ಕ ಶ್ರೀ ಎಸ್. ನಿಜಲಿಂಗಪ್ಪನವರೂ ಸಹ ಆ ಜಿಲ್ಲೆಯ ಅನೇಕ ಪ್ರದೇಶಗಳಲ್ಲಿ ಸಂಚಾರಮಾಡಿ ಜನರ ನಿಜವಾದ ಸ್ಥಿತಿಗತಿಗಳನ್ನು ಪರೀಕ್ಷೆಮಾಡಿಕೊಂಡು ಆ ಬಗ್ಗೆ ಅಲ್ಲಿರುವ ಜನರ ಸ್ಥಿತಿಗತಿಗಳೇನಾಗಿರುತ್ತದೆಂಬುದರ ಬಗ್ಗೆ ಅವರೂ ಸಹ ಸ್ಟೇಟ್‌ಮೆಂಟ್‌ಗಳನ್ನು ಕೊಟ್ಟಿರುತ್ತಾರೆ.

ಅಲ್ಲಿರತಕ್ಕ ಬಡಜನರಿಗೆ ಮತ್ತು ಕೂಲಿಗಾರರಿಗೆ ಕೆಲಸಮಾಡಿ ಕೂಲಿ ದುಡಿಯೋಣವೆಂದರೆ ಕೂಲಿಯ ಕೆಲಸಗಳೇ ದೊರೆಯುತ್ತಿಲ್ಲ. ಹೀಗಾಗಿ ಅವರ ಸ್ಥಿತಿಗತಿಗಳು ಬಹಳ ಶೋಚನೀಯವಾಗಿರುತ್ತವೆ. ಈ ಅಂಶವನ್ನು ಈಗಾಗಲೇ ಸರ್ಕಾರದವರು ಕೊಂಚಮಟ್ಟಿಗೆ ಮನಗಂಡಿರುವುದರಿಂದಲೇ ಅವರ ಕಷ್ಟಗಳನ್ನು ಪರಿಹಾರ ಮಾಡಲು ಜನರಿಗೆ ಅಲ್ಪಸ್ವಲ್ಪ ಸಹಾಯಗಳನ್ನು ಕಲ್ಪಿಸಿಕೊಟ್ಟಿದ್ದರು. ಆದರೆ ಅದು ಏನೇನೂ ಸಾಕಾಗುವುದಿಲ್ಲ. ಈಗ ತಕ್ಷಣದಲ್ಲೇ ಸರ್ಕಾರದವರು ಅವರಿಗೆ ಒಂದು ಅನುಕೂಲ ಕಲ್ಪಿಸಿ ಸಹಾಯ ಮಾಡಬೇಕಾಗಿದ್ದಲ್ಲಿ ತಾವು ಮಾಡಬೇಕಾಗಿರತಕ್ಕ ಕಾರ್ಯಗಳಲ್ಲಿ ಮೊದಲನೆಯದೂ ಮತ್ತು ಅತಿ ಮುಖ್ಯವಾದದ್ದೂ ಆಗಿರತಕ್ಕದ್ದು ಯಾವುದೆಂದರೆ, ಯಾವುದಾದರೂ ರಿಲೀಫ್ ಕಾಮಗಾರಿಗಳನ್ನು ಏರ್ಪಡಿಸಿಕೊಟ್ಟು ಅವರಿಗೆ ಮೊದಲು ಸಹಾಯನೀಡತಕ್ಕದ್ದು ಅತಿ ಮುಖ್ಯವಾದದ್ದೂ ಮತ್ತು ಜರೂರಾಗಿ ಆಗಬೇಕಾದದ್ದೂ ಆಗಿದೆ. ಆದರೆ ಈಗಾಗಲೆ ಶ್ರೀ ಭೀಮಪ್ಪನಾಯಕರವರು ಹೇಳಿರುವಹಾಗೆ ಈ ಟೆಂಪರರಿ ರಿಲೀಫ್ ಕಾಮಗಾರಿಗಳನ್ನು ಒದಗಿಸತಕ್ಕ ಬಗ್ಗೆ ಈಗ ಹಾಲಿ ನಡೆಯುತ್ತಿರುವ ಇಡೀ P. W. D. ಇಲಾಖೆಯ state of affairs ಸ್ವಲ್ಪವೂ ಸಮರ್ಪಕವಾಗಿಲ್ಲದಿರುವುದರಿಂದ, ಅವರು ಆ ಕೆಲಸಗಳನ್ನು ಜನರಿಗೆ ತ್ವರಿತವಾಗಿ ಒದಗಿಸುವಂತೆ ಒಂದು ಸೂಚನೆಯನ್ನೂ ಆ ಇಲಾಖೆಯವರಿಗೆ ಕೊಡತಕ್ಕದ್ದು ಅತ್ಯಗತ್ಯವಾಗಿದೆಯೆಂಬ ಅಂಶವನ್ನು ನಾನೀಗ ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ. ಆ ಇಲಾಖೆಯ ವಿಚಾರವಾಗಿ ಸೂಚಿಸಬೇಕಾದ ಅಂಶಗಳು ಒಂದಲ್ಲ, ಏಳೆಂಟಿರುತ್ತವೆ. ಆ ಇಲಾಖೆಗೆ ಹೋದ ಕಾಗದಪತ್ರಗಳನ್ನು ಟ್ರೇಸ್‌ಮಾಡುವುದೇ ತುಂಬಾ ಪ್ರಯಾಸಕ್ಕೆ ಬಂದಿದೆ. ಆ ಇಲಾಖೆಯಲ್ಲಿ ಯಾರನ್ನು ಕೇಳಬೇಕೆಂಬುದೇ ತಿಳಿಯದಾಗಿದೆ. ನಾವು ಇಂಜನಿಯರಿಂಗ್ ಇಲಾಖೆಗೆ ಹೋಗಿ ಎಗ್ಜಿಕ್ಯೂಟೀವ್ ಇಂಜನಿಯರ್ ಅವರನ್ನು ಯಾವುದಾದರೂ ಪೆಂಡಿಂಗ್ ನಿಂತಿರುವ ಎಷ್ಟಿಮೇಟುಗಳ ವಿಚಾರ ಕೇಳುವುದಕ್ಕೆ ಹೋದರೆ ಅವರು ತಕ್ಷಣವೇ ಆ ಸಂಬಂಧಪಟ್ಟ ಕಾಗದಪತ್ರಗಳೆಲ್ಲಾ

ಒಂದಾವರ್ತಿ ಚೀಫ್ ಇಂಜನಿಯರ್ ಅವರಿಗೆ ಹೋಗಿರುತ್ತವೆಂದೂ, ಮತ್ತೊಂದಾವರ್ತಿ ಹೋಗಿ ಕೇಳಿದರೆ, ಆಗ ಸೂಪರಿಂಟೆಂಡಿಂಗ್ ಇಂಜನಿಯರಿಗೋ ಅಥವಾ ಡೆಪ್ಯುಟಿ ಕಮೀಷನರಿಗೋ ಹೋಗಿರುತ್ತವೆಂದು ಹೇಳಿಬಿಡುತ್ತಾರೆ. ಹೀಗೆ ಆ ನಮ್ಮ ಪೇಪರ್ ಎಲ್ಲಿಗೆ ಹೋಗಿದೆ, ಏನಾಗಿದೆ ಎಂಬುದನ್ನೇ ಪರ್ಸ್ಯೂ ಮಾಡುವುದಕ್ಕಾಗುವುದಿಲ್ಲ; ಮತ್ತು ಅನೇಕ ವೇಳೆ ಆ ಕಾಗದ ಪತ್ರಗಳು ನಮ್ಮ ಕೈಗೂ ಸಹ ಸಿಕ್ಕುವುದಿಲ್ಲ. ಹೀಗೆಲ್ಲಾ ಆ ಇಲಾಖೆಯಿಂದ ಬಹಳ ತೊಂದರೆ ಇದೆ. ಅದನ್ನು ಸರ್ಕಾರದವರು ಕೂಡಲೇ ತಮ್ಮ ಗಮನಕ್ಕೆ ತೆಗೆದುಕೊಂಡು ಅದನ್ನು ಸರಿಪಡಿಸಿಕೊಳ್ಳುವಂತೆ ಆ ಇಲಾಖೆಗೆ ತಾಕೀತ್ ಮಾಡಬೇಕಾದುದು ತಮ್ಮ ಮೊದಲನೆಯ ಕರ್ತವ್ಯವಾಗಿದೆ. ಈಗ ಹಾಲಿ P W. ಇಲಾಖೆಯವರ ಸುಪರ್ದಿನಲ್ಲಿ ಪೆಂಡಿಂಗ್ ಬಿದ್ದಿರತಕ್ಕ 20 ಸಾವಿರ, 50 ಸಾವಿರ ಮತ್ತು 70 ಸಾವಿರ ಇತ್ಯಾದಿ ಅನೇಕ ಕೆರೆಗಳ ಮತ್ತು ಕೆರೆಕಾಮಗಾರಿಗಳ ಕೆಲಸಗಳು ಅನೇಕವಾಗಿರುತ್ತವೆ. ಅಂಥವುಗಳನ್ನು ಈಗ ಅವರು ಬೇಗ ಸ್ಕ್ರೂಟಿನಿಮಾಡಿ ಮಂಜೂರುಮಾಡಿಸಿ ಕೆಲಸವನ್ನು ಆದಷ್ಟು ತ್ವರಿತವಾಗಿ ಪ್ರಾರಂಭಮಾಡುವಂತೆ ತಾವು ಮಾಡಿದರೆ, ಕಷ್ಟಕ್ಕೀಡಾಗಿರತಕ್ಕ ಜನರಿಗೆ ಅಲ್ಪಸ್ವಲ್ಪವಾದರೂ ಕೂಲಿ ದೊರೆತು ಅವರಿಗೆ ಜೀವನೋಪಾಯ ಕಲ್ಪಿಸಿಕೊಳ್ಳಲು ದೊಡ್ಡ ಸಹಾಯವನ್ನು ತಾವು ನೀಡಿದಂತಾಗುತ್ತದೆ. ನಮ್ಮ ಕ್ಷೇತ್ರವಲ್ಲೇ ಪ್ರಾರಂಭಿಸಬೇಕೆಂದರೆ, ಇಂಥ ಕೆಲಸಗಳು ಷ್ಟೋ ಇವೆ. ಉದಾಹರಣೆಗೆ ಹೇಳುವುದಾದರೆ, ದೊಗ್ಗನಾಳು ಕೆರೆ ಕೆಲಸ ಮಂಜೂರಾತಿಗಾಗಿ ಬಹಳ ದಿವಸದಿಂದ ಹಾಗೆ ಪೆಂಡಿಂಗ್ ನಿಂತಿರುತ್ತದೆ. ಅದನ್ನು ತಾವೀಗ ಕೈಕೊಳ್ಳಬಹುದು. ಅದೇ ರೀತಿ ಮತ್ತೊಂದು ಕೆರೆಯ ಕೆಲಸ ಎಂದರೆ ಗುಂಜಿಗನೂರು ಕೆರೆ ಬಂಡ್ ಬ್ರೀಚಾಗಿ ಅದೂ ಸಹ ಹಾಗೇ ನಿಂತುಹೋಗಿದೆ. ಬಿ. ದುರ್ಗದ ಕೆರೆ ಇತ್ಯಾದಿ ಅನೇಕ ಕೆರೆಗಳ ದುರಸ್ತು ಕಾಮಗಾರಿ ಬಹಳ ದಿವಸಗಳಿಂದಲೂ ಆಗದೆ ಹಾಗೆ ನಿಂತುಹೋಗಿವೆ. ಅಂಥವುಗಳ ಕೆಲಸವನ್ನು ತಾವೀಗ ಸುಲಭವಾಗಿ ಕೈಕೊಳ್ಳಬಹುದಾಗಿದೆ. ಇಷ್ಟೇ ಅಲ್ಲದೆ ಎಸ್ಟಿಮೇಟುಗಳು ತಯಾರಾಗಿ, ಜನರಲ್ ಸ್ಯಾಂಕ್ಷನ್ ಕೂಡ ಆಗಿರತಕ್ಕಂಥ ಕೆಲಸಗಳ ಪೈಕಿ ಒಂದಾದ 'Feeder channel to Hullemalali tank and Kanagali tank from Magadi halla' ಇದು 45 ಸಾವಿರ ರೂಪಾಯಿಗಳ ಖರ್ಚಿನಲ್ಲಿ ಆಗಬೇಕೆಂದು ಅಂದಾಜು ಮಾಡಿದ್ದು ಹಾಗೆಯೇ ನಿಂತಿರುತ್ತದೆ. ಇದೇ ರೀತಿ 10-15 ಸಾವಿರ ರೂಪಾಯಿಗಳ ಅಂದಾಜಿನಲ್ಲಿ ಆಗುವಂಥ ಕೆಲವು feeder channelಗಳು ಎಂದರೆ ಹಿರೇ ಕೆರೆ ಮತ್ತು ಹೊಳಲ್ಕೆರೆಗೆ ಛಾನಲ್‌ಗಳನ್ನು ಮಾಡತಕ್ಕ ಕೆಲಸ ಕೂಡ ಇನ್ನೂ ಹಾಗೆಯೇ ಪೆಂಡಿಂಗ್‌ನಲ್ಲಿರುತ್ತದೆ. ಹೀಗೆ ಇನ್ನೂ ಮಾಡಬೇಕಾದ ಕೆಲಸಗಳ ಪೈಕಿ ದುಮ್ಮಿ ಫೀಡರ್ ಛಾನಲ್ ಮತ್ತು ಕಾಗಲಗೆರೆ ಕೆರೆ ಇವುಗಳೆಲ್ಲವುಗಳ ಕೆಲಸವೂ ಹಾಗೆಯೇ ನಿಂತುಹೋಗಿದೆ. ಈಗ ಸರ್ಕಾರದವರು ಈ ಕೆರೆಗಳ ಮತ್ತು ಫೀಡರ್ ಛಾನಲ್‌ಗಳ ಕಾಮಗಾರಿಯನ್ನು ಕೈಕೊಂಡು ಜನರಿಗೆ ಒಂದು ರಿಲೀಫನ್ನು ಒದಗಿಸಿದಲ್ಲಿ ಅವರಿಗೆ ಕೂಲಿ ದೊರೆಯಲು ಒಂದು ಮಾರ್ಗವಾಗಿ ತನ್ಮೂಲಕ ಅವರ ಜೀವನ ನಡೆಸಿಕೊಂಡು ಬರಲು ಅನುಕೂಲವಾಗುತ್ತದೆ.

ತಾವು ಇಂಥ ಒಂದು ಆಪತ್ಕಾಲದಲ್ಲಿ ಅವರಿಗೆ ಸಹಾಯನೀಡತಕ್ಕ ಬಗ್ಗೆ ಹಾಗೆ ಈ ರಿಲೀಫ್ ಕಾಮಗಾರಿಯನ್ನು ಕೈಕೊಳ್ಳದೆ ಅವುಗಳನ್ನು ಯಾವಾಗಲೋ ಕೈಕೊಂಡರೆ ತಾವೇನು ಅವರಿಗೆ ಸಹಾಯನೀಡಿದಂತಾಯಿತು? ತಾವು ಈ ಕಾಮಗಾರಿಗಳನ್ನು ಆದಷ್ಟು ಬೇಗ ಕೈಕೊಂಡರೆ ಅವರಿಗೂ ಒಂದು ಜೀವನೋಪಾಯ ಜರುಗಿ ದೇಶಕ್ಕೂ ಒಂದು ದೊಡ್ಡ ಉಪಕಾರಮಾಡಿದಂತಾಗುತ್ತದೆ.

ಇನ್ನು ಆಹಾರ ಇಲಾಖೆಯ ವಿಚಾರವಾಗಿ ಎರಡು ಮಾತುಗಳನ್ನು ಹೇಳಬೇಕಾಗಿದೆ. ಹಳ್ಳಿಗಳಲ್ಲಿರತಕ್ಕ ರೈತಾಪಿ ಜನಗಳಿಗೆ ರೇಷನ್ ಕಾರ್ಡುಗಳಿದ್ದರೂ ಅವರಿಗೆ ಡಿಪೋಗಳಲ್ಲಿ ರಾಗಿ ದೊರೆಯದೆ ಅವರು ಓಪನ್ ಮಾರ್ಕೆಟ್ಟಿನಲ್ಲಿ ಈಗ ರಾಗಿಯನ್ನು ಪಲ್ಲ ಒಂದಕ್ಕೆ 55 ರೂಪಾಯಿಗಳಂತೆ ಮಾರಾಟ ಮಾಡುತ್ತಿದ್ದರೂ ವಿಧಿಯಿಲ್ಲದೆ ಕೊಂಡುಕೊಳ್ಳುತ್ತಿದ್ದಾರೆ. ಆದಕಾರಣ ಸರ್ಕಾರದವರು ಈ ರಾಗಿಯನ್ನಾದರೂ ಪ್ರತಿ ಸಂತೆಯ ದಿವಸವೂ ಹತ್ತಾರು ಜನರಿಗೆ ಸರಬರಾಯಿಮಾಡಿ ಕಂಟ್ರೋಲ್ ದರದಲ್ಲಿ ಅವರಿಗೆ ಸಿಗುವಂತೆ ಮಾಡಬೇಕು. ಹೀಗೆ ಮಾಡಿದ್ದೇ ಆದರೆ ಖಾಸಗೀ ವರ್ತಕರೂ ಸಹ ಅವರ ಧಾನ್ಯಗಳನ್ನು ವಿಧಿಯಿಲ್ಲದೆ ಕಡಮೆ ದರದಲ್ಲಿ ಮಾರಾಟಮಾಡುವಂತಾಗಬಹುದು.

ಹಾಗೆ ತಾವು ರಾಗಿಯನ್ನು ಸರಬರಾಯಿ ಮಾಡುವುದಾದ್ದರೆ ನಾವುಗಳೇ ಯಾರಾದರೂ ಆ ಸಂತೆ ದಿವಸಗಳಲ್ಲಿ ಅಲ್ಲಿ ಹಾಜರಿದ್ದು ಅದನ್ನು ಸರಿಯಾಗಿ ಬಡಬಗ್ಗರಿಗೆ ವಿನಿಯೋಗವಾಗುವಂತೆ ನೋಡಿಕೊಳ್ಳುವುದಕ್ಕೂ ಸಹ ಸಿದ್ಧರಾಗಿದ್ದೇವೆ. ತಾವು ಈ ರೀತಿಯಾಗಿ ಚಿತ್ರದುರ್ಗ ಮತ್ತು ಜಗಳೂರು ಇಂಥ ತೀರಾ ಅಭಾವ ಪರಿಸ್ಥಿತಿಗೊಳಗಾಗಿರತಕ್ಕ ಪ್ರದೇಶಗಳಲ್ಲಿ ನಡೆಯುವ ಸಂತೆಗಳಿಗೆ ರಾಗಿಯನ್ನು ಸರಬರಾಯಿ ಮಾಡಿದರೆ ನಾವುಗಳು ಅಲ್ಲಿದ್ದುಕೊಂಡು ಒಬ್ಬೊಬ್ಬರಿಗೂ ಒಂದೆರಡು ರೂಪಾಯಿಗಳ ಕಾಳು ಸಿಕ್ಕುವಂತೆ ಮಾಡಬಹುದು. ಈ ರೀತಿ ತಾವು ಒಂದು ಉಪಕಾರ ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ವಿದ್ಯುಚ್ಛಕ್ತಿಯನ್ನು ವ್ಯವಸಾಯೋದ್ಯಮಗಳಿಗೆ ಒದಗಿಸಿಕೊಡಬೇಕೆಂಬ ವಿಚಾರದಲ್ಲಿ ಒಂದು ವಿಷಯ ತಿಳಿಸಬೇಕಾಗಿದೆ. ಈ ಎಲೆಕ್ಟ್ರಿಕ್ ಲೈನನ್ನು 15–20 ಮೈಲಿಗಳ ದೂರ ಎಳೆದುಕೊಂಡು ಹೋಗಿರತಕ್ಕ ಪ್ರದೇಶದಲ್ಲಿ ಆ ಲೈನಿನ ಅಕ್ಕಪಕ್ಕದಲ್ಲಿರುವ ಜನರು ಕರೆಂಟ್ ಬೇಕೆಂದು ಎಷ್ಟೇ ಒತ್ತಾಯ ಪಡಿಸುತ್ತಿದ್ದರೂ, ಅವರಿಗೆ ಆ ಸೌಕರ್ಯಗಳನ್ನು ಕೊಡದೆ ದೂರದಲ್ಲಿರತಕ್ಕವರಿಗೆ ಕೊಡುತ್ತಿದ್ದಾರೆ. ಹಾಗೆ ಎಲೆಕ್ಟ್ರಿಕ್ ಲೈನ್ ಹೋಗಿರುವ ಅಜುಬಾಜು ಪ್ರದೇಶಗಳವರು ಕರೆಂಟಿಗೆ ಅರ್ಜಿಹಾಕಿಕೊಂಡಿದ್ದರೂ ತಾವೇಕೆ ಕೊಡಬಾರದೆಂದು ನಾನು ಕೇಳುತ್ತೇನೆ! ಇಂಥ ಸನ್ನಿವೇಶಗಳು ಒಂದಲ್ಲ, ಎರಡಲ್ಲ, ಎಷ್ಟೋ ಇರುತ್ತವೆ.

ಈ ಹಿಂದೆ ಮಾನ್ಯ ಗೃಹಸಚಿವರು ನಮ್ಮ ಜಿಲ್ಲೆಗೆ ಬಂದಿದ್ದಾಗ್ಗೆ ಅನೇಕರು ಈ ವಿಚಾರವಾಗಿ ಅವರಲ್ಲಿ ಮನವಿಗಳನ್ನು ಸಲ್ಲಿಸಿ ಅರಿಕೆಮಾಡಿಕೊಂಡಿದ್ದಾಗ್ಯೂ ಮತ್ತು ಇಲ್ಲಿಗೆ ಒಂದು ವರ್ಷ ಕಳೆದಿದ್ದಾಗ್ಯೂ ನಮ್ಮ ಹೋಬಳಿಯಲ್ಲೇ ಕೆಲವರು ಹೀಗೆ ಕರೆಂಟ್ ಬೇಕೆಂದು ಕೇಳಿಕೊಂಡಿದ್ದವರಿಗೆ ಇನ್ನೂ ಅದನ್ನು ಕೊಟ್ಟಿಲ್ಲ. ಆ ಇಲಾಖೆಯವರು ಬಂದು ಆಗಲೆ ಎಸ್ಟಿಮೇಟ್ ಇತ್ಯಾದಿಗಳನ್ನೆಲ್ಲಾ ಮಾಡಿಕೊಂಡು ಹೋಗಿದ್ದಾರೆ, ಆದರೂ ಅವರಿಗೆ ಇನ್ನೂ ಕರೆಂಟ್ ಕೊಟ್ಟಿಲ್ಲ. ಇಂಥ ಕಷ್ಟಕಾಲದಲ್ಲಿ ಜನರು ಎಷ್ಟಾವರ್ತಿ ಈ ವಿಚಾರಕ್ಕಾಗಿ ಬೆಂಗಳೂರು–ಭದ್ರಾವತಿಗಳಿಗೆ ತಿರುಗಲು ಸಾಧ್ಯವಿದೆ! ಈ ವಿಚಾರವನ್ನೂ ಸಹ ಸರ್ಕಾರದವರು ತಮ್ಮ ಗಮನಕ್ಕೆ ತೆಗೆದುಕೊಂಡು ಅವರಿಗೆಲ್ಲಾ ಬೇಗ ಆ ವಿದ್ಯುಚ್ಛಕ್ತಿ ಸಹಾಯ ದೊರಕುವಂತೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

(ಶ್ರೀ ಜಿ. ಶಿವಪ್ಪ)

ಇನ್ನು ನೆಯ್ಗೆಯವರ ವಿಚಾರವಾಗಿ ಒಂದು ಮಾತು ಹೇಳಬೇಕಾಗಿದೆ.—ಇವರು ಇಲ್ಲಿಯತನಕವೂ ಯಾವ ಕೂಲಿನಾಲಿ ಕೆಲಸಗಳಿಗೂ ಹೋಗದಂತೆ ತಮ್ಮ ಕಸಬನ್ನೇ ನಂಬಿಕೊಂಡು ಮರ್ಯಾದೆಯಿಂದ ಜೀವನಮಾಡಿಕೊಂಡು ಹೋಗುತ್ತಿದ್ದರು. ಈ ದಿವಸ ಇವರೂ ಸಹ ಹೊರಗಡೆಗೆ ಬಂದು ಕೂಲಿಕೆಲಸ ಕೇಳುವಂಥ ಪರಿಸ್ಥಿತಿ ಬಂದಿದೆ. ಆದರೂ ಅವರಿಗೆ ಕೂಲಿಕೆಲಸಗಳು ದೊರೆಯುತ್ತಿಲ್ಲ. ಇವರಿಗೆ ಒಂದು ಸೀರೆಯನ್ನು ನೆಯ್ಯಬೇಕಾಗಿದ್ದರೆ 3 ದಿವಸಗಳು ಬೇಕಾಗುತ್ತದಂತೆ. ಹಾಗೆ 3 ದಿವಸಗಳು ಕೆಲಸಮಾಡಿ ಒಂದು ಸೀರೆಯನ್ನು ಮಾಡಿ, ಅದನ್ನು ಮಾರಿದರೆ ಅವರಿಗೆ ಸಿಕ್ಕುವ ಲಾಭ ಕೇವಲ 12 ಆಣೆಗಳೆಂದು ಗೊತ್ತಾಗುತ್ತಿದೆ. ಈ 12 ಆಣೆಗಳನ್ನು ಆತ 3 ದಿನದಲ್ಲಿ ಸಂಪಾದಿಸಿದರೆ ಆತನು ಹೇಗೆ ಜೀವನ ಮಾಡಬೇಕೋ ಅದು ನನಗಂತೂ ಗೊತ್ತಾಗದು. ಈ ವಿಚಾರಗಳನ್ನೆಲ್ಲಾ ನಾನೇ ಖುದ್ದು ನನ್ನ ಕಣ್ಣಾರ ನೋಡಿದ್ದೇನೆ. ಈ ವಿಚಾರವನ್ನೂ ಸಹ ಸರ್ಕಾರದವರು ಬಹಳ ತೀವ್ರವಾಗಿ ಆಲೋಚನೆ ಮಾಡಬೇಕಾದಂಥ ವಿಷಯವಾಗಿದೆ. ಇದರ ಜೊತೆಗೆ ಹೋದ ಸಾಲಿನಲ್ಲಿ ಮತ್ತು ಈ ಸಾಲಿನಲ್ಲಿ ಹೊಳಲ್ಕೆರೆ ತಾಲ್ಲೂಕಿನಲ್ಲಿ ಸಹ ಮಳೆ ಬಂದಿರುವುದಿಲ್ಲ ಕೆಲವು ಹೋಬಳಿಗಳಲ್ಲೇನೋ ಅಲ್ಪ ಸ್ವಲ್ಪ ಮಳೆ ಬಿದ್ದಿದ್ದರೂ, ಸುಮಾರು 3-4 ಹೋಬಳಿಗಳಲ್ಲಿ ಮಾತ್ರ ಸುತರಾಂ ಮಳೆ ಬಂದಿಲ್ಲ. ಆದುದರಿಂದ ಈ ಜನಗಳಿಗೆಲ್ಲರಿಗೂ ತ್ವರಿತವಾಗಿ ಸರ್ಕಾರದವರು ಸಹಾಯನೀಡಬೇಕೆಂಬ ಬಗ್ಗೆ ಈ ನಾಲ್ಕು ಮಾತುಗಳನ್ನಾಡಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಬಿ. ವಿ. ನಾರಾಯಣರೆಡ್ಡಿ (ಬಾಗೇಪಲ್ಲಿ-ಗುಡಿಬಂಡೆ).—ಬಾರದೇ ಬಾರದೇ ಬರಗಾಲ ಬಂದಿದ್ದಕ್ಕೆ ದುರ್ಗದವರು ಬಹಳ ಗಾಬರಿಯಾಗಿದ್ದಾರೆ. ನಮಗೆ ಅಂದರೆ ಕೋಲಾರಕ್ಕೆ ಯಾವಾಗಲೂ ಬರ ಇರುವುದರಿಂದ ಸರ್ಕಾರದವರು ದಿನಾ ಸಾಯುವವರಿಗೆ ಯಾರು ಅಳುತ್ತಾರೆ ಎನ್ನುವ ಧೋರಣೆಯಿಂದಿರುವ ಹಾಗಿದೆ.

ಆದರೆ ನಿಜವಾಗಿಯೂ ಪರಿಸ್ಥಿತಿಯಲ್ಲಿ ಚಿತ್ರದುರ್ಗಕ್ಕಿಂತ ನಮ್ಮ ಜಿಲ್ಲೆಗೆ ಹೆಚ್ಚು ಅನ್ಯಾಯವಾಗಿದೆಯೆಂದು ನಾನು ಘಂಟಾಘೋಷವಾಗಿ ಹೇಳಬಲ್ಲೆ. ಅದರಲ್ಲೂ ಬಾಗೇಪಲ್ಲಿ ಗುಡಿಬಂಡೆ ಇವುಗಳ ವಿಷಯ ನಿಮಗೆ ತಿಳಿದಿರುವ ವಿಷಯವೇ ಆಗಿದೆ. ಅಲ್ಲಿ ಎಷ್ಟು ಅಂಗುಲ ಮಳೆಯಾಗಿದೆಯೆಂಬುದು ಎಲ್ಲರಿಗೂ ಗೊತ್ತಿದೆ. ಚಿತ್ರದುರ್ಗದ ಕೊನೆಯ ಕ್ಷೇತ್ರಕ್ಕಿಂತಲೂ ನಮ್ಮಲ್ಲಿ ಇನ್ನೂ ಕಮ್ಮಿ ಮಳೆಬಿದ್ದಿದೆ.

ಇಷ್ಟೆಲ್ಲಾ ಇದ್ದರೂ, ಅಲ್ಲಿ ಜಾಸ್ತಿ, ಎಂದರೆ ಎಷ್ಟು ತಾನೆ ಕೆಲಸಮಾಡಿದ್ದಾರೆ? ಹೋದವರ್ಷವೂ ಹೆಚ್ಚಿಗೆ ಕೆಲಸಮಾಡಿಲ್ಲ. ಅವರು ಕೊಟ್ಟಿರುವ ಹಣವೇ ಕಮ್ಮಿಯಿತ್ತು. ಅದನ್ನು ಕೂಡ ಪೂರ್ತಿಯಾಗಿ ಉಪಯೋಗಿಸದೆ ಅಲ್ಲಿನ ಅಧಿಕಾರಿಗಳು ಆ ಹಣವನ್ನೂ ಲ್ಯಾಪ್ಸ್ ಮಾಡಿದ್ದಾರಲ್ಲಾ!! ಸಾಮಾನ್ಯವಾಗಿ ಗ್ರೋ-ಮೋರ್-ಫುಡ್ ಯೋಜನೆಯಲ್ಲಿ 15 ಲಕ್ಷ ರೂಪಾಯಿಗಳಷ್ಟನ್ನು ಲ್ಯಾಪ್ಸ್‌ಮಾಡಿಬಿಟ್ಟಿದ್ದಾರೆ. ಹೀಗೇಕೆ ಲ್ಯಾಪ್ಸ್ ಆಯಿತು? ಆಫೀಸರುಗಳು ಚಿಕ್ಕವರೇ ಆಗಲಿ, ದೊಡ್ಡವರೇ ಆಗಲಿ ಅವರಿಗೆ ತಕ್ಕ ಶಿಕ್ಷೆಮಾಡಬೇಕು. ಅವರು ಇರುವುದೇ ಜನಗಳಿಗೆ ದುಡಿಯುವುದಕ್ಕಾಗಿ. ಹಾಗಿಲ್ಲದೆ ಸಂಬಳ ತೆಗೆದುಕೊಂಡು ಹೋಗಿ ಮನೆಯಲ್ಲಿ ಸುಖವಾಗಿ ವಾಸಮಾಡಿಕೊಂಡಿರುವುದಕ್ಕಾಗಿ ಅಲ್ಲ. ಅಂದ ಮಾತ್ರಕ್ಕೇ ಎಲ್ಲಾ officers ಸರಿಯಾಗಿ ಕೆಲಸಮಾಡುತ್ತಿಲ್ಲವೆಂದು ನಾನು ಹೇಳುವುದಿಲ್ಲ. ಬಹಳ ಶ್ರದ್ಧೆವಹಿಸಿ 'zeal' ನಿಂದ ಕೆಲಸಮಾಡಿರುವವರೂ ಕೆಲವರು ಇದ್ದಾರೆ. ಆದ್ದರಿಂದ ಈ ವಿಷಯದಲ್ಲಿ ಯಾರು ತಾತ್ಸಾರಮಾಡಿದ್ದಾರೋ ಅವರನ್ನು ಕಂಡುಹಿಡಿದು ಅವರು ಯಾರೇ ಆಗಿರಲಿ ಅವರನ್ನು ಗಲ್ಲಿಗೇರಿಸಬೇಕಾದದ್ದು ನ್ಯಾಯ ಎಂದು ನನ್ನ ಅಭಿಪ್ರಾಯ. ಏಕೆಂದರೆ ಆ ಒಬ್ಬ ಆಸಾಮಿಯಿಂದ ನೂರಾರು ಜನರು ಸಾಯಬೇಕಾಗಿ ಬಂದಿದೆ. ಅಂಥವರಿಗಿಂಥ ಹೆಚ್ಚಿನ ಕ್ರಿಮಿನಲ್ ಯಾರಿದ್ದಾರೆ?

ಆಮೇಲೆ ವಿದ್ಯುಚ್ಛಕ್ತಿ ಸರಬರಾಜಿನ ವಿಚಾರ ನೋಡುವುದಾದರೆ, ಈ ಬಗ್ಗೆ 50 ಲಕ್ಷ ರೂಪಾಯಿಗಳನ್ನು ಕೇಂದ್ರದವರು ನಮಗಾಗಿಯೇ ಕೊಟ್ಟರು. ಅಂಥದರಲ್ಲಿ ಆ ಪೈಕಿ ಎರಡು ಲಕ್ಷ ರೂಪಾಯಿಗಳನ್ನು ನಮ್ಮ ಡಿಸ್ಟ್ರಿಕ್ಟಿಗೆ ಕೊಟ್ಟು ಅದರಲ್ಲೂ ಒಂದು ಲಕ್ಷ ರೂಪಾಯಿಗಳನ್ನು ನಿಲ್ಲಿಸಿಬಿಟ್ಟಿದ್ದಾರೆ. ವಿಪರೀತ ಕಷ್ಟಬಿದ್ದು ನಾಲ್ಕೈದು ವರ್ಷ ಮಳೆಯಿಲ್ಲದೆ, ನಮ್ಮ ಮಕ್ಕಳು ಮಳೆ ಎಂದರೇನೆಂಬುದನ್ನೇ ಕಾಣದೆ ಮಳೆಯೆಂದರೇನು ಎಂದು ಕೇಳಿದರೆ ತೋರಿಸುವುದಕ್ಕೆ ಸಹ ಮಳೆ ಇಲ್ಲದಂಥ ಸ್ಥಿತಿಯಲ್ಲಿ ಬಿದ್ದು ಅವಸ್ಥೆ ಪಡುವಾಗ ಈಗ ನಮ್ಮ ಡಿಸ್ಟ್ರಿಕ್ಟಿಗೆ ಕೊಟ್ಟಿರುವುದು ಸಾಕೇ ಸಾಕು ಎಂದು ಹೇಳಿದರೆ ಏನುಹೇಳೋಣ! ಸಂಸ್ಥಾನಕ್ಕೆ ವಿದ್ಯುಚ್ಛಕ್ತಿ ಬಂದಾಗಿನಿಂದಲೂ ಇಲ್ಲಿಯವರೆಗೂ ನಮ್ಮ ಜಿಲ್ಲೆಗೆ ವಿದ್ಯುಚ್ಛಕ್ತಿ ಕೊಡಬೇಕೆಂಬ ಯೋಚನೆಯೇ ಇರಲಿಲ್ಲ. ಅಂಥದರಲ್ಲಿ ನಮ್ಮ ಕಡೆಗೆ ಹೀಗೆ ವಿದ್ಯುಚ್ಛಕ್ತಿ ಕೊಡಬೇಕೆಂದು ಕೇಂದ್ರದವರು ಸಹಾಯ ಮಾಡಿರುವಾಗ ಈ ವರ್ಷ ನಮ್ಮಲ್ಲಿಗೆ ವಿದ್ಯುಚ್ಛಕ್ತಿ ತಂದು 25 ಸೈಕಲ್ ಕರೆಂಟ್ ಕೊಟ್ಟಿದ್ದಾರೆ! ಇದನ್ನು ಮುಂದೆ 50 ಸೈಕಲ್ಲಿಗೆ ಬದಲಾಯಿಸುತ್ತಾರಂತೆ, ನಮ್ಮ ಕಡೆಯ ಜನಗಳಲ್ಲಿ ಹಣ ಬೇರೆಇಲ್ಲ. ಅವರ ಆರ್ಥಿಕಸ್ಥಿತಿಗತಿಗಳನ್ನು ಅರಿತು ಸಾಕಾದಷ್ಟು ಸಹಾಯವನ್ನೊದಗಿಸಬೇಕೆಂದು ನಾನು ಒತ್ತಾಯ ಪೂರ್ವಕವಾಗಿ ಕೇಳಿಕೊಳ್ಳುತ್ತೇನೆ.

ಇನ್ನೊಂದೇನೆಂದರೆ, ಸರ್ಕಾರದವರು ನಮ್ಮ ಕಡೆಗೆ ರೆಮಿಷನ್ ಕೊಟ್ಟಿರುವುದಾಗಿ ಇಲ್ಲಿ ಹೇಳುತ್ತಾರೆ. ಆದರೆ ವಾಸ್ತವವಾಗಿ ನೋಡಿದರೆ ಕೆಲವು ಕಡೆ ಕೊಟ್ಟಿದ್ದಾರೆ. ಇನ್ನು ಕೆಲವುಕಡೆ ಇವತ್ತಿಗೂ ಒತ್ತಾಯವಾಗಿ ವಸೂಲು ಮಾಡುತ್ತಿದ್ದಾರೆ. ಬಾಗೇಪಲ್ಲಿ ಮತ್ತು ಗುಡಿಬಂಡೆ ಮುಂತಾದ ಕೆಲವುಕಡೆ ಹೀಗೆ ವಸೂಲುಮಾಡುತ್ತಿರುವುದನ್ನು ಹೇಳಿದರೆ ಅಲ್ಲಿನ ಅಧಿಕಾರಿಗಳು ತಮ್ಮಗಿನ್ನೂ ಆ ಬಗ್ಗೆ ಸೂಚನೆಬಂದಿಲ್ಲ, ಬೇಕಾದರೆ ರೆವೆನ್ಯೂ ಕಮಿಷನರ್ ರವರಿಗೆ ಅಪೀಲು ಹೋಗಿ ಎಂದು ಹೇಳುತ್ತಿದ್ದಾರೆ. ಹೀಗೆ ತಾವು ಇಲ್ಲಿ ಒಂದು ಆರ್ಡರ್ ಮಾಡಿದ್ದೇವೆಂದು ಭರವಸೆ ಕೊಡುವುದೊಂದು ಅಲ್ಲಿ ಮಾಡುವುದೊಂದು ಆಗಿದೆ. ನಿಮ್ಮ ಆರ್ಡರುಗಳನ್ನು ಅವರು ಇಂಪ್ಲಿಮೆಂಟ್ ಮಾಡಿರುವುದಕ್ಕೆ ಕಾರಣವೇನು? ಇದರಿಂದ ಏನು ಅರ್ಥ ಮಾಡಬೇಕೋ ನನಗೆ ಗೊತ್ತಾಗುವುದಿಲ್ಲ.

ಇನ್ನೊಂದು ಅನುಕೂಲ ತಾವು ಅಲ್ಲಿ ಮಾಡಿಕೊಡಬಹುದಾಗಿತ್ತು. ಈಗ ಎಷ್ಟೋವರ್ಷದಿಂದ ಅಲ್ಲಿ ಚಿತ್ರಾವತಿ ಎಂದು ಒಂದು ನದಿ ಹರಿಯುತ್ತಿದೆ, ಈ ನದಿ ಸದಾ ಹರಿಯದೆ ಯಾವಾಗಲೋ ಒಂದು ಸಾರಿ ಹರಿಯುತ್ತದೆ. ಅದಕ್ಕೆ ಒಂದು ಅಣೆಕಟ್ಟು ಕಟ್ಟಬೇಕೆಂದು ಮೊದಲಿನಿಂದಲೂ ಹೇಳುತ್ತಿದ್ದೇವೆ. ತಮ್ಮನ್ನು ಕೇಳಿದರೆ ಪಾಂಚವಾರ್ಷಿಕ ಯೋಜನೆಯಲ್ಲಿ ಸೇರಿದೆಯೆಂದು ಹೇಳುತ್ತೀರಿ. ಎಸ್ಟಿಮೇಟೂ ಆಗಿದೆಯೆಂದು ಹೇಳುತ್ತೀರಿ. ಆದಗೂ ಕಾರ್ಯರೂಪಕ್ಕೆ ಮಾತ್ರ ಬರುವ ಹಾಗೆ ಕಾಣುವುದಿಲ್ಲ. ಅದೇನಾಯಿತೋ, ಎಂದು

ಕಾರ್ಯರೂಪಕ್ಕೆ ಬರುತ್ತದೋ ಗೊತ್ತಾಗುವುದಿಲ್ಲ. ಕೇಳಿದಾಗಲೆಲ್ಲಾ ಮಾತ್ರ 3½ ಲಕ್ಷ ರೂಪಾಯಿಗಳಿಗೆ ಎಸ್ಟಿಮೇಟ್ ಆಗಿದೆ, ಪಾಂಚವಾರ್ಷಿಕ ಯೋಜನೆಯಲ್ಲಿ ಸೇರಿದೆಯೆಂದು ಹೇಳಿಬಿಡುತ್ತೀರಿ.

ಆಮೇಲೆ ರಷ್ಯನ್ ಗೋಧಿಯನ್ನು ಅಲ್ಲಿ ಹಂಚುತ್ತಿದ್ದೇವೆಂದು ಹೇಳುತ್ತಿದ್ದೀರಿ. ಆದರೆ ಅಲ್ಲಿನ ಬಡಜನರಿಗೆ ತಿನ್ನುವುದಕ್ಕೆ ಕೈಯಲ್ಲಿ ಹಣವಿದ್ದರೆ ತಾನೆ ತಿನ್ನುವುದು. ಕೆಲಸ ಮಾಡಿದರೂ ಅಲ್ಲಿವ ಓವರ್ಸಿಯರ್ ಬಂದು ಅಳತೆ ಮಾಡಿಕೊಂಡು ತಿಳಿಸಿದರೇನೇ ಡಿಪೋದಲ್ಲಿ ಅವರು ಕಾಳು ಕೊಡುವುದು. ಆದರೆ ಆ ಸಬ್ ಓವರ್ಸಿಯರ್ ಎಲ್ಲೋ ಹೋಗಿರುತ್ತಾನೆ. ಇನ್ನು ಕೆಲವು ವೇಳೆ ಮೇಸ್ತ್ರಿಯಿಲ್ಲದೆ ಕೆಲಸವನ್ನೇ ತೆಗೆದುಕೊಳ್ಳುವುದಿಲ್ಲವೆಂದು ಬಿಡುತ್ತಾರೆ. ಹೀಗೆ ಮೇಸ್ತ್ರಿಯಿಲ್ಲವೆಂದು ಹೇಳಿ ನಿಲ್ಲಿಸುವುದು, ಆಮೇಲೆ 8 ದಿವಸ ಕೆಲಸ ಮಾಡಿದ್ದರೆ 15 ದಿವಸ ಪೂರ್ತಿಯಾದಹೊರತು ಕೂಲಿ ಕೊಡುವುದಿಲ್ಲವೆಂದು ಹೇಳುವುದು ಈ ರೀತಿ ಮಾಡುತ್ತಿದ್ದರೆ ಆ ಕೂಲಿಯವರು ಹೇಗೆ ಹೊಟ್ಟೆಕಟ್ಟಿ ಜೀವನ ಮಾಡುವುದು! ಈ ವಿಚಾರದಲ್ಲಿ ಕೆಲವರು ಹೋಗಿ ಗಲಾಟೆ ಕೂಡ ಮಾಡಿದ್ದಾರೆ. Is this callousness on the part of the Government? Or is this callousness on the part of the officers concerned?

Sri H. SIDDAVEERAPPA (Minister for Home and Industries).—Is that parliamentary, Sir?

Sri B. V. NARAYANA REDDY.—I am not saying anything unparliamentary. I am speaking facts. They are not empty words. You have given electricity to only one town, that too of 25 cycles. Why don't you convert it into 50 cycles for goodness sake and give us sufficient power for irrigation. If I am telling any untruth, that is a different matter. I request you to implement these things and do some good to us.

ಶ್ರೀ ಜಿ. ದುಗ್ಗಪ್ಪ (ಹೊಳಲ್ಕೆರೆ–ಅನುಸೂಚಿತ ಜಾತಿಗಳು).—ಸ್ವಾಮಿ, ಮಾನ್ಯ ಸದಸ್ಯರಾದ ಶ್ರೀ ಇಮಾಂಸಾಹೇಬರು ತಂದಿರುವ ನಿಲುವಳಿ ಸೂಚನೆ ಬಹಳ ಸಮಯೋಚಿತವಾಗಿದೆ. ನಮ್ಮ ಜಿಲ್ಲೆಯ ಸದಸ್ಯರಾದ ಶ್ರೀ ಎ. ಭೀಮಪ್ಪನಾಯಕರೂ ಮತ್ತು ಮುಲ್ಕ ಗೋವಿಂದರೆಡ್ಡಿಯವರೂ ಮತ್ತು ಶಿವಣ್ಣನವರೂ ತೆರದ ಮನಸ್ಸಿನಿಂದ ತಮ್ಮ ಅನುಭವಗಳನ್ನು ಹೇಳಿದ್ದಾರೆ. ಶ್ರೀಮತಿ ಬಳ್ಳಾರಿ ಸಿದ್ದಮ್ಮನವರೂ ನೊಂದ ಮನಸ್ಸಿನಿಂದ ಅಲ್ಲಿನ ಕಷ್ಟಗಳನ್ನು ಒಪ್ಪಿಸಿದ್ದಾರೆ. ಇವುಗಳನ್ನು ತಾವು ಖಂಡಿತ ಮನಸ್ಸಿಗೆ ತಂದುಕೊಂಡು ತಕ್ಷಣ ಕಾರ್ಯಕ್ರಮಗಳನ್ನು ಕೈಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಬರೀ ಭಾಷಣಕ್ಕಾಗಿ ನಿಲುವಳಿ ಸೂಚನೆಯ ಮೇಲೆ ಮಾತನಾಡಬೇಕೆಂಬ ಚಟಕ್ಕಾಗಿ ಮಾತಾಡುವ ಮಾತುಗಳಲ್ಲ ಇವು. ಖಂಡಿತವಾಗಿ ಮನನೊಂದು ಅವರು ನಿಲುವಳಿಸೂಚನೆಯನ್ನು ತಂದಿದ್ದಾರೆ. ಆದ್ದರಿಂದ ಇದರ importanceನ್ನು ತಾವು ಅರಿತುಕೊಂಡೇ ಕಾರ್ಯಕ್ರಮ ಕೈಕೊಳ್ಳಬೇಕೆಂದು ನಾನು ಹೇಳುತ್ತೇನೆ.

ಈ ಸಂದರ್ಭದಲ್ಲಿ ಒಂದು ಸಮಾಚಾರ ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ಕ್ಷಾಮ ನಿವಾರಣಾ ಮಂತ್ರಿಗಳಾದ ಶ್ರೀ ಮಂಜಪ್ಪನವರು ಮೊನ್ನೆ ತುಮಕೂರು ಜಿಲ್ಲೆಯಲ್ಲಿ ಪ್ರವಾಸಮಾಡಿದರು ಅದರಂತೆಯೇ ನಮ್ಮ ಜಿಲ್ಲೆಗೂ ಸಹಾ ಬಂದು ನಮ್ಮ ಕಷ್ಟಸುಖಗಳನ್ನು ನೋಡಿಕೊಂಡು ಹೋಗಿದ್ದರೆ ನಮಗೂ ಎಷ್ಟೋ ಧೈರ್ಯವಾಗುತ್ತಿತ್ತು. 9ನೆಯ ತಾರೀಖಿನ ದಿನ ಸೆಂಟ್ರಲ್ ಡಿಸ್ಟ್ರೆಸ್ ರಿಲೀಫ್ ಕಮಿಟಿಯೂ ಇತ್ತು, ಆಗ ನಮ್ಮ ಡಿಸ್ಟ್ರಿಕ್ಟಿನ ಡೆಪ್ಯುಟೀ ಕಮೀಷನರಿಗೆ ನಮ್ಮ ಜಿಲ್ಲೆಯ ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಕಷ್ಟ ಪರಿಸ್ಥಿತಿ ಹೇಗಿದೆಯೆಂದು ಎಲ್ಲರೂ ಹೇಳಿದ್ದಾರೆ. ಅಂದು 9ನೆಯ ತಾರೀಖು ವಿಲೇಜ್ ಪಂಚಾಯಿತಿ ಚೇರ್ಮನ್ ಮೊದಲುಗೊಂಡು ಪ್ರತಿಯೊಬ್ಬರೂ ಬಂದು ಸೇರಿದ್ದರೆಂದರೆ ಪರಿಸ್ಥಿತಿ ಹೇಗಿತ್ತೆಂಬುದನ್ನು ಊಹಿಸಿಕೊಳ್ಳಬಹುದು. ಪಾರ್ಲಮೆಂಟ್ ಸದಸ್ಯರಾದ ಗೋವಿಂದರೆಡ್ಡಿಯವರೂ ಇದ್ದರು. ಎಲ್ಲರೂ ಸೇರಿ ಅನೇಕ ಸಲಹೆಗಳನ್ನು ಕೊಟ್ಟರು. ಆ ಸಲಹೆಗಳನ್ನು ಕಾರ್ಯರೂಪಕ್ಕೆ ತರುವುದಕ್ಕೆ ಆಸಕ್ತಿವಹಿಸಿ ಮುಂದುವರಿಯಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಶಿವಪ್ಪನವರು ಹೇಳಿದಂತೆ ನೇಯ್ಗೆಯವರ ಸ್ಥಿತಿ ಚಿಂತಾಜನಕವಾಗಿದೆ. ಒಟ್ಟಿನಲ್ಲಿ ಮಧ್ಯಮವರ್ಗದವರ ಸ್ಥಿತಿಯನ್ನು ಹೇಳುವ ಹಾಗಿಲ್ಲವೆನ್ನಬೇಕು. ಅವರು ಎಂದೂ ಕೂಲಿಗೆ ಹೋದವರಲ್ಲ ಹಿಂದೆ ಕ್ಷಾಮ ಬಂದಾಗಲೂ ಅವರ ಕಷ್ಟವನ್ನು ಮನಗಂಡು ಅವರುಗಳಿಗೆಲ್ಲಾ ರಾಟೆಗಳನ್ನೊದಗಿಸಿ ನೂಲು ತೆಗೆಯುವುದಕ್ಕೆ ಅವಕಾಶಮಾಡಿಕೊಟ್ಟು ಆ ಹೆಣ್ಣು ಮಕ್ಕಳು ಮನೆಯಲ್ಲೇ ಇದ್ದುಕೊಂಡು ತಮ್ಮ ಕೈಗಾರಿಕೆಯನ್ನು ರೂಢಿಸಿಕೊಳ್ಳಲು ಸಹಾಯ ಮಾಡಿದ್ದರು; ಅದೇ ರೀತಿಯಾಗಿ ಈಗಲೂ ಮಾಡಿಕೊಡಬೇಕೆಂದು ನಾವು ಡೆಪ್ಯುಟಿ ಕಮೀಷನರನ್ನು ಕೇಳಿಕೊಂಡೆವು. ಆದರೆ ಅದಕ್ಕೆ ಅವರು 'ಅದು ಸಾಧ್ಯವಾಗುವುದಿಲ್ಲ, ರಾಟೆಗಳನ್ನು ಒದಗಿಸಲಿಕ್ಕೆ technical objection ಗಳು ಬರುತ್ತವೆಂದು' ಹೇಳಿದರು. ಈ ತೊಂದರೆಗಳನ್ನೆಲ್ಲಾ ತಾವು ಡೆಪ್ಯುಟೀ ಕಮೀಷನರ ವರದಿಯನ್ನು ನೋಡಿ ಅವರು ಸೂಚಿಸಿರುವಂತೆ ಅವುಗಳನ್ನು ಪರಿಶೀಲನೆಮಾಡಿ ಕೆಲಸಮಾಡುವುದಕ್ಕೆ ಆ ಅನುಕೂಲಗಳನ್ನೆಲ್ಲಾ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಅಲ್ಲಿ ಖಾಯಂ ರಿಲೀಫ್ ಕಾಮಗಾರಿಗಳಾವುವನ್ನು ಮಾಡಬೇಕೆಂಬುದನ್ನು ನೋಡಿ ಮಾಡಬೇಕೆಂದು ಮಿತ್ರರು ಹೇಳಿದರು. ನಮ್ಮ ಜಿಲ್ಲೆಯಲ್ಲಿ ಬೆಳೆಯುವುದು ಮಳೆಯ ಆಧಾರದ ಮೇಲೆ. ಒಂದು ವಿಷಯವನ್ನು ಶ್ರೀ ಭೀಮಪ್ಪನಾಯಕರು ಏಕೆ ಹೇಳುವುದಕ್ಕೆ ಮರೆತರೋ ಗೊತ್ತಿಲ್ಲ. ನಮ್ಮ ಜಿಲ್ಲೆಯಲ್ಲಿ ಮಳೆ ಕಡಮೆಯಾದರೂ 'underground water' ಮೇಲೆಯೇ ಇದೆ, ಉದಾಹರಣೆಗೆ, ಚಳ್ಳಕೆರೆ ತಾಲ್ಲೂಕಿನಲ್ಲಿ ನಮ್ಮ ದೇಶದಲ್ಲಿ ಇನ್ನೆಲ್ಲೂ ಇಲ್ಲದಷ್ಟು ಕಪಿಲೆ ಬಾವಿಗಳಿವೆ. ಸುಮ್ಮನೆ ಟ್ರಾಕ್ಟರುಗಳಿಂದ ವ್ಯವಸಾಯಮಾಡಿ ಎಂದು ಹೇಳುವುದರಿಂದ ಅಥವಾ ಪಠಗಳನ್ನು ತಯಾರು ಮಾಡಿ ಮಂತ್ರಿಗಳ ಕೊಠಡಿಗಳಲ್ಲಿ ತೂಗುಹಾಕುವುದರಿಂದ ಪ್ರಯೋಜನವಿಲ್ಲ.

ಶ್ರೀ ಎಚ್. ಸಿದ್ದವೀರಪ್ಪ.—ಅದನ್ನು ನಾವೂ ತಿಳಿದುಕೊಂಡಿದ್ದೇವೆ.

ಶ್ರೀ ಜಿ. ದುಗ್ಗಪ್ಪ.—ಜನರಿಗೆ ಪ್ರತ್ಯಕ್ಷವಾಗಿ ಅನುಕೂಲ ಮಾಡಿಕೊಡಬೇಕು. ಖಾಯಂ ಪರಿಹಾರ ಒದಗಿಸಬೇಕು, ಕಪಿಲೆ ಬಾವಿಗಳ ಬದಲು ಟ್ಯೂಬ್‌ವೆಲ್

(ಶ್ರೀ ಜಿ. ದುಗ್ಗಪ್ಪ.)

ಗಳನ್ನು ತೆಗೆಸಬೇಕು. ಟ್ರಾಕ್ಟರುಗಳ ಮೇಲೆ ಹಣವನ್ನು ಹಾಳು ಮಾಡಬಾರದು. ಈ ಟ್ರಾಕ್ಟರು ಯೋಜನೆಯಿಂದ ನಮ್ಮ ಡಿಸ್ಟ್ರಿಕ್ಟಿನಲ್ಲಿ ತೊಂದರೆಯಾಗಿದೆ. ಟ್ಯೂಬ್‌ವೆಲ್ ಯೋಜನೆಯನ್ನು ಜಾರಿಗೆ ತಂದರೆ ಜನರಿಗೆ ಅನುಕೂಲವಾಗುತ್ತದೆಯಲ್ಲದೆ ಬಾಯಂ ಪರಿಹಾರವೂ ದೊರೆಯುತ್ತದೆ. ಇದಕ್ಕೆ ಗಮನ ಕೊಡಬೇಕೆಂದು ಈ ಸಂದರ್ಭದಲ್ಲಿ ಒತ್ತಾಯ ಪೂರ್ವಕವಾಗಿ ಹೇಳುತ್ತೇನೆ.

ಇನ್ನೊಂದು ವಿಷಯ ಹೇಳುವುದನ್ನು ಇತರರು ಮರೆತರು. ಶ್ರೀ ಇಮಾಮ್‌ರವರು ಮಂತ್ರಿಗಳಾಗಿದ್ದಾಗಲೂ ಕಾಗಳಗೆರೆ ಮತ್ತು ಮುತ್ತಗದೂರು ಕೆರೆ ಕೆಲಸಗಳನ್ನು ಮಾಡಿಕೊಡಿ ಎಂದು ಅರ್ಜಿಗಳನ್ನು ಕೊಟ್ಟು ಸಾಕಾಗಿದೆ. ಹೆಚ್ಚು ಮಳೆ ಬೀಳುವ ಸ್ಥಳದಲ್ಲಿರುವ ಕೆರೆಗೆ ಮುತ್ತಗದೂರು ಕೆರೆ ಪಕ್ಕದಲ್ಲಿದೆ. ಮಳೆಯಿಲ್ಲದಿದ್ದರೂ ಅಲ್ಲಿ 18 ಅಡಿ ನೀರಿರುತ್ತದೆ. ಎಲ್ಲಿ ಇಲ್ಲದಿದ್ದರೂ ಅಲ್ಲಿ ಮಳೆ ತಪ್ಪುವುದಿಲ್ಲ. ಕಾಗಳಕೆರೆ ಮಾಡಿಕೊಡಿ ಎಂದು ಎಷ್ಟೋ ವರ್ಷಗಳಿಂದಲೂ ಕೇಳುತ್ತಿದ್ದೇವೆ; ಆದರೂ ಮಾಡಿಲ್ಲ. ಕೆಲವು ವಿಷಯಗಳನ್ನು ತಮ್ಮ ಮುಂದೆ ಹೇಳದೆ ವಿಧಿಯಿಲ್ಲ. ಮಳೆಯಿಲ್ಲದಿರುವುದು ಒಂದು ಕಡೆ. ಕುಡಿಯುವ ನೀರಿಗೆ ನಮ್ಮ ಜಿಲ್ಲೆಯಲ್ಲಿರುವ ಅಭಾವವನ್ನು ಹೇಳುವುದಕ್ಕೇ ಸಾಧ್ಯವಿಲ್ಲ. ಅಲ್ಲಿನ ಪರಿಸ್ಥಿತಿಯನ್ನು ಸರಿಯಾಗಿ ಸರ್ಕಾರದವರು ಮನಗಾಣಬೇಕಾದರೆ, ಸಂಬಂಧಪಟ್ಟ ಮಂತ್ರಿಗಳು ತಕ್ಷಣ ಬಂದು ನಮ್ಮ ಜಿಲ್ಲೆಯ ಪ್ರತಿಯೊಂದು ತಾಲ್ಲೂಕಿಗೂ ಹೋಗಿ ಸಂಚಾರ ಮಾಡಿಕೊಂಡು ಬಂದು ಅಲ್ಲಿನ ಕಷ್ಟಗಳನ್ನು ತಿಳಿಯಲೆಂದು ಕೇಳಿಕೊಳ್ಳುತ್ತೇನೆ. ಕುಡಿಯುವ ನೀರಿನ ಬಾವಿಗಳಿಗೆ ರಿಲೀಫ್ ಕಾಮಗಾರಿಗಳ ಹಣದಲ್ಲಿ ಅವಕಾಶ ಮಾಡಿಕೊಡಿ ಎಂದು ಕೇಳಿದರೆ, ರೂಲ್ಸ್ ಪ್ರಕಾರ ಇದರಲ್ಲಿ ತೆಗೆದುಕೊಳ್ಳುವುದಕ್ಕಾಗುವುದಿಲ್ಲ ಎಂದು ಡೆಪ್ಯುಟಿ ಕಮೀಷನರು ಹೇಳುತಾರೆ. ಶ್ರೀ ಮುಲ್ಕ ಗೋವಿಂದರೆಡ್ಡಿಯವರು ಹೇಳಿದ ಹಾಗೆ, ನಮ್ಮ ಜಿಲ್ಲೆಗೆ ಈ ಬಾಬಿಗೆ 20 ಸಾವಿರ ರೂಪಾಯಿಗಳನ್ನು ಒದಗಿಸಿದ್ದಾರೆ ಇದು ಬಹಳ ಶೋಚನೀಯ. ಈ ದಿವಸ ನಮ್ಮ ಜಿಲ್ಲೆಗೆ ಬಂದು ನೋಡಲಿ, ಕುಡಿಯುವ ನೀರಿನ ಬಾವಿಗಳೇ ಇಲ್ಲ ಎಷ್ಟೋ ಹಳ್ಳಿಗಳಲ್ಲಿ. ಕಡಬನ ಕಟ್ಟೆ ಎಂಬ ಒಂದು ಹಳ್ಳಿಗೆ ಯಾರೂ ಹೆಣ್ಣು ಕೊಡುವುದಿಲ್ಲ.- ಇದಕ್ಕೆ ಕಾರಣ ಅಲ್ಲಿ ಕುಡಿಯುವ ನೀರಿಲ್ಲವೆಂಬುದು. ಇಂಥ ಗ್ರಾಮಗಳು ಎಷ್ಟೋ ಇವೆ. ನಾನು ಸುಮ್ಮನೆ ಭಾಷಣ ಮಾಡಬೇಕೆಂದಾಗಲಿ, ಮಾತನಾಡಬೇಕೆಂಬ ಚಟದಿಂದಾಗಲಿ ಹೇಳುತ್ತಿಲ್ಲ. ಅಲ್ಲಿನ ಕಷ್ಟವನ್ನು ಮನಸ್ಸಿಗೆ ಹಚ್ಚಿಕೊಂಡು ಡೆಪ್ಯುಟಿ ಕಮೀಷನರು ಅನೇಕ ಸಲಹೆಗಳನ್ನು ಕಳುಹಿಸಿದ್ದಾರೆ. ಕಳೆದ 9ನೆಯ ತಾರೀಖು ಸೇರಿದ್ದ ಜಿಲ್ಲಾ ಡಿಸ್ಟ್ರೆಸ್ ರಿಲೀಫ್ ಕಮಿಟಿಯಲ್ಲಿ ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ; ಅವುಗಳನ್ನು ಕಾರ್ಯಗತಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಲ್ಲಿ ಗ್ರಾಮ ಕೈಗಾರಿಕೆಗಳನ್ನು ಸ್ಥಾಪಿಸಿ ಬಡಜನರಿಗೆ ಕೆಲಸಗಳನ್ನೊದಗಿಸಿ, ನಮ್ಮ ಜಿಲ್ಲೆಯಲ್ಲಿ ಕಷ್ಟದಲ್ಲಿರುವ ಜನರಿಗೆ ಪರಿಹಾರವನ್ನೊದಗಿಸಬಹುದು. ಅಲ್ಲಿ ಇನ್ನೂ ಮಳೆ ಬಂದಿಲ್ಲ, ಇನ್ನೂ ಬಿತ್ತನೆ ಆಗಿಲ್ಲ. ಜನರಿಗೆ ಗಂಜಿಗೂ ಕಷ್ಟವಾಗಿದೆ. ಅಲ್ಲಿ 'Disabled persons, expectant mothers' ಇವರ ಕಷ್ಟವನ್ನಂತೂ ಹೇಳತೀರದು. ಸೀರೆ, ಬಟ್ಟೆಗಳನ್ನು ಹಂಚಿ ಎಂದು ರೆಡ್‌ಕ್ರಾಸ್‌ನವರನ್ನು ಕೇಳಿಕೊಂಡಿದ್ದೇವೆ. ಇಷ್ಟು ಕೇಳಿಕೊಳ್ಳಬೇಕಾದರೆ ನಮ್ಮ ಪರಿಸ್ಥಿತಿ ಏನೆಂಬುದನ್ನು ಯೋಚನೆಮಾಡಿ. ಯಾವಾಗಲೂ ನಮ್ಮ ಜಿಲ್ಲೆಯ ಜನ ಕೇಳಿಕೊಳ್ಳುವ ಸ್ವಭಾವದವರಲ್ಲ, ಆದರೂ ಈಗ ಕೇಳಿಕೊಳ್ಳುವ ಪರಿಸ್ಥಿತಿ ಬಂದಿದೆ. ಖಂಡಿತವಾಗಿ ಯಾರಾದರೂ ಬಂದು ನೋಡಿ, ತಕ್ಷಣ ಕಾರ್ಯಕ್ರಮ ಕೈಕೊಳ್ಳಬೇಕೆಂದು ಬೇಡಿಕೊಳ್ಳುತ್ತೇನೆ.

ಶ್ರೀ ಎಲ್. ಸಿದ್ದಪ್ಪ (ಚನ್ನಗಿರಿ).—ಶ್ರೀ ಇಮಾಮ್‌ರವರು ಸಭೆಯ ಮುಂದೆ ಮಂಡಿಸಿರುವ ಈ ನಿಲುವಳಿ ಸೂಚನೆಯನ್ನು ಸಮರ್ಥಿಸಿ ಎರಡು ವಿಷಯಗಳನ್ನು ಸರ್ಕಾರದವರ ಗಮನಕ್ಕೆ ತರುತ್ತೇನೆ. ತಾತ್ಕಾಲಿಕವಾಗಿ ಏನು ಸಹಾಯ ಕೊಟ್ಟರೆ ಅದರಿಂದ ನಿಜವಾಗಿ ಅಲ್ಲಿನ ಜನರ ಕಷ್ಟ ಪರಿಹಾರವಾಗುತ್ತದೆ ಎಂಬ ಬಗ್ಗೆ ಕೆಲವು ಅಂಶಗಳನ್ನು ಅವರ ಗಮನಕ್ಕೆ ತರಲಿಚ್ಛಿಸುತ್ತೇನೆ. ಈಗ ಅಭಾವಕ್ಕೊಳಗಾಗಿರುವ ಪ್ರದೇಶಗಳನ್ನು ಎರಡು ಭಾಗವಾಗಿ ವಿಂಗಡಿಸಬಹುದು: ಒಂದನೆಯದು, 1952—53ನೆಯ ಸಾಲಿನಲ್ಲಿ ಮುಂಗಾರು ಮಳೆಬಾರದೆ ಫಸಲು ಹಾಕದೆ ಅಭಾವಕ್ಕೊಳಗಾಗಿರುವುದು ಕೆಲವು ಪ್ರದೇಶಗಳು, ಎರಡನೆಯದು ಅದರೊಂದಿಗೆ 1953ರಲ್ಲಿ ಮಳೆಯೇ ಬಾರದೇಯಿರುವ ಪ್ರದೇಶಗಳು ಕೆಲವು. ಚಿತ್ರದುರ್ಗ ತಾಲ್ಲೂಕಿನಲ್ಲಿ ಮತ್ತು ಅದಕ್ಕಿಂತ ಪೂರ್ವದಿಕ್ಕಿಗಿರುವ ಪ್ರದೇಶ ಎರಡನೆಯ ಗುಂಪಿಗೆ ಸೇರತಕ್ಕ ಪ್ರದೇಶ. ಇನ್ನು ಚಿತ್ರದುರ್ಗ ತಾಲ್ಲೂಕಿನ ಪಶ್ಚಿಮಕ್ಕಿರುವ ಚನ್ನಗಿರಿ, ಹೊನ್ನಾಳಿ ತಾಲ್ಲೂಕುಗಳು ಕೂಡ ಮೊದಲನೆಯ ಗುಂಪಿಗೆ ಸೇರಿದುದು. ಅಲ್ಲಿ 1953ರಲ್ಲಿ ಮುಂಗಾರು ಮಳೆ ಬಾರದೇಯಿದ್ದು ಜನರಿಗೆ ವ್ಯವಸಾಯಕ್ಕನುಕೂಲವಾಗದೇಯಿರುವುದರಿಂದ ಜನರ ಪರಿಸ್ಥಿತಿ ಏನೆಂಬುದನ್ನು ತಿಳಿದುಕೊಳ್ಳಬೇಕು. 1953ರಲ್ಲಿ ಮುಂಗಾರಿಲ್ಲದೆ, ಪೈರು ಬೆಳೆಯುವುದಕ್ಕಾಗದೇಯಿರುವಾಗ 1953—54ನೆಯ ಸುಗ್ಗಿಯವರೆಗೆ, ರೈತರ ಕೈಗೆ ಬೆಳೆ ಬರುವವರೆಗೆ ಅವರಿಗೆ ಪರಿಹಾರ ಒದಗಿಸಬೇಕಾಗಿದೆ. ಶ್ರೀ ಇಮಾಮ್‌ರವರು ಹೇಳಿದ ಹಾಗೆ, ಹಿಂಗಾರು ಮಳೆ ಕೆಲವು ಪ್ರಾಂತ್ಯಗಳಲ್ಲಿ ಬಂತು. ಎಲ್ಲಿ Black cotton soil ಪ್ರದೇಶವಿದೆಯೋ ಅಲ್ಲಿ ಹಿಂಗಾರು ಬೆಳೆ ಕೆಲವು ಕಡೆ ಬರುತ್ತದೆ. ಒಟ್ಟು ಸುಮಾರು ಶೇಕಡ 10 ರಷ್ಟೆಂದು ಒಪ್ಪಿಕೊಳ್ಳಬಹುದು. ಆ ರೀತಿ ಬೆಳೆಯಾದುದರ ಪರಿಣಾಮವಾಗಿ ಹಾಹಾಕಾರ ಇದ್ದದ್ದು ಸ್ವಲ್ಪ ಕಡಮೆಯಾಗಿ, ಜನರನ್ನು ಸ್ವಲ್ಪ ಮಟ್ಟಿಗೆ ಸಮಾಧಾನ ಮಾಡಿತು. ಮೇ ಮತ್ತು ಜೂನ್ ತಿಂಗಳಲ್ಲಿ ಹಿಂದೆ ಅಲ್ಲಿನ ಜನ 1952ನೆಯ ಇಸವಿಯಲ್ಲಿ ಏನು ಅನುಭವಿಸಿದ್ದರೋ ಅಂಥ ಕಷ್ಟ ಪರಿಸ್ಥಿತಿಯನ್ನನುಭವಿಸಬೇಕಾಯಿತು. ಜನರಿಗೆ ಕೆಲಸಮಾಡುವುದಕ್ಕೆ ಕೆಲಸವಿಲ್ಲದೇ ಹೋಯಿತು. ಕಾಳಿನ ಅಭಾವದಿಂದ ಊರೂರು ತಿರುಗುವ ಸಂದರ್ಭ ಬಂತು. ಇನ್ನೊಂದು ವಿಷಯ. ಕೆಲವು ಭಾಗಗಳು ಸಾಮಾನ್ಯವಾಗಿ ಅಭಾವಕ್ಕೊಳಗಾಗುವ ಭಾಗಗಳು. ಇದನ್ನು ಸರ್ಕಾರದವರು ನಿರೀಕ್ಷಿಸಿ ರಿಲೀಫ್ ಕಾಮಗಾರಿಗಳನ್ನು ಮಾಡಿಸಿ, ಅನೇಕ ವಿಧವಾದ ಇತರ ಕೆಲಸಗಳನ್ನೊದಗಿಸಿ ಅನುಕೂಲಮಾಡಿಕೊಟ್ಟಿದ್ದರೆ ಇಂಥ ಪ್ರದೇಶಗಳಲ್ಲಿ ಇಷ್ಟು ಕಷ್ಟ ಬರುತ್ತಿರಲಿಲ್ಲ. ಯಾವ ಯಾವ ಅನುಕೂಲಗಳನ್ನು ಮುಂದುವರಿಸಿಕೊಂಡು ಹೋಗಬೇಕಾಗಿತ್ತೋ ಅವುಗಳನ್ನು ಮುಂದುವರಿಸಿಕೊಂಡು ಹೋಗಲಿಲ್ಲ.

5 P.M.

ಈ ಹೊತ್ತು ನಾನು ಉದಾಹರಣೆಗಾಗಿ ಹೇಳುವುದಾದರೆ, 1953ನೆಯ ಇಸವಿಯಲ್ಲಿ, ಎಂದರೆ ಇತ್ತೀಚೆಗೆ ಈ ಬಾವಿಗಳನ್ನು ತೆಗೆಸತಕ್ಕ ಬಗ್ಗೆ ಕೊಡಲಾಗುತ್ತಿದ್ದ

ಸಬ್‌ಸಿಡಿಯ ವಿಚಾರದಲ್ಲಿ ಮೊನ್ನೆ ತಾನೆ ಸರ್ಕಾರದವರು ಒಂದು ಹುಕುಮನ್ನು ಹೊರಡಿಸಿದ್ದಾರೆ. ಹಾಗೆ ಸಾದರುಮಾಡಿರುವ ಆಜ್ಞೆಯಲ್ಲೇ ಅದರ ವ್ಯಾಪ್ತಿಯೆಲ್ಲಾ ಕೇವಲ ಚಿತ್ರದುರ್ಗ, ಕೋಲಾರ ಮತ್ತು ತುಮಕೂರು ಈ ಮೂರು ಜಿಲ್ಲೆಗಳಲ್ಲಿ ಎಲ್ಲೆಲ್ಲಿ ಅಭಾವ ಪ್ರದೇಶವೆಂದು ಸಾರಲಾಗಿದೆಯೋ ಅಂಥ ಸ್ಥಳಗಳಿಗೆ ಮಾತ್ರ ಅನ್ವಯಿಸುವುದೆಂದು ಅದರಲ್ಲೇ ಹೇಳಲಾಗಿದೆ. ತಮಗೆಲ್ಲರಿಗೂ ಗೊತ್ತಿರುವ ಹಾಗೆ, 1952 ರಿಂದಲೂ ಶಿವಮೊಗ್ಗ ಜಿಲ್ಲೆಯ ಚನ್ನಗಿರಿ ಮತ್ತು ಹೊನ್ನಾಳಿ ತಾಲ್ಲೂಕುಗಳಲ್ಲಿ ಮಳೆ ಬೆಳೆಗಳು ಸರಿಯಾಗಿ ಆಗದೆ ಅಲ್ಲಿ ವಿಶೇಷ ತೊಂದರೆಯಾಗಿರತಕ್ಕ ಅಂಶ ಸರ್ಕಾರದವರಿಗೆ ಗೊತ್ತಿದ್ದರೂ ಕೂಡ ಅವರು ಅದೇನು ಕಾರಣದಿಂದಲೋ ಅಲ್ಲಿ ಮಾತ್ರ ಯಾವ ರಿಲೀಫ್ ಕಾಮಗಾರಿಗಳನ್ನೂ ಈ ತಹಲ್‌ವರೆಗೂ ಕೈಕೊಂಡಿರುವುದಿಲ್ಲ. ಈಗಲೂ ಸಹ ಆ ಪ್ರದೇಶದಲ್ಲಿ ಹಳ್ಳಿಗಳಲ್ಲಿರತಕ್ಕ ಜನರಿಗೆ ತುಂಬಾ ತೊಂದರೆ ಉಂಟಾಗಿ ಹಾಗೆ ಕಷ್ಟಕ್ಕೆ ಸಿಕ್ಕಿಕೊಂಡಿರುತ್ತಾರೆ. ಒಂದೊಂದು ಗ್ರಾಮದಲ್ಲಿಯೂ ನೂರಕ್ಕೆ ಅರವತ್ತರಷ್ಟು ಜನಗಳು ಯಾವ ಕೆಲಸಗಳೂ ಇಲ್ಲದೆ, ಕೂಲಿಯೂ ಸಿಕ್ಕದೆ ಬಹಳ ತೊಂದರೆಗಳನ್ನು ಅನುಭವಿಸುತ್ತಿದ್ದಾರೆ. ಈಗ ಅವರುಗಳಿಗೆ ಮೊದಲು ಏನಾದರೂ ಜೀವನ ನಡೆಸಲು ಅನುಕೂಲವಾಗತಕ್ಕಂಥ ರೀತಿಯಲ್ಲಿ ಕೆಲಸಗಳು ದೊರೆಯುವಂತೆ ಮಾಡಬೇಕಾದದ್ದು ಬಹಳ ಆವಶ್ಯಕ. ಈ ಬಗ್ಗೆ ಈಗಾಗಲೇ ಅನೇಕ ಮಾನ್ಯ ದಸ್ಯರುಗಳು ಸೂಚಿಸಿರುವಂತೆ ಸರ್ಕಾರದವರು ಯಾವುದಾದರೊಂದು ನಿರ್ದಿಷ್ಟವಾದ ಯೋಜನೆಯನ್ನು ಈ ಪರವಾಗಿ ಇಟ್ಟುಕೊಳ್ಳದೆಹೋದರೆ ಹೀಗೆ ಕಷ್ಟಕ್ಕೀಡಾಗಿರತಕ್ಕ ಜನರಿಗೆ ಮತ್ತು ಇಂಥ ಇಕ್ಕಟ್ಟಿನ ಪರಿಸ್ಥಿತಿಯಲ್ಲಿ ಸಿಕ್ಕಿಕೊಂಡಿರತಕ್ಕ ಜನಗಳಿಗೆ ತಾವು ಯಾವ ಸಹಾಯವನ್ನೂ ನೀಡಿದಂತಾಗುವುದಿಲ್ಲ. ಆದುದರಿಂದ ನಾನಾಗಲೇ ಸೂಚಿಸಿರತಕ್ಕ ನಾಲ್ಕಾರು ಅಭಾವ ಪ್ರದೇಶದ ಜನಗಳಿಗೆ ಮೊದಲು ಏನಾದರೂ ಕಾಮಗಾರಿಗಳನ್ನೊದಗಿಸುವುದು ಆವಶ್ಯಕ. ಅನಂತರ ತಾವು ಆಯಾ ಪ್ರದೇಶದ ಜನರಿಂದೊಡಗೂಡಿದ ಸಮಿತಿಗಳನ್ನು ಮಾಡಿ ಆ ಸಮಿತಿಯವರು ಕೊಡುವ ಸಲಹೆಗಳಿಗನುಸಾರವಾಗಿ ಪರಿಹಾರ ನೀಡಬಹುದು. ತಾವು ಒಂದು ವೇಳೆ ಹಾಗೆ ನಿರುದ್ಯೋಗಿಗಳಾಗಿರತಕ್ಕಂಥ ಜನಗಳು ಹೊರಗಡೆ ಎಲ್ಲಿ ಕೆಲಸ ದೊರೆಯುತ್ತದೋ ಅಲ್ಲಿಗೆ ಹೋಗ ಹುದೆಂಬುದಾಗಿ ಹೇಳಬಹುದು. ಆದರೆ ಹಾಗೆ ಹೊರಗಡೆ ಹೋಗಲು ಅವರಿಗೆ ಇಷ್ಟವಿಲ್ಲ; ಮತ್ತು ಹಾಗೆ ಮಾಡುವುದಕ್ಕೆ ಸಾಧ್ಯವೂ ಇಲ್ಲ. ಅದಕ್ಕೆ ಕಾರಣವೇನೆಂದರೆ, ಆ ಜನರೆಲ್ಲರೂ ವ್ಯವಸಾಯದ ಕಸುಬನ್ನವಲಂಬಿಸಿಕೊಂಡಿರತಕ್ಕಂಥವರು. ಅವರಿಗೆ ವ್ಯವಸಾಯದ ಕಾಲ ಪೂರೈಸಿದನಂತರ ಅಥವಾ ಹಾಗೆ ವ್ಯವಸಾಯದ ಕೆಲಸಗಳನ್ನು ನಡೆಸಲು ಅವಕಾಶವಿಲ್ಲದಿರುವಂಥ ಸಂದರ್ಭಗಳಲ್ಲಿ ಮಾತ್ರ ಅವರು ಕೂಲಿನಾಲಿ ಮಾಡಿಕೊಂಡು ಅದರಿಂದ ದುಡ್ಡನ್ನು ದುಡಿದು ಜೀವನ ಮಾಡತಕ್ಕಂಥ ಸ್ಥಿತಿಯಲ್ಲಿರುವುದರಿಂದ ಹೊರಗಡೆ ಹೋಗಲು ಅವರಿಗೆ ಸಾಧ್ಯವಿಲ್ಲ.

ಆದರೆ ಇತ್ತೀಚೆಗೆ ಸರ್ಕಾರದವರ ಮನೋಭಾವದಲ್ಲಿ ಒಂದು ಪರಿಣಾಮ ಉಂಟಾಗಿರಬಹುದು. ಏನೆಂದರೆ, ಇತ್ತೀಚೆಗೆ 1952-53ರಿಂದಲೂ ಮಳೆಯೇ ಬಾರದೆ ಇದ್ದಂಥ ಪ್ರದೇಶಗಳಲ್ಲಿ ಮಳೆ ಬಿದ್ದಿರುವುದರಿಂದ ಅಲ್ಲಿಯ ಜನರ ಪರಿಸ್ಥಿತಿ ಸುಧಾರಿಸಿರಬಹುದೆಂದು ಭಾವಿಸಿರಬಹುದು. ಆದರೆ ಅಂಥ ಪರಿಸ್ಥಿತಿಯೇನು ಉಂಟಾಗಿಲ್ಲ. ಇತ್ತೀಚೆಗೆ ಒಂದೆರಡು ಮಳೆಗಳಾಗಿದ್ದರೂ, ಅವರಿಗೇನೂ ಅದರಿಂದ ಅನುಕೂಲವಾಗಿಲ್ಲ. ಅವರಿನ್ನೂ ಹಾಗೆಯೇ ತೊಂದರೆಯಲ್ಲೇ ನರಳುತ್ತಿದ್ದಾರೆಂಬ ಅಂಶ ಸರ್ಕಾರದವರಿಗೆ ಮನವರಿಕೆಯಾಗಬೇಕೆಂಬುದೇ ನನ್ನ ಅಭಿಲಾಷೆ. ಅಷ್ಟೇ ಅಲ್ಲದೆ ದವಸ ಧಾನ್ಯಗಳ ಸರಬರಾಯಿ ಮಾರ್ಕೆಟ್ಟಿನಲ್ಲಿ ಇದ್ದಾಗ್ಯೂ ಆ ಬೆಲೆಗಳನ್ನು ಕೊಟ್ಟು ಅವರು ಕೊಳ್ಳುವ ಸ್ಥಿತಿಯಲ್ಲಿಲ್ಲ. ಕೊಳ್ಳಲು ಅವರಿಗೆ ಶಕ್ತಿ ಇಲ್ಲದಂತಾಗಿದೆ—ಆದುದರಿಂದ ಅವರಿಗಾಗಿ ರಿಲೀಫ್ ಕಾಮಗಾರಿಗಳನ್ನು ಏರ್ಪಾಡು ಮಾಡತಕ್ಕದ್ದು ತೀರ ಆವಶ್ಯಕವಾಗಿದೆ. ಇದರ ಜೊತೆಗೆ ಮಾರ್ಕೆಟ್ಟಿನಲ್ಲಿ ಮಾರಾಟಮಾಡಲ್ಪಡುತ್ತಿರುವ ದವಸ ಧಾನ್ಯಗಳ ಬೆಲೆ ಬಹಳ ಜಾಸ್ತಿಯಾಗಿರುವುದರಿಂದ ಅವರಿಗೆ ಕಂಟ್ರೋಲ್ ದರದಲ್ಲಿ ಆ ಧಾನ್ಯಗಳು ದೊರೆಕುವಂತೆ ತಕ್ಕ ವ್ಯವಸ್ಥೆಗಳನ್ನು ಕಲ್ಪಿಸುವುದೂ ಕೂಡ ಅತ್ಯಗತ್ಯವಾಗಿರುತ್ತದೆ. ಈ ಹಿಂದೆ 1952ರಲ್ಲಿ ಈ ಆಹಾರ ಧಾನ್ಯಗಳ ಮಾರಾಟದ ವಿಚಾರದಲ್ಲಿ ಕೋ-ಆಪರೇಟಿವ್ ಸೊಸೈಟಿಗಳ ಮುಖಾಂತರವೂ ಮತ್ತು ಅನೇಕ ಗ್ರಾಮಪಂಚಾಯಿತಿಗಳ ಮುಖಾಂತರವೂ, ಅವುಗಳ ಮಾರಾಟಕ್ಕೆ ಒಂದು ಅವಕಾಶ ಕಲ್ಪಿಸಿಕೊಡಲಾಗಿತ್ತು. ಆದರೆ ಅಂಥ ಅನುಕೂಲಗಳೆಲ್ಲವೂ ಈಗ ಹೊರಟುಹೋಗಿರುವಂತೆ ಕಾಣುತ್ತದೆ. ಆ ರೀತಿ ಎಲ್ಲಿಯೂ ಜಾರಿಯಲ್ಲಿದ್ದಹಾಗೆ ಕಾಣುವುದಿಲ್ಲ. ಇತ್ತೀಚೆಗೆ ಅಂಥ ಒಂದು ಅನುಕೂಲವನ್ನು ಚಿತ್ರದುರ್ಗ ಜಿಲ್ಲೆಯೊಂದಕ್ಕೆ ಮಾತ್ರ ಮಾಡಿಕೊಟ್ಟಿದ್ದಾರೆಂದು ಕೇಳುತ್ತೇನೆ. ಆದರೆ ಅಷ್ಟೇ ಕಷ್ಟಕ್ಕೆ ಈಡಾಗಿರತಕ್ಕ ಚನ್ನಗಿರಿ ಮತ್ತು ಹೊನ್ನಾಳಿ ಈ ಎರಡು ತಾಲ್ಲೂಕುಗಳಿಗೆ ಏತಕ್ಕೆ ಅಂಥಾ ಸೌಕರ್ಯಗಳನ್ನು ಕಲ್ಪಿಸಿಕೊಡಲಿಲ್ಲವೋ ಅದು ಗೊತ್ತಾಗಲಿಲ್ಲ. ಆದಕಾರಣ ಆ ರೀತಿ ಆಹಾರ ಸಾಮಗ್ರಿಗಳನ್ನು ಮಾರಾಟ ಮಾಡುವ ಸೌಕರ್ಯವನ್ನು ಈ ಎರಡು ತಾಲ್ಲೂಕುಗಳಿಗೂ ಕಲ್ಪಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಈಗಾಗಲೇ ಮಾನ್ಯ ಗೃಹ ಸಚಿವರು ಚಿತ್ರದುರ್ಗ ಜಿಲ್ಲೆಗೆ ಏನೇನು ಅನುಕೂಲಗಳನ್ನು ಕಲ್ಪಿಸಿಕೊಟ್ಟಿರುತ್ತಾರೋ ಅದೇ ಅನುಕೂಲಗಳನ್ನು ಸಂಸ್ಥಾನದ ಇತರ ಎಲ್ಲಕಡೆಗಳಿಗೂ, ಎಲ್ಲೆಲ್ಲಿ ಅಂಥ ಅಭಾವ ಪರಿಸ್ಥಿತಿ ಇರುತ್ತದೆಯೋ ಅಂಥ ಕಡೆಗಳಿಗೆಲ್ಲಾ, ಕೂಡಲೇ ಒದಗಿಸುವಂತೆ ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಸೂಚನೆ ಕಳುಹಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ನನಗೆ ಗೊತ್ತಿರುವ ಹಾಗೆ 1945ನೆಯ ಇಸವಿಯಿಂದಲೂ ಒಂದೇ ಸಮನಾಗಿ ಈ ಸಭೆಯ ಮುಂದೆ ಸಂಸ್ಥಾನದ ಒಂದಲ್ಲ ಒಂದು ಪ್ರದೇಶದಲ್ಲಿ ಅಭಾವ ಪರಿಸ್ಥಿತಿಯುಂಟಾಗುತ್ತಲೇ ಇದೆ, ಅದಕ್ಕೆ ಪರಿಹಾರ ನೀಡಬೇಕೆಂದು ಪದೇ ಪದೇ ಕೇಳುವಂಥ ಒಂದು ಅವಕಾಶಕ್ಕೆ ಸರ್ಕಾರದವರು ಎಡೆಗೊಟ್ಟಿದ್ದಾರೆ. ಇನ್ನುಮುಂದಕ್ಕಾದರೂ ಆದಷ್ಟು ಮಟ್ಟಿಗೆ ಇಂಥದಕ್ಕೆ ಅವಕಾಶವಿಲ್ಲದ ರೀತಿಯಲ್ಲಿ ತಾವು ಅನುಕೂಲಗಳನ್ನು ಕಲ್ಪಿಸುವುದು ಬಹಳ ಮುಖ್ಯವಾದದ್ದು.

ಶ್ರೀ ಕಡಿದಾಳ್ ಮಂಜಪ್ಪ (ರೆವಿನ್ಯೂ ಮತ್ತು ಮರಾಮತ್ ಶಾಖೆಗಳ ಮಂತ್ರಿಗಳು).—ತಮ್ಮ ಕಾಲದಲ್ಲಿ ಸಹ ಇಂಥ ಪರಿಸ್ಥಿತಿ ಇದ್ದೇ ಇತ್ತು!

ಶ್ರೀ ಎಲ್. ಸಿದ್ದಪ್ಪ.—ಹೌದು. ಆದರೆ ಈಗ ತಮ್ಮ ಕಾಲದಲ್ಲೂ ಅದೇ ಬೊಬ್ಬೆ ಹೆಚ್ಚಾಗಿದೆ. ಆದುದರಿಂದ ಅದನ್ನು ತಾವು ಪರಿಹಾರಮಾಡಬೇಕೆಂದು ಕೇಳುತ್ತೇನೆ. ನಮ್ಮ ದೇಶದಲ್ಲಿ ಹೀಗೆ ಬರಗಾಲಗಳು ಬಾರದಂತೆ ತಡೆಗಟ್ಟಲು ತಕ್ಕ ಸಲಹೆಗಳನ್ನು ನೀಡಲು ಪರದೇಶಗಳಿಂದಕೂಡ ಎಕ್ಸ್‌ಪ್ರೆಸಿಡೆಂಟ್ ಹೂವರ್ ಮುಂತಾದ ಅನೇಕ ಮಹನೀಯರು ಬಂದಿದ್ದರು. ಆದರೆ ನನಗೆ

(ಶ್ರೀ ಎಲ್. ಸಿದ್ದಪ್ಪ.)

ತಿಳಿದಿರುವಂತೆ, ಈ ಕಷ್ಟದಿಂದ ಪಾರಾಗಬೇಕೆಂಬ ಇರಾದೆ ತಮಗಿದ್ದರೆ ಈಗ ತಾವು ಕೈಕೊಂಡಿರತಕ್ಕ ಭದ್ರಾಜಲಾಶಯವನ್ನು ಎಂದರೆ ಲಕ್ಕವಳ್ಳಿ ರಿಜರ್ವಾಯಿರನ್ನು ಈಗಿರತಕ್ಕ ಪ್ರೋಗ್ರಾಂ ಪ್ರಕಾರ ಮಾಡದೆ ಹಿಂದಿನ original plan ನಲ್ಲಿ ಏನೇನು ಅಡಕವಾಗಿತ್ತೋ ಆ ಪ್ರಕಾರವೇ ಅದನ್ನು ಪೂರ್ತಿಮಾಡಲು ಏರ್ಪಾಡು ಮಾಡತಕ್ಕದ್ದು ಅವಶ್ಯಕ. ಆದರೆ ತಾವು ಈ ಅಂಶವನ್ನು ಮನಗಂಡಿರುವಹಾಗೆ ಕಾಣುತ್ತಿಲ್ಲ. ಶ್ರೀ ಎಸ್. ವಿ. ರಾಮಮೂರ್ತಿಯವರೂ, ಪ್ಲಾನಿಂಗ್ ಕಮಿಷನ್ನಿನವರೂ ಇಲ್ಲೆಲ್ಲಾ ಸಂಚಾರಮಾಡಿಕೊಂಡು ಪ್ರತಿಯೊಂದು ಅಂಶವನ್ನೂ ಚೆನ್ನಾಗಿ ಪರಿಶೀಲನೆಮಾಡಿಕೊಂಡುಹೋಗಿ ಅವರು ಕೊಟ್ಟಿರತಕ್ಕ ಸಲಹೆಗಳು ಕೂಡ ಈ ಭದ್ರಾಜಲಾಶಯವನ್ನು ಬೇಗ ಕೈಕೊಂಡು ಪೂರೈಸುವುದು ಬಹಳ ಒಳ್ಳೆಯದೆಂದು ಹೇಳಿದ್ದಾರೆ. ಇದನ್ನು ಹಾಗೆ ಪೂರೈಸಲು ಪ್ಲಾನಿಂಗ್ ಸಮಿತಿಯವರ ಒಪ್ಪಿಗೆ ಬೇಕಾಗಿದ್ದಲ್ಲಿ, ಅವರನ್ನೂ ಮತ್ತು ಇತರ ಎಲ್ಲ ಮುಖ್ಯಸ್ಥರನ್ನೂ ಇಲ್ಲಿಗೆ ಕರೆಸಿಕೊಂಡು ಅವರೆಲ್ಲರನ್ನೂ ನಮ್ಮ ಅಭಾವ ಪ್ರದೇಶಗಳಲ್ಲೆಲ್ಲಾ ಸಂಚಾರಮಾಡಿಸಿ, ಜನರ ಸ್ಥಿತಿಗತಿಗಳನ್ನು ತೋರಿಸಿ, ಈ ಕಾರ್ಯವನ್ನು ಬೇಗ ನಡೆಸುವುದಕ್ಕೆ ಏನೇನಾಗಬೇಕೋ ಅಂಥ ಏರ್ಪಾಡುಗಳನ್ನೆಲ್ಲಾ ತಾವು ಮಾಡಿ. ಹೀಗೆಯೇ ಇದ್ದ ಮದ್ರಾಸ್ ಪ್ರಾಂತ್ಯದ ಬಳ್ಳಾರಿ ಜಿಲ್ಲೆಯಲ್ಲಿ ತುಂಗಭದ್ರಾ ಪ್ರಾಜೆಕ್ಟನ್ನು 1946ರಲ್ಲೇ ಕೈಕೊಂಡು ಅದನ್ನು ಮುಗಿಸಿದ್ದರಿಂದ ಈ ದಿವಸ ಆ ಪ್ರಾಜೆಕ್ಟಿನಿಂದ ಮದ್ರಾಸ್ ಮತ್ತು ಹೈದರಾಬಾದ್ ಪ್ರಾಂತ್ಯಗಳಲ್ಲಿ ಸುಮಾರು 2 ಲಕ್ಷ 50 ಸಾವಿರ ಎಕರೆ ಇರಿಗೇಟ್ ಆಗುತ್ತಿದೆ. ಇಷ್ಟೇ ಅಲ್ಲದೆ ಇನ್ನೂ ಹೆಚ್ಚಿನ ಒಂದು ಸೌಲಭ್ಯ ಹೈದರಾಬಾದ್ ಸ್ಟೇಟಿಗೆ ದೊರೆಯುವಂಥಾ ಅವಕಾಶವಿದೆ. ಆದರೆ ಈ ಭದ್ರಾಜಲಾಶಯವು ಬಹಳ ಹಿಂದೆಯೇ ಸ್ಯಾಂಕ್ಷನ್ ಆಗಿತ್ತು. ಆದರೆ ಆ ಬಗ್ಗೆ ಏನೋ ಒಂದು ಪ್ರೋಗ್ರಾಂ ಹಾಕಿಕೊಂಡು ಕೆಲಸಮಾಡುತ್ತಿದ್ದೇವೆಂದು ಹೇಳುತ್ತಿದ್ದಾರೆ. ಆದರೆ ಅಲ್ಲಿ ಏನೂ ಕೆಲಸಗಳೂ ಮುಂದುವರಿದಂತೆಯೇ ಕಾಣುತ್ತಿಲ್ಲ. ಇನ್ನಿರುವುದೆಲ್ಲಾ ಕೇವಲ 1-2 ವರ್ಷಗಳು ಮಾತ್ರ. ಈ ಅವಧಿಯಲ್ಲಿ ತಾವು ಜನರಿಗೆ ಇದರಿಂದ ಅನುಕೂಲ ದೊರೆಯುವಂತೆ ಮಾಡಬೇಕಾಗಿದೆ. ಆದರೆ ಆ ಕೇಂದ್ರ ಸರ್ಕಾರದ ಪ್ಲಾನಿಂಗ್ ಸಮಿತಿಯವರ ಪ್ಲಾನಿನಲ್ಲಿ ತಿಳಿಸಿರುವಂತೆ ಈ ಭದ್ರಾಜಲಾಶಯದ ಕೆಲಸಗಳು ಮುಗಿಯುತಕ್ಕಂಥಾ ಸೂಚನೆಗಳೇ ಕಾಣುತ್ತಿಲ್ಲ. ಈ ಲಕ್ಕವಳ್ಳಿ ಜಲಾಶಯವನ್ನು ಬೇಗ ನಿರ್ಮಾಣ ಮಾಡಿದರೆ ಇದರಿಂದ ಹೆಚ್ಚಿನ ಅಭಾವಕ್ಕೆ ಆಗಾಗ್ಗೆ ತುತ್ತಾಗುತ್ತಿರುವ ಚಿತ್ರದುರ್ಗ ಜಿಲ್ಲೆಯ ದಾವಣಗೆರೆ ಮತ್ತು ಹರಿಹರ ಈ ಎರಡು ತಾಲ್ಲೂಕುಗಳೂ ಸೇರಿ 1 ಲಕ್ಷ 80 ಸಾವಿರ ಎಕರೆಗಳ ಸಾಗುವಳಿಗೆ ಅನುಕೂಲವಾಗುತ್ತದೆ. ಈ ಅಂಶವನ್ನು ತಾವು ಅವರಿಗೆ ತಿಳಿಸಬೇಕಾಗಿದೆ.

ಆದರೆ ತಾವು ಇಂಡಿಯಾ ಸರ್ಕಾರದವರಿಂದ ಕೆಲವು ಮೊಬಲಗನ್ನು ಸಾಲದ ರೂಪವಾಗಿಯೂ ಮತ್ತೆ ಕೆಲವನ್ನು ಫ್ರೀಯಾಗಿಯೂ ಪಡೆದ ಕೊಂಡಿದ್ದೀರಿ; ಅದೇ ಬೇರೆ ವಿಚಾರವಾಯಿತು. ಈಗ ತಮ್ಮ ಹಕ್ಕಿನೊಳಗಿರತಕ್ಕಂಥ ಎಂದರೆ ಇಂಡಿಯಾ ಸರ್ಕಾರದವರಿಂದ ಯಾವ ಸಹಾಯವನ್ನೂ ಅಪೇಕ್ಷೆಮಾಡದೆ ತಾವೇ ತಮ್ಮ ಅಧಿಕಾರಕ್ಕೊಳಪಟ್ಟಿರ ವಂಥ ಕೆಲವು ಕಾಮಗಾರಿಗಳನ್ನು ಎಂದರೆ ಚಿತ್ರದುರ್ಗ ಜಿಲ್ಲೆಯಲ್ಲಿರುವ ನಾರಾಯಣಪುರ, ಮತ್ತು ಕೊಡಿಯಾಲ ಇತ್ಯಾದಿ ಪ್ರಾಜೆಕ್ಟುಗಳನ್ನು ತಾವು ಇಷ್ಟರಲ್ಲೇ ಪೂರೈಸಿದ್ದರೆ ಅದರಿಂದಲಾದರೂ ಚಳ್ಳಕೆರೆ, ಹಿರಿಯೂರು ಮುಂತಾದ ತಾಲ್ಲೂಕುಗಳ ಅಭಾವ ಪ್ರದೇಶದ ಜನರಿಗೆ ಈ ದಿವಸ ಬಹಳ ಅನುಕೂಲವಾಗುತ್ತಿತ್ತು. ತಾವು ಸಣ್ಣ ಪುಟ್ಟ ಕಾಮಗಾರಿಗಳನ್ನಾದರೂ ಈ ವೇಳೆಗೆ ಮುಗಿಸಬಹುದಾಗಿತ್ತು. ಅಂಥದನ್ನೂ ಕೂಡ ಮಾಡಿಲ್ಲ. ಚಿತ್ರದುರ್ಗ ಜಿಲ್ಲೆಯಲ್ಲಿ ಕೇವಲ ಸಣ್ಣ ಕಾಮಗಾರಿಯಾದಂಥ ಆ ಕಾಗಲಗೆರೆಯ ಕೆಲಸಕೂಡ ಇನ್ನೂ ಹಾಗೆಯೇ ನಿಂತುಹೋಗಿದೆ. ಇನ್ವೆಸ್ಟಿಗೇಷನ್, ಎಸ್ಟಿಮೇಟ್ ಇತ್ಯಾದಿಗಳೆಲ್ಲಾ 1945-46ರಲ್ಲೇ ಪೂರೈಸಿದ್ದರೂ ಅದನ್ನು ತಾವಿನ್ನೂ ಮಂಜೂರುಮಾಡದೆ ಹಾಗೆ ಇಟ್ಟುಕೊಂಡಿದ್ದೀರಿ. ಅದನ್ನು ಮಂಜೂರು ಮಾಡದೆ ಹಾಗೇ ಇಡಲು ತಮಗೇನು ತೊಂದರೆಯೋ ಅದು ನನಗೆ ತಿಳಿಯದಾಗಿದೆ. ಇದೇ ರೀತಿ ಸಾಗರೇ ಹಳ್ಳಕ್ಕೆ ಅಡ್ಡಗಟ್ಟೆ ಹಾಕತಕ್ಕದ್ದೂ ಕೂಡ ಹಾಗೆಯೇ ನಿಂತುಹೋಗಿದೆ. ಆ ಹಳ್ಳಕ್ಕೆ ಒಂದು ಅಡ್ಡಗಟ್ಟೆ ಹಾಕಿದ್ದರೆ ಅದರಿಂದ ಸುಮಾರು 8-10 ಕೆರೆಗಳಿಗೆ ನೀರಿನ ಅನುಕೂಲ ದೊರೆಯುತ್ತಿತ್ತು; ಅದರಿಂದ 2-3 ಗ್ರಾಮಗಳಿಗೆ ಅನುಕೂಲವಾಗುತ್ತಿತ್ತು; ಹಾಗೆಯೇ ದೊಗ್ಗನಹಾಳ್ ಕೆರೆಯ ಅಂದಾಜುಕೂಡ ತಯಾರಾಗಿ 46-47ನೇ ಸಾಲಿನಿಂದಲೂ ಸರ್ಕಾರದ ಮುಂದೆ ಮಂಜೂರಾತಿಗಾಗಿ ತಡೆದು ನಿಂತಿರತ್ತದೆ. ಇಂಥ ಸಣ್ಣಪುಟ್ಟ ಕೆಲಸಗಳನ್ನು ಎಂದರೆ ಕೇವಲ ಒಂದುಲಕ್ಷ ಅಥ ಲಕ್ಷ, 20 ಸಾವಿರ 30 ಸಾವಿರದ ಅಂದಾಜಿನೊಳಗಿರತಕ್ಕಂಥ ಅನೇಕ ಕಾಮಗಾರಿಗಳನ್ನು ಈಗಲಾದರೂ ಸರ್ಕಾರದವರು ಕೂಡಲೇ ಕೈಕೊಂಡು ಆ ಕೆಲಸಗಳನ್ನು ಮುಗಿಸದಿದ್ದರೆ ಖಂಡಿತ ಜನರಿಗೆ ಅನುಕೂಲವಾಗುವುದಿಲ್ಲ.

ಆದ್ದರಿಂದ ಈ ಕೆಲವು ಸಲಹೆಗಳನ್ನು ತಾವು ದಯವಿಟ್ಟು ಮನಸ್ಸಿಗೆ ತಂದುಕೊಂಡು ತಾತ್ಕಾಲಿಕವಾಗಿ ಏನು ಪರಿಹಾರ ಕೊಡಬೇಕೋ ಅಂಥ ಪರಿಹಾರಗಳನ್ನು ಆ ಅಭಾವದ ಪ್ರದೇಶಗಳಲ್ಲಿ ಏರ್ಪಾಡುಮಾಡಿ ಆ ಜನರಿಗೆ ಕೊಳ್ಳುವ ಶಕ್ತಿಯನ್ನುಂಟುಮಾಡುವುದಕ್ಕೆ ಅನುಕೂಲ ಮಾಡಬೇಕೆಂದು ಹೇಳುತ್ತೇನೆ. ಮತ್ತು ಆಹಾರಧಾನ್ಯಗಳ ವಿಷಯದಲ್ಲಿ, ಶ್ರೀ ಇಮಾಂ ಸಾಹೇಬರು ಹೈದರಾಬಾದಿನಿಂದ ಒಂದು ಲಕ್ಷದ 20,000 ಪಲ್ಲಗಳಷ್ಟು ಜೋಳ ಬರುತ್ತದೆಂದು ಹೇಳಿದ್ದಾರೆ—ಈ ಜೋಳ ಹೆಚ್ಚು ದಿವಸಗಳಿದ್ದರೆ ಹುಳುತು ಹೋಗುತ್ತದೆ; ಆದ್ದರಿಂದ ಕೂಡಲೆ ಈ ದವಸವನ್ನು ಧಾರಾಳವಾಗಿ ಡಿಸ್ಟ್ರಿಕ್ಟ್ ಮತ್ತು ತಾಲ್ಲೂಕು ಹೆಡ್ ಕ್ವಾರ್ಟರುಗಳಿಗೂ ಕಳುಹಿಸಿ, ಡಿಸ್ಟ್ರಿಕ್ಟ್ ಮತ್ತು ತಾಲ್ಲೂಕು ಅಧಿಕಾರಿಗಳಿಗೆ ಹೇಳಿ, ಕೋ-ಆಪರೇಟಿವ್ ಸೊಸೈಟಿಗಳ ಮುಖಾಂತರವೇ ಹಂಚಿಕೆ ಮಾಡಬೇಕೆಂದು ನಿರ್ಧರಿಸಿದ್ದರೆ ವಿಲೇಜ್ ಪಂಚಾಯಿತಿಗಳಿಗೂ ಕೂಡ ಡಿಪೋಗಳನ್ನಿಟ್ಟು ಹಂಚಿಕೆಮಾಡುವುದಕ್ಕೆ ಅವಕಾಶಮಾಡಿ ಕೊಡಬೇಕೆಂದು ಹೇಳುತ್ತೇನೆ.

ಇನ್ನೊಂದು ಸಲಹೆ ಹೇಳಿದರು; ಅದು ಒಂದೆರಡು ಕಡೆಗಳಲ್ಲಿ ಪ್ರಯೋಗ ಕೂಡ ಆಗಿ ಜನರಿಗೆ ಅನುಕೂಲವಾಗಿದೆಯೆಂದು ಹೇಳಿದರು; ಏನೆಂದರೆ: ಸಂತೆಗಳಲ್ಲಿ ತಾವೇ ನೇರವಾಗಿ 20-30-50 ಪಲ್ಲಗಳಷ್ಟನ್ನು ಮಾರಿದರೆ ಎಷ್ಟೋ ಜನರಿಗೆ ಸುಲಭವಾಗಿ ಸಿಗುತ್ತದೆ. ನನ್ನ ಅನುಭವ ಹೇಳುವುದಾದರೆ,—ಈಗಿನ ಸಂದರ್ಭದಲ್ಲಿ ನಾನು ಹಳ್ಳಿಯಲ್ಲೇ ವಾಸಮಾಡುತ್ತಾ ನೋಡುತ್ತಲಿದ್ದೇನೆ—ಅನೇಕ ಜನರಿಗೆ ತಿನ್ನಲಿಕ್ಕೆ ಆಹಾರಸಾಮಗ್ರಿಗಳು ಸಿಕ್ಕದೆ ಆಹಾರ ಸಾಮಗ್ರಿಗಳಿರುವವರ ಮನೆಗೆ ಹೋಗಿ ಪ್ರಾಮಿಸರಿ ನೋಟುಗಳನ್ನು ಬರೆದುಕೊಟ್ಟು 50 ರೂಪಾಯಿಗಳ ಬೆಲೆಯ ಧಾನ್ಯವನ್ನು ಕೊಂಡುಕೊಂಡು ಹೋಗುತ್ತಿದ್ದಾರೆ. ದುಡ್ಡಿದ್ದವರು 50

ರೂಪಾಯಿ ಕೊಟ್ಟರೂ ದುಡ್ಡಿಲ್ಲದಿದ್ದವರು 50 ರೂಪಾಯಿಗಳ ಜೊತೆಗೆ ಬಡ್ಡಿಯನ್ನು ಕೂಡ ಸೇರಿಸಿ ಪ್ರಾಮಿಸರಿ ನೋಟುಗಳನ್ನು ಬರೆದುಕೊಟ್ಟು ದವಸ ತರುತ್ತಿದ್ದಾರೆ. ಆದ್ದರಿಂದ ತಾವು ಈ ರೀತಿ ಧಾನ್ಯವನ್ನು ಸಂತೆಗಳಲ್ಲಿ ಮಾರುವುದಾದರೆ ಅನೇಕರಿಗೆ ಕಮ್ಮಿದರದಲ್ಲಿ ಧಾನ್ಯ ಸಿಕ್ಕುವಂತಾಗುತ್ತದೆ.

ಈ ಸಂದರ್ಭದಲ್ಲಿ ಕೆಲವು ಮಾನ್ಯ ಸದಸ್ಯರು ನೀವು ಪಲ್ಲಾ ಒಂದಕ್ಕೆ 33ರಂತೆ ಮಾರಿದರೆ ಅನುಕೂಲವಾಗುತ್ತದೆ, ಇಲ್ಲದಿದ್ದರೆ ಇಲ್ಲ, ಎಂದು ಹೇಳಿದರು. ಅವೆಲ್ಲಾ ನಿಮ್ಮ ಹಣಕಾಸಿನ ಸ್ಥಿತಿ ಯಾವ ರೀತಿಯದೆಯೋ ಅದರ ಮೇಲಿದೆ. ನಮಗೀಗ ತಿಳಿದಿರುವ ಮಟ್ಟಿಗೆ 'Service at cost' ಎಂಬ ಕಂಠಪಾಠ(Slogan)ವನ್ನು ನಿಮ್ಮಿಂದ ಕೇಳುತ್ತಿದ್ದೇವೆ. ಆದ್ದರಿಂದ ನಿಮಗೇನು ಬೆಲೆಗೆ ದೊರೆಯುತ್ತಿದೆಯೋ ಅಷ್ಟಾದರೂ ಬೆಲೆಗೆ ಈ ಧಾನ್ಯಗಳು ದೊರೆಯುವಂತೆ ಮಾಡಬೇಕೆಂದು ಹೇಳಿ ನಾನು ಮುಗಿಸುತ್ತೇನೆ.

ಶ್ರೀ ಟಿ. ಹನುಮಯ್ಯ (ಹಿರಿಯೂರು—ಅನುಸೂಚಿತ ಜಾತಿಗಳು).—ಮಾನ್ಯ ಅಧ್ಯಕ್ಷರೇ, ಸಾಧಾರಣವಾಗಿ ಕಷ್ಟಪರಿಸ್ಥಿತಿಯಲ್ಲಿರತಕ್ಕಂಥ ಚಿತ್ರದುರ್ಗ, ತುಮಕೂರು ಕೋಲಾರ—ಈ ಮೂರು ಜಿಲ್ಲೆಗಳಲ್ಲಿ ಕಳೆದ ನಾಲ್ಕೈದು ವರ್ಷಗಳಿಂದ ಪ್ರತಿ ವರ್ಷವೂ ಕೂಡ ಮಳೆಯಾಗದೆ ಪರಿಸ್ಥಿತಿ ದಿನೇದಿನೇ ಹದಗೆಡುತ್ತಿದೆ. ಇವನ್ನೆಲ್ಲಾ ನೋಡಿದರೆ, ಮುಖ್ಯವಾಗಿ, ನಾನು ಮೊದಲಿಂದಲೂ ಹೇಳಿದ ಹಾಗೆ, ಆಹಾರ ಮತ್ತು ವ್ಯವಸಾಯದ ಬಾಬುಗಳನ್ನು ನೋಡಿಕೊಳ್ಳುವುದಕ್ಕಾಗಿ ಪ್ರತ್ಯೇಕವಾದ ಒಬ್ಬ ಮಂತ್ರಿಗಳಿಲ್ಲದಿರುವುದೇ ಈ ಕಷ್ಟಕ್ಕೆಲ್ಲಾ ಕಾರಣವಾಗಿದೆಯೆನ್ನಬಹುದು. ಏಕೆಂದರೆ, ನಮ್ಮ ದೇಶದಲ್ಲಿ ನೂರಕ್ಕೆ 75 ಭಾಗದಷ್ಟು ವ್ಯವಸಾಯವೇ ಮುಖ್ಯ ವೃತ್ತಿಯಾಗಿರುವಾಗ, ಮಳೆಯಿಲ್ಲ ಆಹಾರವಿಲ್ಲವೆಂದು ಹೇಳುತ್ತಿರುವುದನ್ನು ನೋಡಿದರೆ, ಪಾಶ್ಚಿಮಾತ್ಯ ದೇಶಗಳೊಡನೆ ನಮ್ಮನ್ನು ಹೋಲಿಸಿಕೊಂಡರೆ, ನಿಜವಾಗಿಯೂ ನಮಗೆ ನಾಚಿಕೆಗೇಡಾಗಿದೆ. ಪಾಶ್ಚಿಮಾತ್ಯ ದೇಶಗಳಲ್ಲಿ ನೂರಕ್ಕೆ ಇಪ್ಪತ್ತೈದು ಭಾಗದಷ್ಟು ಜನರು ವ್ಯವಸಾಯಮಾಡಿ ಮಿಕ್ಕ 75 ಭಾಗದಷ್ಟು ಜನರಿಗೆ ಆಹಾರವನ್ನು ಒದಗಿಸುತ್ತಿದ್ದಾರೆ.

ನಮ್ಮಲ್ಲಿ 75%ರಷ್ಟು ಜನ ಭೂ-ವ್ಯವಸಾಯ ಮಾಡಿದರೂ ಮಿಕ್ಕ 25% ಜನರಿಗೆ ಆಹಾರ ಒದಗಿಸಲಿಕ್ಕೆ ಸಾಧ್ಯವಾಗಿಲ್ಲವೆಂದರೆ, ನಮ್ಮ ಭೂ-ವ್ಯವಸಾಯದಲ್ಲಿ ಏನು ತೊಂದರೆಯಿದೆ, ಅದನ್ನು ಹೇಗೆ ತಪ್ಪಿಸಬೇಕು ಎಂಬುದನ್ನೆಲ್ಲಾ ಪರಿಶೀಲಿಸಿ ಸರಿಪಡಿಸುವುದಕ್ಕೆ ಒಬ್ಬರು ಪ್ರತ್ಯೇಕವಾಗಿ ವ್ಯವಸಾಯ ಮಂತ್ರಿಗಳೆಂತಲೇ ಇರಬೇಕೆಂದು ಹೇಳಿ ನಾನು ಸರ್ಕಾರದವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಮುಖ್ಯವಾಗಿ ಈಗ ಚಿತ್ರದುರ್ಗ ಜಿಲ್ಲೆಯ ಪರಿಸ್ಥಿತಿಯನ್ನು ಹೇಳುವುದಾದರೆ, ನಾನು ಹಿಂದಿನವಾರ ಪಾರ್ಲಿಮೆಂಟ್ ಸದಸ್ಯರಾದ ಶ್ರೀ ನಿಜಲಿಂಗಪ್ಪನವರ ಜೊತೆಯಲ್ಲಿ ಹಿರಿಯೂರು, ಮೊಳಕಾಲ್ಮೂರು, ಚಳ್ಳಕೆರೆ ಮುಂತಾದ ತಾಲ್ಲೂಕುಗಳನ್ನು ತಿರುಗಿಕೊಂಡು ಬಂದಿದ್ದೇನೆ—ಯಾವಕಡೆ ಹೋದರೂ ಜಮೀನಿನಲ್ಲಿ ಹಸಿರೆನ್ನುವುದೇ ಕಾಣುವುದಿಲ್ಲ. ಯಾರೂ ಇನ್ನೂ ಬಿತ್ತಿಯೇ ಇಲ್ಲ. ಜನರಲ್ಲಿ ನಿರಾಶೆಯುಂಟಾಗಿದೆ. ಕಾರಣವೇನೆಂದರೆ, ಯಾರಿಗೂ ಕೆಲಸವಿಲ್ಲ; ಕೊಂಡುಕೊಳ್ಳುವುದಕ್ಕೆ ಶಕ್ತಿಯಿಲ್ಲ. ನೂರಕಡ 75ರಷ್ಟು ಜನರಿಗೆ ಕೊಳ್ಳುವ ಶಕ್ತಿಯೇ ಇಲ್ಲವಾಗಿದೆಯೆನ್ನಬಹುದು. ಹಿಂದೆ 1944-45ರಲ್ಲಿ ಇದೇ ರೀತಿ ತೊಂದರೆ ಬಂದಿದ್ದಾಗ ನಮ್ಮ ಚಿತ್ರದುರ್ಗ ಜಿಲ್ಲೆಯಲ್ಲಿ ಖಾದಿ ಕೈಗಾರಿಕೆಗೆ ಹೆಚ್ಚಿಗೆ ಪ್ರೋತ್ಸಾಹ ಕೊಟ್ಟು ಕೆಲಸಮಾಡಿ ಜನರಿಗೆ ಕೂಲಿ ಒದಗಿಸುತ್ತಿದ್ದೆವು. ಈಗ, ಅದೇನು ಖಾದಿ ಕೈಗಾರಿಕೆಯಲ್ಲಿ ಜನರಿಗೆ ಆಶೆಯಿದೆಯೋ ಇಲ್ಲವೋ ಕಾಣೆ! ಅದರ ವಿಷಯಕ್ಕೇ ಗಮನಕೊಡುತ್ತಿಲ್ಲ. ಮಹಾತ್ಮ ಗಾಂಧಿಯವರು ಏನು ಹೇಳುತ್ತಿದ್ದರೆಂಬುದನ್ನು ಈ ಸಂದರ್ಭದಲ್ಲಿ ನಾವು ಗಮನಿಸಬೇಕು, ಭರತಖಂಡದ ಜನರಿಗೆ ಕೈಗಾರಿಕೆಯಿಂದ ಆಹಾರ ಒದಗಿಸಬೇಕೆಂದರೆ ಅದು ಖಾದಿ ಕೈಗಾರಿಕೆಯೊಂದರಿಂದಲೇ ಸಾಧ್ಯ. ನಮ್ಮಲ್ಲಿರುವ ಟೆಕ್ಸ್‌ಟೈಲ್ ಮೆಷಿನೆರಿಗಳೆಲ್ಲಾ ಹೋಗಬೇಕೆಂದು ಹೇಳಿದರು. ನಿಜವಾಗಿಯೂ ಈಗ ನಮ್ಮ ಕಡೆಯಲ್ಲಿರುವ ನೆಯ್ಗೆಯವರ ಪರಿಸ್ಥಿತಿಯನ್ನು ನೋಡಿದರೆ ಬಹಳ ಚಿಂತಾಜನಕವಾಗಿದೆಯೆನ್ನಬೇಕು. ಏಕೆಂದರೆ ದೊಡ್ಡ ದೊಡ್ಡ ವ್ಯಾಪಾರಸ್ಥರು, ಬಂಡವಾಳಸ್ಥರು ಬಟ್ಟೆ ನೆಯ್ಗೆ ಮತ್ತು ಮಾರಾಟವನ್ನು ಮನಾಪಲಿ ಮಾಡಿಕೊಂಡುಬಿಟ್ಟಿದ್ದಾರೆ. ಹೀಗಾಗಿ ನಿಜವಾಗಿ ಅಲ್ಲಿನ ನೆಯ್ಗೆಯವರು ಇಂದು ಮಣ್ಣು ಹೊರಲಿಕ್ಕೆ ಬರುವುದಕ್ಕೂ ತಯಾರಾಗಿದ್ದಾರೆ. ಇಂಥ ಸಂದರ್ಭದಲ್ಲಿ ಎಲ್ಲರಿಗೂ ಕೆಲಸ ಕೊಡಬೇಕಾದುದು ಅತ್ಯಾವಶ್ಯಕ.

ಮೊನ್ನೆ ಏನೋ ಡೆಪ್ಯುಟಿ ಕಮಿಷನರು ಹೇಳಿದರು: 8 ಲಕ್ಷ ರೂಪಾಯಿಗಳನ್ನು ಚಿತ್ರದುರ್ಗದಲ್ಲಿ ಕೆಲಸ ಕಾರ್ಯಗಳನ್ನು ಮಾಡಿಸಲಿಕ್ಕೆ allot ಮಾಡಿದ್ದೇವೆ ಎಂದು. ಹಣ ಒದಗಿಸಿದ್ದರೂ ಅದನ್ನು ಉಪಯೋಗಿಸಬೇಕಾದರೆ ಬಹಳ ಕಷ್ಟಗಳಿವೆ. ಆಡಿಟ್ ವರನ್ನು ಅಕೌಂಟ್ ಜನರಲ್‌ರವರನ್ನು ಸಮಾಧಾನಪಡಿಸಬೇಕಾದರೆ ಕಷ್ಟವಾಗುತ್ತದೆ. ಇಂಥ ಕ್ಷಾಮಕಾಲದಲ್ಲಿ ಈ ಡಿಪಾರ್ಟ್‌ಮೆಂಟಿನವರ ಕಾಟಬೇರೆ ಇದೆ ಎಂದರೆ ಏನು ಹೇಳೋಣ. ಜನರ ಕಷ್ಟವೋ ಹೇಳತೀರದು. ಇಷ್ಟು ದಿನಗಳವರೆಗೂ ಏನೋ ಹರಿವೆಸೊಪ್ಪು ಮುಂತಾದುವುಗಳನ್ನು ತಿನ್ನುತ್ತಿದ್ದರೆಂದರೆ ಈಗ ಮಳೆಯಿಲ್ಲದೆ ಅದೂ ಬೆಳೆಯುತ್ತಿಲ್ಲ. ನಾನು ದೊಡ್ಡೇರಿ, ಕೊಳಪ, ಅಮಕುಂದಿ, ದೇವಸಮುದ್ರ ಮುಂತಾದ ಅನೇಕ ಕಡೆ ಹೋಗಿ ನೋಡಿದ್ದೇನೆ. ಎಲ್ಲಿಯೂ ಮಳೆಯಿಲ್ಲದೆ ಏನೂ ತಿನ್ನಲಿಕ್ಕಿಲ್ಲದ ಹಾಗಾಗಿದೆ. ಆದ್ದರಿಂದ ಜನರಿಗೆ ದಿನಗೂಲಿ ಕೊಟ್ಟು ಆಹಾರ ಒದಗಿಸಿಕೊಡುವುದರಲ್ಲಿ, ಅಮಲ್ದಾರರು ಶೇಕ್‌ದಾರರ ಅಭಿಪ್ರಾಯ ಕೇಳಲಿಕ್ಕೆ ಕಳುಹಿಸುವುದು, ಶೇಕ್‌ದಾರರು ಇನ್ನೊಬ್ಬರನ್ನು ಕೇಳಬೇಕೆನ್ನುವುದಕ್ಕೆ ಹೊರಟರೆ 3 ತಿಂಗಳಾದರೂ ಏನೂ ಆಗುವುದಿಲ್ಲ. ಆದ್ದರಿಂದ ತಕ್ಷಣ ನೀವುಗಳೇ ಮಂತ್ರಿಗಳೆಲ್ಲಾ ಇತರ ಎಲ್ಲಾ ಕೆಲಸಗಳನ್ನೂ ಬದಿಗಿಟ್ಟು ಕೂಡಲೇ ಅಲ್ಲಿಗೆ ಬಂದು ನೋಡಿ ತಕ್ಷಣ ಕಾರ್ಯಕ್ರಮ ಕೈಗೊಳ್ಳುವುದು ಬಹಳ ಅಗತ್ಯ. ನಿಜವಾಗಿಯೂ ಪರಿಸ್ಥಿತಿ ಹಾಗಿದೆ. ಜನರಿಗೆ ತುರ್ತಾಗಿ ಕೂಲಿ ಕೆಲಸ ಒದಗಿಸಿಕೊಡಬೇಕು.

ನೇಯ್ಗೆಯವರ ಪಾಡನ್ನಂತೂ ಹೇಳುವಹಾಗಿಲ್ಲ. ಹಿಂದೆ ಆ ಪ್ರದೇಶದಲ್ಲಿ ಖಾದಿಗಾಗಿ ಲಕ್ಷಾಂತರ ರೂಪಾಯಿ ದುಡ್ಡು ಒದಗಿಸಿದ್ದರು. ಈಗಲೂ ಅದರಂತೆಯೇ ಮಾಡಿ. ಈಗಲೂ ಬೇಕಾದರೆ ನೂಲುವವರಿಗೂ ನೇಯ್ಗೆಯವರಿಗೂ ಸಹಾಯ ಮಾಡಿ. ಅಲ್ಲಿಯೇ ನೇಯ್ಗೆಗೆ ಏರ್ಪಾಡು ಮಾಡಿದರೆ ಎಲ್ಲರಿಗೂ ಕೂಲಿ ಕೊಡುವಾಗ ಒಂದು ರೂಪಾಯಿನಲ್ಲಿ ನಾಲ್ಕಾಣೆಯನ್ನು ಬಟ್ಟೆಯ ರೂಪವಾಗಿಯೇ ಕೊಡತಕ್ಕ ವ್ಯವಸ್ಥೆ ಮಾಡಬಹುದು. ಆದ್ದರಿಂದ ಖಾದಿ ಬಟ್ಟೆ ಮಾಡಿಸಲಿಕ್ಕೆ ನೀವು ಹಣ ಉಪಯೋಗಿಸುವಂಥ ಆ ಹಣ ಎಲ್ಲಿಗೂ ಹೋಗುವುದಿಲ್ಲ. ಒಟ್ಟಿನಲ್ಲಿ ಖಾದಿ ಕೈಗಾ

(ಶ್ರೀ ಟಿ. ಹನುಮಯ್ಯ.)

ರಿಕೆಯನ್ನು ನೀವು ಅಲ್ಲ ಜಾರಿಗೆ ತರದೇಹೋದರೆ ಆ ಜನರು ದಿನಗೂಲಿಗೆ ಹೋಗಬೇಕಾಗಿ ಬರುತ್ತದೆ. ಆದ್ದರಿಂದ ಈ ಒಂದು ಗ್ರಾಮಕೈಗಾರಿಕೆಯನ್ನು ಉತ್ತೇಜಿಸುವುದು ಬಹಳ ಅಗತ್ಯವೆಂದು ನಾನು ಸರ್ಕಾರದವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಈ ಸಂದರ್ಭದಲ್ಲಿ ಗ್ರಾಮಾಂತರಗಳಲ್ಲಿ ಅನೇಕ ಕಡೆ ಕುಡಿಯುವುದಕ್ಕೆ ಬಾವಿಗಳಲ್ಲಿ ನೀರಿಲ್ಲ. ಹಿಂದಿನ ಅಧಿವೇಶನದಲ್ಲಿ ಒಂದು ಪ್ರಶ್ನೆಗೆ ಉತ್ತರಕೊಡುತ್ತಾ ಎಲ್ಲ ಹರಿಜನರಿಗೂ ಸವರ್ಣ ಹಿಂದುಗಳ ಬಾವಿಗಳಿಗೆ ಪ್ರವೇಶವಿದೆಯೆಂದು ಹೇಳಿಬಿಟ್ಟರು. ಇಲ್ಲಿ ಪ್ರವೇಶವಿದೆ ಎಂದು ಹೇಳಿದ ಮಾತ್ರಕ್ಕೇ ಆಗಿಬಿಟ್ಟಿತೇ? ಎಲ್ಲಿಯೂ ಪ್ರವೇಶಕ್ಕೆ ಅವಕಾಶ ಕೊಡುತ್ತಾ ಇಲ್ಲ. ಹೀಗಾಗಿ ಇಂಥ ಕ್ಷಾಮಗಾಲದಲ್ಲಿ ಹೊಟ್ಟೆಗೆ ಆಹಾರವಿಲ್ಲವೆನ್ನುವುದರ ಜೊತೆಗೆ ಕುಡಿಯುವುದಕ್ಕೆ ನೀರೂ ಇಲ್ಲದ ತೊಂದರೆಯೂ ಬಂದಿವೆ. ಆದ್ದರಿಂದ ನೀರಿಲ್ಲದಿರುವ ಬಾವಿಗಳನ್ನು ಆಳಪಡಿಸಿ ನೀರನ್ನೊದಗಿಸುವುದಕ್ಕೆ ನಿಗಾ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಸ್ವಾಮಿ, ಬಹು ಮುಖ್ಯವಾದ ಒಂದು ವಿಷಯವೇನೆಂದರೆ, ಹಿಂದಿನ ಮಂತ್ರಿಮಂಡಲದಲ್ಲಿ ಪ್ರತಿ ವರ್ಷವೂ ಸರ್ಕಾರದವರು ನಿಮ್ನವರ್ಗದವರಿಗಾಗಿ 19 ಲಕ್ಷ ರೂಪಾಯಿಗಳನ್ನು ಒದಗಿಸುತ್ತಿದ್ದರು. ಆದರೂ ಅದೂ ಸಾಲದೆ ಇನ್ನೂ ಮೂರು ನಾಲ್ಕು ಲಕ್ಷ ಹೆಚ್ಚಾಗಿ ಕೊಡಬೇಕೆಂದು ಕೇಳುತ್ತಿದ್ದೆವು. ಆದರೆ ನಮ್ಮ ದುರದೃಷ್ಟವೋ ಏನೋ ಹೋದಸಾರಿ ಒದಗಿಸಿರುವ ಹಣದಲ್ಲೇ ಶೇಕಡ 57ರಷ್ಟನ್ನು ಖರ್ಚುಮಾಡದೆ ಉಳಿಸಿದ್ದಾರೆ. ಇದೇಕೆಂದು ಕೇಳಿದರೆ, ಸುಳ್ಳು ಅಪಾದನೆ ಮಾಡುತ್ತೀರೆಂದು ನಮ್ಮ ಮೇಲೆಯೇ ಹೇಳುತ್ತೀರಿ. 19 ಲಕ್ಷದಲ್ಲಿ ಸುಮಾರು 10 ಲಕ್ಷ ಮಾತ್ರ ಖರ್ಚಾಗಿದೆ. ಹೀಗೆ ಕಡಮೆ ಬೀಳುವುದಕ್ಕೇನು ಕಾರಣ? ಸರ್ಕಾರದವರೇನಾದರೂ ಖರ್ಚು ಮಾಡಬಾರದೆಂದು ಸೂಚನೆ ಕೊಟ್ಟಿದ್ದೀರಾ? ಅಥವಾ ಡೆಪ್ಯುಟಿ ಕಮೀಷನರು ಮತ್ತು ಅಮಲ್ದಾರರು ಖರ್ಚು ಮಾಡುವುದಕ್ಕೆ ಹಿಂತೆಗೆದರೇ? ಹೇಗಾದರೂ ಇರಲಿ ಉಳಿದಿರುವ ಹಣವನ್ನು ಈ ವರ್ಷ ಸೇರಿಸಿ ಖರ್ಚು ಮಾಡಬೇಕು. ಬಹಳ ಮನೆಗಳನ್ನು ಕಟ್ಟಬೇಕಾಗಿದೆ. ಇವುಗಳನ್ನು ಮಾಡಿಸಿದರೆ ಜನರಿಗೆ ಕೆಲಸವೂ ಸಿಕ್ಕಿದಹಾಗಾಗುತ್ತದೆ. ತಕ್ಷಣ ಈಗಿನ ಪರಿಸ್ಥಿತಿಯಲ್ಲಿ ಸರ್ಕಾರದವರು ರೈತರಿಗೂ ಇತರ ಜನರಿಗೂ ಹೆಚ್ಚು ಅನುಕೂಲವಾಗುವಂತೆ ತಕ್ಕ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತಾರೆಂದು ನಂಬಿ ನಾನು ಈ ನಿರ್ಣಯವನ್ನು ಸಮರ್ಥಿಸುತ್ತೇನೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ (ಅರಕಲಗೂಡು).—ಸ್ವಾಮಿ, ನಮ್ಮ ಮಾನ್ಯ ಸ್ನೇಹಿತರು ಆ ಜಿಲ್ಲೆಯಲ್ಲಿ ಒದಗಿರುವ ಕ್ಷಾಮಪರಿಸ್ಥಿತಿಯನ್ನು ನಮ್ಮೆಲ್ಲರ ಮನಸ್ಸಿಗೂ ಬಹಳ ಚೆನ್ನಾಗಿ ಅಂಟುವಂತೆ, ಮನಸ್ಸು ಕರಗುವಂತೆ ವಿವರಿಸಿ ಆ ಚಿತ್ರವನ್ನು ಸಭೆಯ ಮುಂದಿಟ್ಟಿದ್ದಾರೆ. ಇದರಲ್ಲಿ ನಮ್ಮೆಲ್ಲರ ಸಹಾನುಭೂತಿಯೂ ಇದೆ, ಸರ್ಕಾರದ ಸಹಾನುಭೂತಿಯೂ ಇದ್ದೆಯೆಂದು ತಿಳಿದುಕೊಂಡಿದ್ದೇವೆ. ನನಗೆ ತಿಳಿದ ಮಟ್ಟಿಗೆ ಸರ್ಕಾರದವರೂ ಕೂಡ ಕೈಲಾದಮಟ್ಟಿಗೂ ಸಹಾಯ ಮಾಡುತ್ತಿದ್ದಾರೆ. ಮಾಡುವುದರಲ್ಲಿದ್ದಾರೆ. ಇದೇ ರೀತಿ ನಮ್ಮ ಮಿತ್ರರಾದ ಶ್ರೀ ನಾರಾಯಣರೆಡ್ಡಿಯವರೂ ಕೋಲಾರಜಿಲ್ಲೆಯ ವಿಚಾರವನ್ನು ಹೇಳಿದರು. ಅವರು ಮಾತನಾಡಬೇಕಾದರೆ, ಬಹಳ ವೇಗದಿಂದಲೂ ಉದ್ವೇಗದಿಂದಲೂ ಮಾತನಾಡುತ್ತಾರೆ. ಆದರೂ ಅವರು ಹೇಳುವಷ್ಟು ಅಲ್ಲಿಪರಿಸ್ಥಿತಿ ಕೆಟ್ಟಿಲ್ಲ. ನಾನು ಅಲ್ಲಿಗೆ ಹೋಗಿದ್ದೆ. ಆಪ್ರದೇಶದಲ್ಲಿ ಮಳೆಹೊಯ್ದು ತಣ್ಣಗಾಗಿವೆ ಹವಾ ಚೆನ್ನಾಗಿದೆ. ಆದರೂ ರೆಡ್ಡಿಯವರ ಮನಸ್ಸು ತಣ್ಣಗಾಗಿಲ್ಲ. ಮುಂದಿನ ವರ್ಷ ಅಲ್ಲಿ ಒಳ್ಳೆಯ ಸ್ಥಿತಿಗತಿಗಳು ಬಂದು ಪರಿಸ್ಥಿತಿ ಸರಿಯಾಗುವ ಚಿನ್ಹೆಗಳಿವೆ. ಚಿತ್ರದುರ್ಗ ಜಿಲ್ಲೆಯೂ ಮೈದಾನ ಪ್ರದೇಶ, ಕ್ಷಾಮಪ್ರದೇಶ. ಕೋಲಾರದವರು ನಮ್ಮದು ಹೆಚ್ಚು ಕ್ಷಾಮಪ್ರದೇಶವೆಂದು ಹೇಳುತ್ತಾರೆ, ಚಿತ್ರದುರ್ಗದವರು ನಮ್ಮದು ಹೆಚ್ಚು ಕ್ಷಾಮಪ್ರದೇಶ ಎಂದು ಹೇಳುತ್ತಾರೆ. ಹೀಗೆ ಇವರಿವರಿಗೆ ವಾಗ್ವಾದವಾಗುವ ಮಧ್ಯೆ ಯಾವ ಗಲಾಟೆಯನ್ನೂ ಮಾಡದೆ, ಯಾವ ಶಬ್ದವನ್ನು ಮಾಡುವುದಕ್ಕೂ ಶಕ್ತಿಯಿಲ್ಲದ ಜನರೂ ಇದ್ದಾರೆ. ಅಂಥಾ ಪ್ರದೇಶಗಳ ಜನರ ಮುಖಂಡರೂ ಸಪ್ಪೆಯಾಗಿದ್ದಾರೆ. ಈ ಗಲಾಟೆಯಲ್ಲಿ ಕ್ಷಾಮಪೀಡಿತವಾಗಿರುವ ಇತರ ಪ್ರದೇಶಗಳಿಗೆ ಸಾಮಾನ್ಯವಾಗಿ ದೊರೆಯಬೇಕಾದ ಅನುಕೂಲಗಳೂ ದೊರೆಯದೇ ಹೋಗುತ್ತಿದೆ. ಕ್ಷಾಮಪೀಡಿತ ಪ್ರದೇಶಗಳು ಇನ್ನೂ ಕೆಲವಿವೆ, ಕಷ್ಟಕ್ಕೊಳಗಾಗಿರುವ ಪ್ರದೇಶಗಳಿನ್ನೂ ಇವೆ ಎಂಬುದನ್ನು ತಿಳಿಸುವುದಕ್ಕಾಗಿ ಎರಡು ಮಾತು ಹೇಳಲು ನಿಂತಿದ್ದೇನೆ. ಚಿಕ್ಕಮಗಳೂರು, ಶಿವಮೊಗ್ಗ ಜಿಲ್ಲೆಗಳಲ್ಲಿ ಕೆಲವು ಸ್ಥಳಗಳೂ, ಹಾಸನ ಜಿಲ್ಲೆಯಲ್ಲಿ ಎರಡು ತಾಲ್ಲೂಕುಗಳೂ ಮತ್ತು ಇತರ ಕೆಲವು ಸ್ಥಳಗಳೂ ಇವು ಕ್ಷಾಮಪೀಡಿತವಾಗಿವೆ. ಸಾಮಾನ್ಯವಾಗಿ ಇದು ಸಂಸ್ಥಾನದ ಎಲ್ಲಾ ಜಿಲ್ಲೆಗಳಲ್ಲಿಯೂ ಕೆಲವು ಪ್ರದೇಶಗಳಿಗೆ ಅನ್ವಯಿಸುತ್ತದೆ. ಇದಕ್ಕೆ ಕಾರಣ, ಎರಡು ಮೂರು ವರ್ಷಗಳಿಂದಲೂ ಮಳೆಯಿಲ್ಲವೇಯಿರುವುದು. ಅನಾವೃಷ್ಟಿಯಾಗಿ ಸಂಸ್ಥಾನದಲ್ಲಿ ಅಲ್ಲಲ್ಲಿ ಕೆಲವು ಪ್ರದೇಶಗಳಲ್ಲಿ ಈ ಪರಿಸ್ಥಿತಿ ಕಂಡುಬಂದಿದೆ. ಈ ವರ್ಷ ತುಂಬ ಕಷ್ಟವಾಗಿದೆ. ನಮ್ಮ ಹಾಸನ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಮಂತ್ರಿಗಳು ಪ್ರವಾಸಮಾಡಿದಾಗ ಅಲ್ಲಿ ಜೂನ್ ತಿಂಗಳವರೆಗೆ ಸ್ವಲ್ಪವೂ ಮಳೆಯಿಲ್ಲದೆ, ನಾಲ್ಕಾರು ಮೈಲಿಗಳು ಹೋದರೂ ಹಳ್ಳಗಳಲ್ಲಿ ನೀರು ಸಿಕ್ಕದೆ, ದನಗಳು ಸಾಯುತ್ತಿವೆಯೆಂಬುದು ಅವರ ಗಮನಕ್ಕೆ ಬಂದಿದೆ. ಸಾಮಾನ್ಯವಾಗಿ ಮುಂಗಾರು ಅಶ್ವಿನಿ, ಭರಣಿ ಮಳೆಯಲ್ಲಿ ಬತ್ತವನ್ನು ಹಾಕಬೇಕು. ಭರಣಿ ಮಳೆಯಲ್ಲಿ ಗಿಡ್ಡರಾಗಿ ಹಾಕುವುದು. ಈ ಕಾಲದಲ್ಲಿ ಆ ಎರಡು ಬೆಳೆಗೂ ಮಳೆ ಬರಲಿಲ್ಲ. ಅನಂತರ ಈ ಮಳೆ ಹಠಾತ್ತಾಗಿ ಹಿಡಿದು ಒಂದು ದಿನವೂ ಬಿಡಲಿಲ್ಲ. ಇದರಿಂದ ಅನೇಕರು, ಸುಮಾರು 95 ಭಾಗ ಜನರು ರಾಗಿ ಬಿತ್ತನೆ ಮಾಡಿಲ್ಲ. ತಕ್ಷಣ ಮಳೆ ಬಂದದ್ದರಿಂದ ಹೀಗಾಯಿತು. ಇನ್ನು 5 ಭಾಗ ಎಲ್ಲಿ ಮಳೆ ಹೆಚ್ಚು ಬರಲಿಲ್ಲವೋ, ಅಲ್ಲಿ ಹಾಕಿರಬಹುದು. ನಮ್ಮ ಜಿಲ್ಲೆಯಲ್ಲಿಯೂ ಕೂಡ ಯಾವ ಹೊಲದಲ್ಲಿಯೂ ಹಸರು ಕಾಣುತ್ತಿಲ್ಲ. ಮುಂದಾದರೂ ನಮಗೆ ಅನುಕೂಲವಾಗುತ್ತದೆಯೇ ಎಂದರೆ, 'ಆಗುವಹಾಗಿಲ್ಲ.' ಹೈನ್ರಾಗಿಯೂ ಆಗುವುದಿಲ್ಲ, ನಮ್ಮ ಜಿಲ್ಲೆಯಲ್ಲಿ. ಬೆಳೆಯ ಪರಿಸ್ಥಿತಿ ಹೀಗಿದೆ. ಮಳೆಯಿಲ್ಲದೆ ಮೇವಿಲ್ಲದೆ ಹಿಂದೆ ದನಗಳು ಸಾಯುತ್ತಿದ್ದು ಈಗ ಮಳೆ ವಿಪರೀತವಾಗಿರುವುದರಿಂದ ಹತ್ತು ಹದಿನೈದು ದಿವಸಗಳಿಂದ ನೂರಾರು ದನಗಳು ಸತ್ತಿರುವುದನ್ನು ನಾನೇ ನೋಡಿದ್ದೇನೆ. ಉಳುವುದಕ್ಕೆ ಎತ್ತುಗಳಿಲ್ಲದೆ ಕಷ್ಟವಾಗಿದೆ. ಈ ವಿಷಯದಲ್ಲಿ ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳಿಂದ ಸರ್ಕಾರಕ್ಕೆ ವರದಿ ಬಂದಿರಬಹುದು. ಸರ್ಕಾರದವರು ಮಲೆನಾಡು ಜಿಲ್ಲೆಗಳಿಗೂ ಸೂಕ್ತ ಪರಿಹಾರವನ್ನು ಕೊಡಬೇಕಾಗಿದೆ. ಮೇಲ್ಮನೆಯಲ್ಲಿ ಕೂಡ ಮಲೆನಾಡಿನ ಪ್ರತಿನಿಧಿಗಳು ಅಲ್ಲಿನ ಸ್ಥಿತಿಯ ಬಗ್ಗೆ ವಿವರಗಳನ್ನು

ಹೇಳಿರುವುದರಿಂದ ನಾನು ಹೆಚ್ಚು ಹೇಳಬೇಕಾಗಿಲ್ಲ. ಮೈದಾನ ಜಿಲ್ಲೆಗಳಲ್ಲಿ ಕ್ಷಾಮಪೀಡಿತ ಪ್ರದೇಶಗಳಿಗೆ ಯಾವ ಯಾವ ಅನುಕೂಲಗಳನ್ನು ನೀಡಬೇಕೋ ಪರಿಹಾರಗಳನ್ನೊದಗಿಸಬೇಕೋ ಅದೇ ರೀತಿ ಮಲೆನಾಡು ಪ್ರದೇಶಗಳಿಗೂ ಸಹಾಯ ನೀಡಬೇಕೆಂದು ಅರಿಕೆ ಮಾಡುತ್ತೇನೆ. ಎರಡಕ್ಕೂ ಒಂದೇ ರೀತಿ ಸಹಾಯ ಮಾಡಬೇಕು. ಪ್ರಜಾಪ್ರಭುತ್ವದಲ್ಲಿ ಯಾರದೂ ತಪ್ಪಿಲ್ಲ, ಎಲ್ಲಿಂದ ಒತ್ತಾಯ ಹೆಚ್ಚಾಗಿ ಬರುತ್ತದೆಯೋ ಅಲ್ಲಿಗೆ ಸಹಾಯ ಕೊಡುವುದು ನಮ್ಮ ಅನುಭವಕ್ಕೆ ಬಂದಿದೆ. ಕೊಡತಕ್ಕ ಸಹಾಯವನ್ನು ಎಲ್ಲ ಕಡೆಗೂ ಕೊಡಬೇಕು. 50 ಲಕ್ಷ ರೂಪಾಯಿಗಳನ್ನು ಎಲ್ಲ ಜಿಲ್ಲೆಗಳಿಗೂ ಒಂದೇ ರೀತಿ ಹಂಚಬೇಕೆಂದು ಪ್ರಾರ್ಥಿಸುತ್ತೇನೆ.

ಶ್ರೀ ಪಿ. ಮಸಿಯಪ್ಪ (ಹಿರಿಯೂರು).—ಮಾನ್ಯ ಅಧ್ಯಕ್ಷರೆ, ಈ ದಿವಸ ಶ್ರೀ ಇಮಾಂಸಾಹೇಬರು ಚಿತ್ರದುರ್ಗ ಮತ್ತು ಇತರ ಜಿಲ್ಲೆಗಳಲ್ಲಿ ಕ್ಷಾಮ ಪರಿಸ್ಥಿತಿಯ ದುಸ್ಥಿತಿಯ ಬಗ್ಗೆ ತಂದಿರುವ ನಿಲುವಳಿ ಸೂಚನೆಯನ್ನು ನಮ್ಮ ಹಿರಿಯ ಮಿತ್ರರೂ ಶಾಸನ ಸಭಾ ಸದಸ್ಯರೂ ಸಮರ್ಥನೆ ಮಾಡಿದ್ದಾರೆ. ಅವರು ಹೇಳಿರುವುದಕ್ಕೆ ಸೇರಿಸಿ ನಾನು ಹೊಸದಾಗಿ ಹೇಳತಕ್ಕದೇನೂ ಇಲ್ಲ. ಅವರು ಹೇಳದೇ ಬಿಟ್ಟಿರತಕ್ಕಂಥ ಅಥವಾ ಈಗಾಗಲೇ ಸರ್ಕಾರದವರೇ ಮಾಡುತ್ತಿರುವ ಕೆಲಸಗಳಲ್ಲಿ ಆಗಿರುವ ತೊಂದರೆಗಳು, ನಿರೀಕ್ಷಿಸಿದಷ್ಟು ಫಲದಾಯಕವಾಗದೇಯಿರಲು ಕಾರಣಗಳು ಇವುಗಳನ್ನು ಹೇಳಿದರೆ ಸ್ವಲ್ಪಮಟ್ಟಿಗೆ ಅವರ ಸೂಚನೆಯನ್ನು ಪುಷ್ಟೀಕರಿಸಿದಹಾಗಾಗುತ್ತದೆಂದು ಭಾವಿಸುತ್ತೇನೆ.

5–30 P. M.

ಸ್ವಾಮಿ, ಈಗ ಸರ್ಕಾರದವರು ನಮ್ಮ ಚಿತ್ರದುರ್ಗ ಜಿಲ್ಲೆಗೆ ಈ ಕ್ಷಾಮನಿವಾರಣೆಗಾಗಿ 8 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆಂದು ಹೇಳಬಹುದು. ಆದರೆ ಅದು ಏತಕ್ಕೂ ಸಾಲದು. ಆದರೆ ಅವರು ಹಾಗೆ ನಮ್ಮ ಜಿಲ್ಲೆಯೊಂದಕ್ಕೇನೇ ದ್ರವ್ಯಸಹಾಯ ನೀಡಿಲ್ಲ. ಅದೇ ರೀತಿಯಾಗಿ ಇನ್ನೂ ಅನೇಕ ಜಿಲ್ಲೆಗಳಿಗೂ ಹಣವನ್ನೊದಗಿಸಿದ್ದಾರೆಂಬ ವಿಚಾರ ಎಲ್ಲರಿಗೂ ಗೊತ್ತೇಇದೆ. ಆದರೂ ಜನರಿಗೆ ಆ ಸಹಾಯದಿಂದ ಪ್ರತಿಫಲ ಅಷ್ಟಾಗಿ ಒದಗಿಲ್ಲವೆಂದು ನಾನು ತಿಳಿಸಬೇಕಾಗಿದೆ. ನಾವು ನಿರೀಕ್ಷಿಸಿರುವ ಮಟ್ಟಕ್ಕಂತೂ ಅವರಿಗೆ ಇದರ ಪ್ರತಿಫಲ ಖಂಡಿತವಾಗಿಯೂ ದೊರೆಯುತ್ತಿಲ್ಲವೆಂದು ನಾನು ದೃಢವಾಗಿ ಹೇಳಬಲ್ಲೆ. ಅವರಿಗೆ ದೊರೆಯತಕ್ಕ ಆ ಅಷ್ಟಿಷ್ಟು ಹಣ ಕೂಡ ಸಕಾಲದಲ್ಲಿ ದೊರೆಯುತ್ತಿಲ್ಲವೆಂಬ ಅಂಶವನ್ನೇ ನಾನು ಪುನಃ ಈಗಲೂ ತಿಳಿಸಬೇಕಾಗಿದೆ. ಈಗ ನಾವು ಕೇಳತಕ್ಕ ಪರಿಹಾರ ಕಾರ್ಯಗಳನ್ನು ತಾವು ಇಲ್ಲಿಗೆ 3–4 ತಿಂಗಳ ಹಿಂದೆಯೇ ಅಲ್ಲಿ ಪ್ರಾರಂಭಿಸಬೇಕಾಗಿತ್ತು. ಆದರೆ ಸರ್ಕಾರದವರು ಒಂದು ಅಶಾದಾಯಕ ಭಾವನೆಯಿಂದ ಆ ಕೆಲಸಗಳನ್ನು ಮಾಡಿಸದೆ ಹಾಗೆಯೆ ಮುಂದುವರಿಸಿಕೊಂಡು ಬಂದಿರುತ್ತಾರೆ. ಆದರೆ ನಾವು ಅದನ್ನು ಈ ದಿವಸ ತಪ್ಪು ಎಂದು ಹೇಳುವುದಕ್ಕಾಗುವುದಿಲ್ಲ. ಇವರ ಆಡಳಿತ ಕ್ರಮದಲ್ಲಿ ಒಂದು ಸುವ್ಯವಸ್ಥೆ ಇರಬೇಕಾಗಿದೆ. ಹಾಗೆ ಒಂದು ಸುವ್ಯವಸ್ಥೆ ಇದ್ದಲ್ಲಿ ಅನೇಕ ಕೆಲಸಗಳು ಇದುವರೆಗಾಗಲೇ ಪ್ರಾರಂಭವಾಗಬೇಕಾಗಿತ್ತು. ಆದರೆ ಈಗ ನಮ್ಮ ಜಿಲ್ಲೆಯಲ್ಲಿ ಮುಂಗಾರು ಮಳೆಗಳೆಲ್ಲಾ ಹೋಗಿ ಈಗಾಗಲೇ ಬೇಸಿಗೆ ಪ್ರಾರಂಭವಾಗಿರುವಂತೆ ಕಾಣುತ್ತಿದೆ. ಹೀಗಾಗಿ ಅಲ್ಲಿ ಯಾವ ಕೆಲಸವನ್ನೂ ಪ್ರಾರಂಭಿಸಲು ಅವಕಾಶವಿಲ್ಲದಂಥ ಪರಿಸ್ಥಿತಿ ಈಗ ಒದಗಿದೆ. ಸರ್ಕಾರದವರು ಚಿತ್ರದುರ್ಗ ಜಿಲ್ಲೆಗೆ 8 ಲಕ್ಷ ರೂಪಾಯಿಗಳನ್ನು ಒದಗಿಸಿದ್ದಾಗ್ಯೂ ಅಲ್ಲಿ ಜಿಲ್ಲಾಧಿಕಾರಿಗಳು, ಅಮಲ್ದಾರರು ಮತ್ತು ಸಬ್ ಡಿವಿಜನ್ ಅಧಿಕಾರಿಗಳನ್ನು ಸಭೆ ಸೇರಿಸಿ ಮೀಟಿಂಗ್ ಮಾಡಿ ಏನೇನು ಕೆಲಸಗಳನ್ನು ಕೈಕೊಳ್ಳಬೇಕೆಂಬ ಬಗ್ಗೆ ಪ್ರೊಸೀಡಿಂಗ್ಸ್‌ನ್ನು ಮಾಡಿ ಕಳುಹಿಸಬೇಕೆಂದು ತಿಳುವಳಿಕೆಕೊಡುತ್ತಾರೆ. ಅನಂತರ ಅಮಲ್ದಾರರುಗಳು ಅವರವರ ತಾಲ್ಲೂಕಿನಲ್ಲಿ ಏನೇನು ಕೆಲಸಗಳನ್ನು ಮಾಡಬೇಕಾಗಿರುತ್ತದೆಯೆಂದು ಅಲ್ಲಿನ ಪರಿಸ್ಥಿತಿ ನೋಡಿಕೊಂಡು ಒಂದು ವರದಿಯನ್ನು ತಯಾರಿಸಿದರೆ ಅದು ಪುನಃ ಸಬ್‌ಡಿವಿಜನ್ ಅಧಿಕಾರಿಗಳ ಮತ್ತು ಇಂಜನಿಯರಿಂಗ್ ಇಲಾಖೆಯ ಸ್ಕ್ರೂಟಿನಿಗೆ ಹೋಗಬೇಕಾಗುತ್ತದೆ. ಅವರ ಸ್ಕ್ರೂಟಿನಿ ಮುಗಿದ ನಂತರ ಅದು ಡೆಪ್ಯುಟಿ ಕಮೀಷನರ್ ಅವರ ಪರಿಶೀಲನೆಗೆ ಹೋಗಿ ಕಡೆಗೆ ಅದು ರೆವಿನ್ಯೂ ಕಮೀಷನರವರಿಗೂ ಸಹ ಬರಬೇಕಾಗಿದೆಯೋ ಏನೋ ತಿಳಿಯದು. ಹೀಗಾದರೆ ಈ ಕೂಲಿಯ ಕೆಲಸವನ್ನೇ ನಂಬಿಕೊಂಡಿರುವ ಆ ಬಡಜನರ ಗತಿಯೇನಾಗಬೇಕು! ಹೀಗಾಗಿ ಆ ಜನರಿಗೆ ಯಾವ ಕೂಲಿಕೆಲಸಗಳೂ ಸಿಕ್ಕದೆ, ಬಹಳ ನಿಶ್ಶಕ್ತಿವಂತರಾಗಿ ಅವರಿಗೆ ಕೆಲಸಮಾಡಲು ಶಕ್ತಿಯೇ ಇಲ್ಲದಂತಾಗಿದೆ. ಸ್ಥಿತಿ ಈ ಮಟ್ಟಕ್ಕೆ ಬಂದಿರುವುದರಿಂದ ತಾವಿನ್ನು 10–15 ದಿವಸಗಳೊಳಗಾಗಿ ಅವರಿಗೆ ಪರಿಹಾರ ನೀಡದೆ ಹೋದರೆ ಆ ಜನರ ಸ್ಥಿತಿ ತುಂಬ ಕಷ್ಟಕ್ಕೆ ಬರುತ್ತದೆ. ಏನಾದರೂ ಕೆಲಸಗಳನ್ನು ನಡೆಸಬೇಕೆಂದರೆ ಭೂಮಿಯೆಲ್ಲಾ ಮಳೆಯಿಲ್ಲದೆ ಸಿಡಿದು ಹೋಗಿ ಬಾಯಿ ಬಿಟ್ಟುಕೊಂಡಿದೆ. ಪರಿಸ್ಥಿತಿ ಈ ಮಟ್ಟಕ್ಕೆ ಬಂದಿರುವಾಗ ತಾವು ಏನು ಸಹಾಯ ನೀಡಿದರೇನು ಪ್ರಯೋಜನವಾಗುತ್ತದೆ! ಆದುದರಿಂದ ತಾವು ಆದಷ್ಟು ಬೇಗ ಅವರಿಗೆ ದನಧ್ಯಾನಗಳೆಲ್ಲವನ್ನು ಸಹಯಮಾಡಿದರೆ ಅವರು ಉಳಿದುಕೊಳ್ಳಲು ಅವಕಾಶವಾಗಬಹುದು.

ಇದನ್ನು ಇಂಜನಿಯರಿಂಗ್ ಇಲಾಖೆಯವರು ತಾವು ಮಾಡಬೇಕಾದ ಹಲವಾರು ಕಾಮಗಾರಿಗಳನ್ನು ಅವರು ಕಾಲಕಾಲಕ್ಕೆ ಸರಿಯಾಗಿ ನಡೆಸುತ್ತಿಲ್ಲವೆಂಬ ವಿಚಾರದಲ್ಲಿ ಸಂಸ್ಥಾನದ ಹಲವಾರು ಕಡೆಗಳಿಂದ ಕೂಗುಗಳು ಕೇಳಿಬರುತ್ತಿವೆ. ಹೇಳುವುದಾದರೆ ನಮ್ಮ ಚಿತ್ರದುರ್ಗ ಜಿಲ್ಲೆಯಲ್ಲೇ ತ್ವರಿತವಾಗಿ ಕೈಕೊಳ್ಳಬಹುದಾಗಿರುವಂಥ ಅನೇಕ ಕಾಮಗಾರಿಗಳು ಇದ್ದಾಗ್ಯೂ ಅವುಗಳ ಎಸ್ಟಿಮೇಟ್ ತಯಾರಾಗಿ ಎಷ್ಟೋ ದಿವಸಗಳಾಗಿದ್ದರೂ ಅವುಗಳ ಕೆಲಸ ಇನ್ನು ಪ್ರಾರಂಭವಾಗಿಲ್ಲ. ಅವುಗಳನ್ನು ಬೇಗ ಪ್ರಾರಂಭಿಸುವಂತೆ ಆರ್ಡರಾಗಬೇಕೆಂಬುದಾಗಿ ಒಂದೊಂದು ವಿಚಾರಕ್ಕೂ ತಮ್ಮಲ್ಲಿ ಮನವಿಗಳನ್ನು ಮಾಡಿಕೊಳ್ಳಲಾಗಿದೆ. ಈಗಲಾದರೂ ತಾವು ಅಂಥ ಸಣ್ಣ ಪುಟ್ಟ ಕೆಲಸಗಳನ್ನಾದರೂ ಬೇಗ ಮಂಜೂರ ಮಾಡಿ ಅಲ್ಲಿ ಕೆಲಸಗಳು ಬೇಗ ನಡೆಯುವಂತೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇಲಾಖೆಯ ಅಧಿಕಾರಿಗಳಿಗೂ ಸಹ ತಾವು ಎಚ್ಚರಿಕೆಕೊಡಬೇಕಾಗಿದೆ.

ಇನ್ನು ಈ ರಿಲೀಫ್ ಕಾಮಗಾರಿಗಳನ್ನು ಯಶಸ್ವಿಯಾಗಿ ನಡೆಸುವುದಕ್ಕೆ ಮತ್ತು ಅವುಗಳ ಮೇಲ್ವಿಚಾರಣೆ ನೋಡಿಕೊಳ್ಳುವುದಕ್ಕಾಗಿ ತಾವು ಸರಿಯಾದ ಸಿಬ್ಬಂದಿಯನ್ನು ಅಮಲ್ದಾರರಿಗೆ ಒದಗಿಸಬೇಕಾದ್ದು ಒಂದು ಬಹಳ ಮುಖ್ಯವಾದ ವಿಚಾರ. ಈ ವಿಚಾರದಲ್ಲಿ ಆಗಲೇ ಶ್ರೀಯುತ ಮಹಮದ್ ಇಮಾಂರವರು ಬೇಕಾದಷ್ಟು ವಿಷಯಗಳನ್ನು ಪ್ರಸ್ತಾಪಮಾಡಿ ಆ ಬಗ್ಗೆ ಮುಖ್ಯ ಸಲಹೆಗಳನ್ನು ನೀಡಿದ್ದಾರೆ. ಈಗ ತಾವು ಅವರಿಗೆ ಸಾಕಷ್ಟು ಸಿಬ್ಬಂದಿಯನ್ನು ಕೊಡದಿರುವುದರಿಂದ ಅವರು ಈ ಸಂಬಂಧವಾಗಿ ಒಂದು ಹೆಜ್ಜೆ ಕೂಡ ಮುಂದೆ ಇಡ

(ಶ್ರೀ ವಿ. ಮಸಿಯಪ್ಪ.)

ದಂತಾಗಿದೆ. ತಾವು ಈ ಒಂದು ಸಿಬ್ಬಂದಿಯನ್ನು ಅವರಿಗೆ ಒದಗಿಸಿದರೇನೆ ಆಗ ಅಲ್ಲಿ ಜನರಿಗೆ ಕೂಲಿಕೆಲಸ ಸಿಕ್ಕಲು ಸಾಧ್ಯವಾಗುತ್ತೆ.

ಇದೇ ಸಂದರ್ಭದಲ್ಲಿ ನಾನು ಮತ್ತೊಂದು ವಿಚಾರವನ್ನು ಸಹ ತಮ್ಮ ಗಮನಕ್ಕೆ ತರಬೇಕಾಗಿದೆ. ತಾವು ಕೂಲಿಮಾಡತಕ್ಕ ಜನರಿಗೆ ನಾಲ್ಕಾಣೆಯಾಗಲಿ ಅಥವಾ 8 ಆಣೆಯೇ ಆಗಲಿ, ಹೀಗೆ ಕೊಡ್ಮತಕ್ಕ ಕೂಲಿಯನ್ನು ಅವರಿಗೆ ಕೂಡಲೇ ಕೈಗೆ ಸಿಕ್ಕುವಂತೆ ಮಾಡಬೇಕು. ಹಾಗಿಲ್ಲದೆ ಅದು ಅವರಿಗೆ 10 ದಿವಸಕ್ಕೋ ಅಥವಾ 15 ದಿವಸಕ್ಕೋ ಸಿಕ್ಕುವಂತೆ ಮಾಡಿದರೆ ತಾವು ಅವರಿಗೆ ಏನು ಸಹಾಯ ಮಾಡಿದಂತಾಯಿತು? ನಿರ್ಗತಿಕರಿಗೆ ತಾವು ತಕ್ಷಣವೇ ಅನುಕೂಲವಾಗಲೆಂದು ಮಾಡಿರುವ ಏರ್ಪಾಟುಗಳಿಂದಲಾದರೂ ಅವರಿಗೆ ದೊರೆತ ಪುರುಷಾರ್ಥವಾದರೂ ಏನು! ಆದುದರಿಂದ ಈ ಕೆಲಸಗಳನ್ನು ಕೈಗೊಳ್ಳುವುದರ ಜೊತೆಗೆ ಆ ಕೂಲಿ ಬಟವಾಡೆಯನ್ನೂ ಸಹ ಅವರಿಗೆ ಆಗಿಂದಾಗ್ಗೆ ಪಾವತಿಮಾಡುವಂತೆ ಅನುಕೂಲವಾಗಲು ತಾವು ಒಬ್ಬ ಸಬ್‌ಓವರ್‌ಸೀಯರನ್ನಾದರೂ ಇದಕ್ಕೆ ನೇಮಿಸಲೇಬೇಕಾಗಿದೆ. ನನ್ನ ಅಭಿಪ್ರಾಯದಲ್ಲಿ ಸಾಧ್ಯವಾಗುವುದಾದರೆ ಇದಕ್ಕಾಗಿಯೇ ಒಬ್ಬ ಅಮಲ್ದಾರರನ್ನು ಪ್ರತ್ಯೇಕವಾಗಿಯಾದರೂ ನೇಮಿಸಿದರೂ ಆಗಬಹುದೆಂದು ಹೇಳುತ್ತೇನೆ. ಆದರೆ ತಾವು ಹಾಗೆ ಒಬ್ಬ ಅಮಲ್ದಾರರನ್ನು ಇದಕ್ಕಾಗಿಯೇ ನೇಮಿಸಬೇಕಾದಂಥ ಸಂದರ್ಭವಿರುವುದಿಲ್ಲವೆಂದು ಹೇಳಬಹುದು. ಆದರೆ ಈಗ ಅಲ್ಲೆಲ್ಲಾ ಅಂಥ ದುರ್ಭಿಕ್ಷ ಪರಿಸ್ಥಿತಿಯುಂಟಾಗಿರುವುದರಿಂದ ತಾವು ಕಡ್ಡಾಯವಾಗಿ ಒಬ್ಬ ಅಮಲ್ದಾರರನ್ನೇ ಇದಕ್ಕಾಗಿ ಸ್ಪೆಷಲ್ ಆಗಿ ನೇಮಿಸಬೇಕಾಗಿದೆ. ತಪ್ಪಿದರೆ 2-3 ಜನ ಸಬ್‌ಓವರ್‌ಸೀಯರ್ರುಗಳನ್ನಾಗಲೀ ಇಲ್ಲವೇ ರೆವೆನ್ಯೂ ಇನ್ಸ್‌ಪೆಕ್ಟರುಗಳನ್ನೋ ಅಥವಾ ಕಡೆಗೆ ಅದೂ ಸಾಧ್ಯವಾಗದಿದ್ದರೆ ತಾಲ್ಲೂಕು ಕಚೇರಿಯಲ್ಲಿ ಕೆಲಸ ಮಾಡತಕ್ಕ ಗುಮಾಸ್ತರ ಪೈಕಿಯೇ ಯಾರನ್ನಾದರೂ ನೇಮಿಸಲೇ ಬೇಕು. ಹಾಗೆ ಮಾಡದೆ ಹೋದರೆ ಇದು ಅಷ್ಟು ಫಲಕಾರಿಯಾಗಿ ಕೆಲಸಮಾಡುವುದಿಲ್ಲವೆಂದು ಸರ್ಕಾರದವರಿಗೆ ನಾನು ಒತ್ತಾಯಪೂರ್ವಕವಾಗಿ ತಿಳಿಸಬೇಕಾಗಿದೆ. ಇದೇ ವಿಚಾರವಾಗಿ ಶ್ರೀ ಮಹಮಹ್ ಇಮಾಂರವರೂ ಮತ್ತು ಶ್ರೀ ಶ್ರೀನಿವಾಸಯ್ಯಂಗಾರ್ ಅವರು ಬಹಳ ಒತ್ತಿ ಹೇಳಿರುತ್ತಾರೆ.

ಇನ್ನು ಕುಡಿಯುವ ನೀರಿನ ವಿಚಾರ. ಈ ಸಮಸ್ಯೆಯನ್ನು ತಾವು ತಕ್ಷಣವೇ ಪರಿಹರಿಸಬೇಕಾದುದು ತಮ್ಮ ಅತಿ ಮುಖ್ಯ ಕರ್ತವ್ಯಗಳಲ್ಲೊಂದಾಗಿದೆ. ಆದರೆ ತಾವು ದೊಡ್ಡ ದೊಡ್ಡ ನಗರಗಳಿಗಾದರೆ 50-60 ಲಕ್ಷ ರೂಪಾಯಿಗಳ ಮೇಲ್ಪಟ್ಟು ಖರ್ಚುಮಾಡಿ ನೀರಿನ ಸೌಕರ್ಯವನ್ನುಂಟುಮಾಡಿ ಕೊಡುತ್ತಿದ್ದೀರಿ. ಅದೇ ರೀತಿಯಲ್ಲಿ ಆ ನೀರಿನ ಸೌಕರ್ಯವನ್ನು ಹಳ್ಳಿಗಳಲ್ಲಿರತಕ್ಕವರಿಗೆ ಮಾತ್ರ ತಾವು ಒದಗಿಸುತ್ತಿಲ್ಲ. ಇಂಥ ಒಂದು ಸವತೀ ಮಾತ್ಸರ್ಯದ ನೀತಿಯನ್ನು ತಾವೇಕೆ ಅನುಸರಿಸುತ್ತಿದ್ದೀರೋ ಅದು ನನಗೆ ಗೊತ್ತಾಗುತ್ತಿಲ್ಲ. ಹಿಂದಿನ ಸಾಲಿನ ಬಡ್ಜೆಟ್ಟನ್ನು ತೆಗೆದುನೋಡಿದರೆ ತಾವು ನಗರಗಳ ನೀರಿನ ಸರಬರಾಯಿಗಾಗಿ ಲಕ್ಷಾಂತರ ರೂಪಾಯಿಗಳನ್ನೊದಗಿಸಿರುವುದು ಕಂಡುಬರುತ್ತದೆ. ಈ ಹಿಂದೆ ಹಳ್ಳಿಗಳಿಗೂ ಸಹ ಅದೇ ರೀತಿಯಲ್ಲಿ ಹೆಚ್ಚಿನ ಮೊಬಲಗನ್ನು ಈ ನೀರಿನ ವ್ಯವಸ್ಥೆಗಾಗಿ ಒದಗಿಸುತ್ತಿದ್ದರು. ಹಿಂದೆ ಹಾಗೆ ಹಣವನ್ನು ಒದಗಿಸಿದ್ದರೂ ಅಷ್ಟನ್ನೂ ಖರ್ಚುಮಾಡುವುದಕ್ಕೆ ಸಾಧ್ಯವಾಗದೆ ಸಹಸ್ರಾರು ರೂಪಾಯಿಗಳನ್ನು ಎಂದರೆ ಮಂಜೂರಾಗಿದ್ದ ಬಡ್ಜೆಟ್ಟಿನಲ್ಲೇ ಅಷ್ಟನ್ನು ಸರ್ಕಾರಕ್ಕೆ ವಾಪಸ್ಸು ಬಿಟ್ಟುಬಿಡುತ್ತಿದ್ದರು. ನಮ್ಮ ಜಿಲ್ಲೆಯ ಪರಿಸ್ಥಿತಿ ಈಗಹಾಗಿಲ್ಲ. ಅಲ್ಲಿ ನೀರಿನ ಅಭಾವ ಪೂರಾಉಂಟಾಗಿದೆ. ಈ ವಿಚಾರವಾಗಿ ಜಿಲ್ಲಾಧಿಕಾರಿಗಳೂ ಮತ್ತು ಜಿಲ್ಲಾಸಮಿತಿಯವರೂ ಸರ್ಕಾರಕ್ಕೆ ವರದಿಗಳನ್ನು ಕಳುಹಿಸಿದ್ದಾರೆ. ನಾವು ಈ ದಿವಸ ಅವರಿಗೆ ಆ ಒಂದು ಸಹಾಯವನ್ನು ಕಲ್ಪಿಸಿ ಕೊಡದೆ ಹೋದರೆ ನಾವು ಅವರ ಪ್ರತಿನಿಧಿಗಳೆಂದು ಹೇಳಿಕೊಂಡು ಬಂದು ಈ ಸಭೆಯಲ್ಲಿ ಕುಳಿತಿದ್ದು ಹಾಗೆಯೇ ಹೋದಲ್ಲಿ ನಾವು ಅವರಿಗೆ ಖಂಡಿತ ಮುಖಗಳನ್ನು ತೋರಿಸುವುದಕ್ಕಾಗುವುದಿಲ್ಲ. ಅಥವಾ ತಾವು ಒಂದು ವೇಳೆ ಅದಕ್ಕಾಗಿ 50-60 ಸಾವಿರ ರೂಪಾಯಿಗಳನ್ನು ಮಂಜೂರು ಮಾಡಿದರೂ ಆ ಹಣದಿಂದ ಒಂದು ಅಡಿ ಕೂಡ ಆ ಬಾವಿಗಳ ಆಳವನ್ನು ಹೆಚ್ಚು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಹೀಗಿರುವುದರಿಂದ ಸರ್ಕಾರದವರು ಈ ಬಾಬಿನಲ್ಲಿ ಏನೇನು ಕೆಲಸಗಳು ಪ್ರೋಗ್ರೆಸ್ ಆಗಿರುತ್ತವೆಂಬ ಬಗ್ಗೆ ಈ 53-54ನೆಯ ಸಾಲಿನ ಅಡ್ಮಿನಿಸ್ಟ್ರೇಷನ್ ಬಗ್ಗೆ ಏನು ರಿಪೋರ್ಟು ಕೊಡುವುದಕ್ಕೆ ಸಾಧ್ಯವಿದೆ! ಇಂಥ ಒಂದು ಪರಿಸ್ಥಿತಿ ಈಗ ಅಲ್ಲಿ ಉಂಟಾಗಿದೆ. ಮೊನ್ನೆ ತಾನೆ ಮಾನ್ಯ ಗೃಹ ಸಚಿವರು ನಮ್ಮ ಜಿಲ್ಲೆಗೆ ಬಂದಿದ್ದಾಗ್ಗೆ ಈ ವಿಚಾರಗಳೆಲ್ಲವನ್ನೂ ಅವರಿಗೆ ಅರಿಕೆ ಮಾಡಿಕೊಂಡಿದ್ದೇವೆ. ಅವರೂ ಕೂಡ ಈ ವಿಚಾರಗಳನ್ನೆಲ್ಲಾ ಕಣ್ಣಾರೆ ನೋಡಿದ್ದಾರೆ. ಈ ಎಲ್ಲ ಕಾರಣಗಳಿಂದ ನಾವು ನಮ್ಮ ಜಿಲ್ಲೆಗೆ ಇನ್ನು 5 ಲಕ್ಷ ರೂಪಾಯಿಗಳನ್ನಾದರೂ ಈ ಬಾಬಿಗೆ ಹೆಚ್ಚಿಗೆ ಕೊಡಬೇಕೆಂದು ಕೇಳಿಕೊಂಡಿರುತ್ತೇವೆ. ಈ ಮೊಬಲಗನ್ನು ತಾವು ಒದಗಿಸಿಕೊಟ್ಟು ಅವರಿಗೆ ಕುಡಿಯುವ ನೀರಿನ ಅನುಕೂಲವನ್ನು ಒದಗಿಸಿ ಕೊಡತಕ್ಕದ್ದು ತೀರಾ ಅವಶ್ಯಕವೆಂದು ಕೇಳಿಕೊಳ್ಳುತ್ತೇನೆ.

ಇಷ್ಟೆಲ್ಲವನ್ನೂ ಹೇಳಿಬಿಟ್ಟ ಮೇಲೆ ಇನ್ನು ಖಾದಿಯ ವಿಚಾರವಾಗಿ ಎರಡು ಮಾತುಗಳನ್ನು ತಿಳಿಸಬೇಕಾಗಿದೆ. ಈ ಖಾದಿ ಎಂಬುದು ಅಲ್ಲಿಯ ಜನರಿಗೆ ಒಂದು ಮನೆ ಕೈಗಾರಿಕೆಯಾಗಿ ಹೋಗಿದೆ. ಆದುದರಿಂದ ಅವರಿಗೆ ಈ ಕೈಗಾರಿಕೆಯನ್ನು ಮುಂದುವರಿಸಿಕೊಂಡು ಬರಲು ಸಹಾಯ ನೀಡಬೇಕಾಗಿದೆ. ಅನೇಕ ಮಧ್ಯಮವರ್ತಿ ಸಂಸಾರಿಗಳು ಈ ವೃತ್ತಿಯನ್ನಿಟ್ಟುಕೊಂಡಿರುತ್ತಾರೆ. ಇವರು ಅತ್ತಲಾಗಿ ಹೈಕ್ಲಾಸಿಗೂ ಸೇರಲಿಲ್ಲ. ಇತ್ತ ಲೋಕ್ಲಾಸಿಗೂ ಸೇರಲಿಲ್ಲ. ಹೀಗಾಗಿ ಅವರು ಮಧ್ಯಮವರ್ತಿಯ ಜನಗಳಾಗಿದ್ದಾರೆ. ಅವರಿಗೂ ತಾವು ಒಂದು ಸಹಾಯ ನೀಡುವುದು ಅತ್ಯಗತ್ಯವಾದುದೆಂದು ಹೇಳಿ, ನನಗೆ ಈ ಒಂದೆರಡು ಮಾತುಗಳನ್ನಾಡಲು ಅವಕಾಶ ಕಲ್ಪಿಸಿ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದನೆಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕಡಿದಾಳ್ ಮಂಜಪ್ಪ.—ಸ್ವಾಮಿ, ಅಧ್ಯಕ್ಷರೇ ಶ್ರೀ ಜೆ. ಮಹಮ್ಮದ್ ಇಮಾಂರವರು ಈ ಒಂದು ನಿಲುವಳಿ ಸೂಚನೆಯನ್ನು ಸಭೆಯ ಮುಂದೆ ತಂದ ಸರ್ಕಾರದವರು ಇದುವರೆಗೂ ಕ್ಷಾಮಪರಿಹಾರದ ಬಗ್ಗೆ ಏನೇನು ಕಾರ್ಯಕ್ರಮಗಳನ್ನು ಕೈಕೊಂಡಿದಾರೆಂಬುದನ್ನು ತಿಳಿಸುವುದಕ್ಕೆ ಒಂದು ಅವಕಾಶವನ್ನು ಕಲ್ಪಿಸಿ ಕೊಟ್ಟಿದ್ದಕ್ಕಾಗಿ ಅವರಿಗೆ ನನ್ನ ವಂದನೆಗಳು. ನಾನು ಮೊದಲಿಂದಲೂ ಮಾನ್ಯ ಸದಸ್ಯರೆಲ್ಲರೂ ಮಾಡಿದಂಥ ಭಾಷಣಗಳನ್ನು ಬಹಳ ಕುತೂಹಲದಿಂದ ಕೇಳುತ್ತಿದ್ದೆನು. ಆದರೆ ನನಗೆ ಈ ದಿವಸ ಬಡ್ಜೆಟ್

ಅಧಿವೇಶನದಲ್ಲಿ ಕುಳಿತು ಭಾಷಣಗಳನ್ನು ಕೇಳುತ್ತಿದ್ದಂತೆ ಭಾಸವಾಗುತ್ತಿದೆ.

ಕಳೆದ ವರ್ಷವೂ ಸಮರ್ಪಕವಾಗಿ ಮಳೆ ಬೆಳೆಯಾಗದೆ ಸಂಸ್ಥಾನದಲ್ಲಿರತಕ್ಕ 51 ತಾಲ್ಲೂಕುಗಳಲ್ಲಿ ಕ್ಷಾಮ ಪರಿಸ್ಥಿತಿ ಪ್ರಾರಂಭವಾಯಿತು. ಸರ್ಕಾರದವರು ಬಹಳ ಎಚ್ಚರಿಕೆಯಿಂದ ಕಾರ್ಯಕ್ರಮ ಕೈ ಕೊಂಡಿದ್ದರಿಂದ ಪರಿಸ್ಥಿತಿ ಹತೋಟಿಗೆ ಬಂತು. ಚಿತ್ರದುರ್ಗ ಜಿಲ್ಲೆಯಲ್ಲಿ ಕಳೆದ ವರ್ಷ ಕೆಲವು ತಿಂಗಳ ಕ್ಷಾಮ ಪರಿಸ್ಥಿತಿ ಸ್ವಲ್ಪ ಉಲ್ಬಣಾವಸ್ಥೆಯಲ್ಲಿದ್ದಾಗ್ಯೂ ಅಕ್ಟೋಬರ್ ತಿಂಗಳಿನಲ್ಲಿ ಮಳೆಯಾದುದರ ಪರಿಣಾಮವಾಗಿ ಜೋಳದ ಪೈರು ಕೆಲವು ಭಾಗಗಳಲ್ಲಿ ಚೆನ್ನಾಗಿಯೇ ಆಯಿತು.

ಶ್ರೀ ಜೆ. ಮಹಮ್ಮದ್ ಇಮಾಂ.—ತಕ್ಕಮಟ್ಟಿಗೆ ಆಯಿತೆಂದು ಹೇಳಿ.

ಶ್ರೀ ಕಡಿದಾಳ್ ಮಂಜಪ್ಪ.—ಚೆನ್ನಾಗಿಯೇ ಆಗಿದೆ. ಆದರೂ, ನನಗೆ ಬಂದಿರತಕ್ಕ ಸಮಾಚಾರದ ಪ್ರಕಾರ ಆ ರೈತರು ತಾವು ಬೆಳೆದಿದ್ದಂಥ ಜೋಳವನ್ನು ತಮ್ಮಲ್ಲೇ ಇಟ್ಟುಕೊಳ್ಳದೆ ಮುಂಜಾಗ್ರತೆ ಕಾರ್ಯಕ್ರಮವನ್ನು ಯೋಚನೆ ಮಾಡದೆ ಮಾರಾಟ ಮಾಡಿದುದರ ಸಲುವಾಗಿ ಈಗ ಪರಿಸ್ಥಿತಿ ಹದಗೆಟ್ಟಿದೆಯೆಂದು ಗೊತ್ತಾಗಿದೆ. ಈಗ 15 ದಿವಸಗಳಿಂದೀಚೆಗೆ ಪರಿಸ್ಥಿತಿ ಬಹಳ ಉಲ್ಬಣಾವಸ್ಥೆಗೆ ಬಂದಿದೆಯೆಂದು ಮಾನ್ಯ ಮಿತ್ರರು ತಿಳಿಸಿದರು. ನನಗೇನೋ ನಿಜವಾಗಿ 15 ದಿವಸಗಳಿಗಿಂತ ಈಚಿನ ಪರಿಸ್ಥಿತಿ ಏನಾಗಿದೆಯೆಂದು ಕರಾರುವಾಕ್ಕಾಗಿ ಹೇಳಲಾರೆ, ಸರ್ಕಾರದವರು ಕಳೆದ $1\frac{1}{2}$ ವರ್ಷಗಳಿಂದ ಅವರಕೈಯಲ್ಲಿ ಎಷ್ಟು ಸಾಧ್ಯವೋ ಆ ಎಲ್ಲಾ ಕಾರ್ಯಕ್ರಮಗಳನ್ನೂ ಕೈಕೊಂಡಿದ್ದಾರೆ. ಆ ಸಂದರ್ಭದಲ್ಲಿ ಅಂಕಿ ಅಂಶಗಳನ್ನು ಸಂಕ್ಷೇಪವಾಗಿ ಕೊಡುವುದು ನನ್ನ ಕರ್ತವ್ಯವೆಂದು ಭಾವಿಸುತ್ತೇನೆ.

ಶ್ರೀ ಎ. ಭೀಮಪ್ಪನಾಯಕ್.—ಮುಂದೇನು ಮಾಡುತ್ತೀರಿ ಎಂದು ಹೇಳಿದರೆ ಸಾಕು. We have already admitted what you have done.

ಶ್ರೀ ಕಡಿದಾಳ್ ಮಂಜಪ್ಪ.—ಕ್ಷಾಮ ಪರಿಹಾರಕಾರ್ಯಗಳಿಗೆ–ರಿಲೀಫ್ ಕಾಮಗಾರಿಗಳಿಗಾಗಿ 35,35,000 ರೂಪಾಯಿಗಳನ್ನು ಹೋದ ವರ್ಷ ಸರ್ಕಾರದವರು ಒದಗಿಸಿದ್ದರು. ಆ ಪೈಕಿ 19,84,738 ರೂಪಾಯಿಗಳು ಖರ್ಚಾಗಿವೆ. ಆಮೇಲೆ ಮೇವು ಒದಗಿಸುವುದಕ್ಕೆ 5 ಲಕ್ಷದ 41 ಸಾವಿರ ರೂಪಾಯಿಗಳನ್ನು ಒದಗಿಸಿದ್ದರ ಪೈಕಿ 5 ಲಕ್ಷದ 30 ಸಾವಿರ ರೂಪಾಯಿಗಳು ಖರ್ಚಾಗಿವೆ ಜಿ. ಎಂ. ಎಫ್. ಯೋಜನೆಗಳಿಗಾಗಿ 41,51,000 ರೂಪಾಯಿಗಳನ್ನು ಒದಗಿಸಲಾಗಿತ್ತು. ಆ ಪೈಕಿ 40,30,546 ರೂಪಾಯಿಗಳಷ್ಟು ಖರ್ಚು ಮಾಡಿದೆ. ಇದಲ್ಲದೆ ರೆಡ್‌ಕ್ರಾಸ್ ಸಂಸ್ಥೆಯವರಿಗೆ 15,99,563 ರೂಪಾಯಿಗಳನ್ನು ದವಸಗಳನ್ನು ಕೊಂಡು ಒದಗಿಸುವುದಕ್ಕಾಗಿ ಕೊಟ್ಟಿತ್ತು. ಈ ಪೈಕಿ 3,94,402 ರೂಪಾಯಿಗಳ ದವಸ ಖರ್ಚಾಗಿದೆ. ಆಮೇಲೆ ಲ್ಯಾಂಡ್ ಇಂಪ್ರೂವ್‌ಮೆಂಟ್ ಲೋನ್‌ಗಳಿಗಾಗಿ ಎರಡು ಲಕ್ಷ ಚಿಲ್ಲರೆ ಹಣ ಕೊಟ್ಟಿದ್ದರಲ್ಲಿ ಹೆಚ್ಚುಕಡಮೆ ಅಷ್ಟೂ ಖರ್ಚಾಗಿದೆ. ತಕ್ಕಾವಿ ಸಾಲಗಳಿಗೆಂದು 11 ಲಕ್ಷ ಚಿಲ್ಲರೆ ಒದಗಿಸಿದ್ದರಲ್ಲಿ 10 ಲಕ್ಷ ಚಿಲ್ಲರೆ ಹಣ ಖರ್ಚಾಗಿದೆ. ಇವುಗಳೇ ಅಲ್ಲದೆ ಇರಿಗೇಷನ್ ಪಂಪುಗಳಿಗಾಗಿ 50 ಲಕ್ಷ ರೂಪಾಯಿಗಳನ್ನು ಹಂಚಿಕೆ ಮಾಡಿರುವುದು ಮಾನ್ಯ ಸದಸ್ಯರಿಗೇ ಗೊತ್ತಿದೆ. ಅಸ್ಸಾಂ ರಿಲೀಫ್ ಫಂಡಿನಿಂದ ಬೇರೆ ಖರ್ಚುಮಾಡಿದೆ. ಇಷ್ಟೆಲ್ಲಾ ಮಾಡಿದರೂ ಮಾನ್ಯಸದಸ್ಯರು ಕೆಲವರು ಚಿತ್ರದುರ್ಗ ಜಿಲ್ಲೆಯಲ್ಲಿ ಫ್ಯಾಮಿನ್ ರಿಲೀಫ್ ವರ್ಕ್ಸ್ ಏನೂ ನಡೆಸಿಲ್ಲವೆಂದು ಹೇಳಿದರು. ಫ್ಯಾಮಿನ್ ರಿಲೀಫ್ ಕಮಿಟಿಯು ಕೇಂದ್ರ ಸಮಿತಿಯು ಕಳೆದ, ತಿಂಗಳು ಸಭೆಸೇರಿದಾಗ ನಾನೇ ವಿಚಾರಿಸಿದ್ದರಲ್ಲಿ, ಚಿತ್ರದುರ್ಗ ಜಿಲ್ಲೆಯಲ್ಲಿ ನಾವು ಸೂಕ್ತ ರಿಲೀಫ್ ಕೂಲಿಯನ್ನು ಕೊಡುತ್ತಿದ್ದರೂ ಜನ ಕೂಲಿಗೇ ಬರುತ್ತಿಲ್ಲವೆಂದು ತಿಳಿಸಿದರು. ಆದರೆ ಅದೇ ಕೋಲಾರ ಜಿಲ್ಲೆಯಲ್ಲಿ ನೋಡುವುದಾದರೆ ಬೇಕಾದಷ್ಟು ಜನ ಈಗಲೂ ಇದೇ ಕೂಲಿಗೆ ಬರುತ್ತಿದ್ದಾರೆ. ಹಾಗೆಯೇ ತುಮಕೂರು ಜಿಲ್ಲೆಯಲ್ಲಿಯೂ ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡಬಹುದು. ಹೀಗಿರುವಾಗ ಚಿತ್ರದುರ್ಗ ಜಿಲ್ಲೆಯಲ್ಲೇಕೆ ಬರುವುದಿಲ್ಲ? ಹಣಕೊಡುವುದಕ್ಕೆ ತಯಾರಿದ್ದರೂ, ರಿಲೀಫ್ ಕೆಲಸ ಒದಗಿಸಲಿಕ್ಕೆ ತಯಾರಾಗಿದ್ದರೂ ಹಣವೇಕೆ ಖರ್ಚಾಗುತ್ತಿಲ್ಲವೆಂಬುದಕ್ಕೆ ಕಾರಣವನ್ನು ನೀವೇ ಊಹಿಸಬಹುದು.

ಆಮೇಲೆ ಪಬ್ಲಿಕ್ ವರ್ಕ್ಸ್ ಇಲಾಖೆಯ ವಿಚಾರದಲ್ಲಿ ಒಂದೆರಡು ಮಾತು ಗ್ರೋಮೋರ್ ಫುಡ್ ಕೆಲಸಕಾರ್ಯಗಳ ಬಗ್ಗೆ ಒಂದು ಮಾತಿನಲ್ಲಿ ಹೇಳುವುದಾದರೆ, ಕಳೆದ ಒಂದು ವರ್ಷದಿಂದ ಹೊಸದಾಗಿ 18,000 ಎಕರೆಗೆ ನೀರನ್ನು ಒದಗಿಸುವುದಕ್ಕೆ ಏರ್ಪಾಡು ಮಾಡಿದ್ದೇವೆ. ಸುಮಾರು 25,000 ಎಕರೆಗಳಿಗೆ assured water supply ಕೊಟ್ಟಿದ್ದೇವೆ. ಈ ಬಗ್ಗೆ ಬೇಕಾದರೆ ಅಂಕಿ ಅಂಶಗಳನ್ನು ಕೂಡ ಕೊಡಬಲ್ಲೆ.

ಶ್ರೀ ಎ. ಭೀಮಪ್ಪನಾಯಕ್.—ಎಲ್ಲಿ ಕೊಟ್ಟಿರುವುದು? ಎಲ್ಲಿಯೋ ಕೊಟ್ಟರೆ ನಮಗೇನಾದಹಾಗಾಯಿತು?

ಶ್ರೀ ಕಡಿದಾಳ್ ಮಂಜಪ್ಪ.—ಆ ಬಗ್ಗೆ ಅಂಕಿ ಅಂಶಗಳನ್ನು ತಿಳಿಸಿ ವಿವರಿಸಬಲ್ಲೆ ಆದರೆ ಅದಕ್ಕೆ ಕಾಲಾವಕಾಶವಿಲ್ಲ.

ಕೊನೆಯದಾಗಿ ಒಂದು ಮಾತು. ಇಂಡಿಯಾ ದೇಶದಲ್ಲಿ ಇತರ ಸಂಸ್ಥಾನಗಳಲ್ಲಿಯೂ ಕೆಲವುಕಡೆ ಹೀಗೆ ಕ್ಷಾಮ ಪರಿಸ್ಥಿತಿಯಿದೆ. ಮಾನ್ಯ ಸದಸ್ಯರುಗಳು ಬೇಕಾದರೆ ಆ ಪ್ರಾಂತಗಳಿಗೂ ಹೋಗಿ ಸಂಚಾರ ಮಾಡಿಕೊಂಡು ಬಂದು ಹೇಳಬಹುದು. ಮೈಸೂರು ಸಂಸ್ಥಾನದಲ್ಲಿ ಕ್ಷಾಮ ಪರಿಹಾರದ ಬಗ್ಗೆ ಕೈಕೊಂಡಿರುವ ಕೆಲಸಕಾರ್ಯಗಳು ಇತರ ಕಡೆಗಳಲ್ಲಿ ಕೈಕೊಂಡಿರುವ ಕಾರ್ಯಕ್ರಮಗಳಿಗಿಂತ ಎಷ್ಟೋ ಉತ್ತಮ ತರದ್ದಾಗಿವೆಯೆಂದು ಎಷ್ಟೋ ಜನರು ಹೇಳಿದ್ದಾರೆ. ಈಗ್ಯೂ ಮದ್ರಾಸ್ ಪ್ರಾಂತದಲ್ಲಿ ಕ್ಷಾಮ ಪರಿಹಾರದ ಬಗ್ಗೆ ಖರ್ಚುಮಾಡಿದ್ದರೂ ಅಲ್ಲಿಂದ ಅನೇಕ ಜನರು ನಮ್ಮ ಸಂಸ್ಥಾನಕ್ಕೆ ಬರುತ್ತಿದ್ದಾರೆ.

ಒಟ್ಟಿನಲ್ಲಿ, ಸರ್ಕಾರದವರು ಏನೇನು ಸಾಧ್ಯವೋ ಅದನ್ನೆಲ್ಲಾ ಮಾಡುತ್ತಿದ್ದಾರೆ. ಅಲ್ಲದೆ ಸರ್ಕಾರದವರ ಸಾಧನ ಸಂಪತ್ತುಗಳಿಗೂ ಒಂದು ಮಿತಿಯಿದೆಯೆಂದು ಮಾನ್ಯಸದಸ್ಯರೂ ಗಮನಿಸಬೇಕೆಂದು ಅತಿವಿನಯದಿಂದ ನಾನು ಮಾನ್ಯಸದಸ್ಯರಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ಏಕೆಂದರೆ, ನಮ್ಮ ಸಂಸ್ಥಾನದಲ್ಲೇ ಇತರ ಜಿಲ್ಲೆಗಳ ಕಡೆಗೂ ಸರ್ಕಾರದವರು ಗಮನ ಕೊಡಬೇಕಾಗಿದೆ. ಉದಾಹರಣೆಗೆ ಶ್ರೀ ತಿಮಪ್ಪಗೌಡರು ಮಲೆನಾಡಿನವರ ವಿಚಾರ ಪ್ರಸ್ತಾಪಮಾಡಿದ್ದಾರೆ. ಅಲ್ಲಿಯೂ ಬಹಳ ಕಷ್ಟವಿದೆ ಅವರಿಗೂ ಕೊಂಡುಕೊಳ್ಳುವ ಕಷ್ಟವಿದೆ. ಕಳೆದ $1\frac{1}{2}$ ವರ್ಷದಿಂದ ನಾವುಗಳು ಸಂಸ್ಥಾನದ ಕೆಲವು ಭಾಗಗಳಿಗೆ ಹೆಚ್ಚಿಗೆ ಗಮನ ಕೊಟ್ಟು ಅಲ್ಲಿಗೇ ಬಹುಭಾಗದ ಹಣ ಕೊಟ್ಟಿದ್ದರಿಂದ

(ಶ್ರೀ ಕಡಿದಾಳ್ ಮಂಜಪ್ಪ.)

ಇತರ ಕಡೆಗಳಿಗೆ ಹೆಚ್ಚಿಗೆ ಹಣ ಕೊಡಲು ಸಾಧ್ಯವಾಗಲಿಲ್ಲ. ಈ ಸಾರಿ ಪಾಂಡವಪುರದ ಪ್ರಶ್ನೆಯೊಂದು ನಮ್ಮ ಮುಂದೆ ಬಂದಿತ್ತು. ಅಲ್ಲಿ ಇಡೀ ತಾಲ್ಲೂಕಿಗೆ ಒಂದು ವರ್ಷಕ್ಕೆ 3,000 ರೂಪಾಯಿಗಳನ್ನು ಮಾತ್ರ ಖರ್ಚುಮಾಡಿದ್ದೇವೆಂದರೆ ಅವರಿಗೇನು ಜವಾಬು ಹೇಳೋಣ!

ಇಷ್ಟು ಹೇಳಿ ಸರ್ಕಾರದವರು ಅಲ್ಲಿಗೆ ಏನೇನು ರಿಲೀಫ್ ಕಾಮಗಾರಿಗಳನ್ನು ಒದಗಿಸಬೇಕಾದರೂ ಅದಕ್ಕೆ ಸದಾಸಿದ್ಧವಾಗಿದ್ದಾರೆ. ರೀಲೀಫ್ ಕಾಮಗಾರಿಗೆ ಬೇಕಾದ ಹಣ ಕೊಡುವುದಕ್ಕೂ ಸಿದ್ಧವಾಗಿದ್ದಾರೆ. ತಾವುಗಳೂ ಸ್ಥಳೀಯ ಅಧಿಕಾರಿಗಳೊಡನೆ ಸಹಕರಿಸಿ ಈ ಪರಿಹಾರ ಜನರಿಗೆ ಒದಗಿಸುವ ಅವಕಾಶ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ಸಿದ್ಧವೀರಪ್ಪ.—ಶ್ರೀ ಇಮಾಂ ಸಾಹೇಬರು ಹೇಳಿದಹಾಗೆ ಸಂತೆಗಳಲ್ಲಿ ಹೋಗಿ ವಾರಾಟಮಾಡುವುದಕ್ಕೆ ಸರ್ಕಾರದವರು ಏರ್ಪಾಡು ಮಾಡುವವರಾಗಿದ್ದಾರೆ. ಹಾಗೆಯೇ ವಿಲೇಜ್ ಪಂಚಾಯಿತಿಗಳಲ್ಲಿ ಯಾರು ಯಾರು ಮುಂದೆ ಬಂದರೂ ಅವರಿಗೆ ಬೇಕಾದಷ್ಟು ಕಾಳನ್ನು ಕೊಟ್ಟು ಬೇಕಾದ ಸಹಾಯವನ್ನು ಮಾಡಲು ಕೂಡಲೆ ಪ್ರಯತ್ನಮಾಡುತ್ತೇವೆ. ಕಾಳು ಈಗ ನಮ್ಮಲ್ಲಿ ಬೇಕಾದಷ್ಟಿದೆ. ಯಾರೂ ಎದೆ ಹೊಡೆದುಕೊಳ್ಳಬೇಕಾಗಿಲ್ಲ.

ನೂಲಿನ ವಿಚಾರದಲ್ಲಿಯೂ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ. ಈ ವರ್ಷವೂ ಖಾದಿಗೆ ಒಂದು ಲಕ್ಷ ರೂಪಾಯಿಗಳನ್ನು ತೆಗೆದಿಟ್ಟಿದ್ದೇವೆ. ಇವೆಲ್ಲ ಉಪಯೋಗಿಸಿಕೊಂಡು ಏನೇನು ಕೆಲಸಮಾಡುವುದಕ್ಕೆ ಸಾಧ್ಯವೋ ಅಷ್ಟನ್ನೂ ಮಾಡುತ್ತೇವೆ. ಆದರೆ ಮಾನ್ಯಸದಸ್ಯರು ಮಾತ್ರ ಯಾವ ಸಂದರ್ಭವನ್ನು ಉತ್ಪ್ರೇಕ್ಷೆ ಮಾಡಕೂಡದೆಂದು ಪ್ರಾರ್ಥನೆಮಾಡುತ್ತೇನೆ.

Mr. SPEAKER.—As per Rule 45, no question shall be put.

PAPERS LAID ON THE TABLE.

SUPPLEMENTARY ESTIMATES FOR 1953-54.

Sri H. SIDDAVEERAPPA (Minister for Home and Industries).—I beg to lay on the Table of the House the supplementary estimates for the year 1953-54.

Mr. SPEAKER.—Copies will be distributed in the course of the day and notice of cut motions may be given till 3 P.M. to-morrow.

Sri A. BHEEMAPPA NAIK.—The time is so short.

Mr. SPEAKER.—Till 3 P.M. to-morrow. They say the time is short. What is the Government's view ?

Sri H. SIDDAVEERAPPA.—As you were pleased to observe, it has been placed in the other House also.

Mr. SPEAKER.—The Hon'ble Members may oblige. It is only about additional grants. To-morrow we will continue discussion on the Bills left over.

Sri J. MOHAMED IMAM.—Discussion on Educational Reforms is put down for to-morrow.

Mr. SPEAKER.—That is for Thursday. The House will now rise for the day and meet to-morrow at 12 NOON.

The House adjourned at Fifty-two Minutes past Five of the Clock to meet again at 12 of the Clock on Wednesday the 15th July 1953.

WD 4516—GPB—500—5-2-54